ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ, ೧೧ನೇ ಮಾರ್ಚಿ ೧೯೮೬, ಫಾಲ್ಗುಣ ೨೦, ೧೯೦೭ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ, ಬೆಳಿಗ್ಗೆ ೯-೦೦ ಗಂಟೆ ೧೩ ನಿಮಿಷಕ್ಕೆ ಸಮಾವೇಶಗೊಂಡಿತು.

[ಅಧ್ಯಕ್ಷರು : (ಶ್ರೀ ಬಿ. ಜಿ. ಬಣಕಾರ್ ರವರು) ಪೀಠದಲ್ಲಿದ್ದರು]

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ

ಬೇಡಿಕೆ ಕ್ರಮ ಸಂಖ್ಯೆ ೬೧

(ಕಾರ್ಮಿಕ ಮತ್ತು ಉದ್ಯೋಗ ಇಲಾಖೆ—ಸಚಿವರಿಂದ ಉತ್ತರ)

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಕಾರ್ಮಿಕ ಇಲಾಖೆಯ ಬೇಡಿಕೆಯ ಬಗ್ಗೆ ಹೆಚ್ಚು ಜನ ಸದಸ್ಯರು ಮಾತನಾಡಿದ್ದಾರೆ. ಕಳೆದ ವರ್ಷ ಕಡಿಮೆ ಸದಸ್ಯರು ಈ ಬೇಡಿಕೆಯ ಬಗ್ಗೆ ಮಾತನಾಡಿದ್ದರು. ಮಾತನಾಡಿದಂತಹ ಎಲ್ಲಾ ಸದಸ್ಯರು ಅತಿಮುಖ್ಯವಾಗಿ ಅಸಂಘಟಿತ ಕಾರ್ಮಿಕರ ಬಗ್ಗೆ ಹೇಳಿದ್ದಾರೆ. ಅವರ ಬಗ್ಗೆ ಸರ್ಕಾರ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ಕಳೆದ ವರ್ಷ ಕನಿಷ್ಟ ಕಾಯಿದೆ ಪ್ರಕಾರ ನಾವು ಮಿನಿಮಂ ವೇಜಸ್ ಬೋರ್ಡನ್ನು ಕಾನ್ಸ್ಟಿಟ್ಯೂಟ್ ಮಾಡಿದ್ದೇವೆ. ಆ ಬೋರ್ಡ್‌ನವರು ಕೆಲಸವನ್ನು ಮಾಡಿದ್ದಾರೆ. ಕೆಲವು ವೃತ್ತಿಗಳ ಬಗ್ಗೆ ಕೆಲವು ನೋಟಿಫಿಕೇಷನ್‌ಗಳನ್ನು ಹಾಕಿದ್ದಾರೆ. ಇದರಲ್ಲಿ ಅತಿ ಮುಖ್ಯವಾಗಿ ಹಿಂದೆ ಹೈಕೋರ್ಟ್‌ನಿಂದ ಕೆಲವು ವೃತ್ತಿಗಳ ಬಗ್ಗೆ ನಮಗೆ ಅನಾಮಲೀಸ್ ಇದೆಯೆಂದು ಕಳುಹಿಸಿದ್ದಾರೆ. ಅದರ ಬಗ್ಗೆ ವೇಜ್ ಬೋರ್ಡ್ ಮುಂದೆ ಚರ್ಚೆ ಮಾಡಿ ಕಾನೂನು ಪ್ರಕಾರವಾಗಿ ಫೈನಲ್ ನೋಟಿಫಿಕೇಷನ್ ಹಾಕಿದ್ದೇವೆ. ಈಗ ಅಸಂಘಟಿತ ಕಾರ್ಮಿಕರು ಜಾಸ್ತಿ ಇದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಮೊನ್ನೆ ತಾನೇ ಅಸಂಘಟಿತ ಕಾರ್ಮಿಕರು ಕಾರ್ಮಿಕ ಮುಖಂಡರು ಐದಾರು ಸಾವಿರ ಜನ ಬೆಂಗಳೂರಿಗೆ ಬಂದಿದ್ದರು. ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರ ಸಮಸ್ಯೆಗಳು ಜಾಸಿ ಇವೆ ಅವರ ಬಗ್ಗೆ ಆಸಕ್ತಿ ವಹಿಸಿ ಸರ್ಕಾರ ಕೆಲಸ ಮಾಡಿದೆ. ಒಂದು ಪ್ರಶ್ನೆ ಏನೆಂದರೆ ನಾವು ಅನೇಕ ತೀರ್ಮಾನಗಳನ್ನು ಮಾಡಿದ ಮೇಲೆ ಅನೇಕರು ಕೋರ್ಟ್‌ಗೆ ಹೋಗುತ್ತಿದ್ದಾರೆ. ಕಳೆದ ಸಲ ಕೂಡ ಹೀಗೆ ಆಯಿತು. ಆದರೂ ಸಹಿತ ವೇಜ್ ಬೋರ್ಡ್‌ನವರು ಕಷ್ಟಪಟ್ಟು ಕೆಲಸ ಮಾಡಿ ಆದಷ್ಟು ಜಾಗ್ರತೆ ಅವರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಸರ್ಕಾರ ಕೆಲಸ ಮಾಡುತ್ತಿದೆ. ಮಾನ್ಯ ಸದಸ್ಯರಾದ ಮಣಿಯುವರು ಮಾತನಾಡುತ್ತಾ ದಿನಗೂಲಿ ನೌಕರರು ಏನಿದ್ದಾರೆ ಅವರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲವೆಂದು ಹೇಳಿದ್ದಾರೆ. ದಿನಗೂಲಿಯ ಮೇಲೆ ಲೋಕೋಪಯೋಗಿ ಇಲಾಖೆಯಲ್ಲಿ ಬಹಳ ಜನ ಕೆಲಸ ಮಾಡುತ್ತಿದ್ದಾರೆ. ಅವರು ಸುಪ್ರೀಂ ಕೋರ್ಟ್‌ಗೆ ತಮ್ಮ ನ್ಯಾಯವನ್ನು ತೆಗೆದುಕೊಂಡು ಹೋಗಿ, ಸುಪ್ರೀಂ.ಕೋರ್ಟ್‌ನಲ್ಲಿ ಏನು ಜಡ್ಜ್‌ಮೆಂಟ್ ಆಗಿದೆ ಅದಕ್ಕೆ ಸರ್ಕಾರ ಮನ್ನಣೆ ಕೊಟ್ಟಿದೆ. ಈಗಾಗಲೇ ಅನೇಕರು ಕೆಲಸಕ್ಕೆ ಸೇರಿದ್ದಾರೆ. ಶನಿವಾರ, ಭಾನುವಾರ ಅವರಿಗೆ ವೇಜಸ್ ಕೊಡುತ್ತಿಲ್ಲವೆಂಬ ವಾದ ಇದೆ. ಇದರ ಬಗ್ಗೆ

ಸಂಬಂಧಪಟ್ಟ ಇಲಾಖೆಯವರೊಡನೆ ಮಾತನಾಡಿದ್ದೇನೆ. ಡೈಲಿ ವೇಜಸ್ ಕೊಡುವುದಕ್ಕೆ ಅವರು ಖಾಯಂ ನೌಕರರು ಅಲ್ಲ, ಅವರನ್ನು ಯಾವ ರೀತಿ ರೆಗ್ಯುಲರೈಸ್ ಮಾಡುತ್ತಾರೋ ಗೊತ್ತಿಲ್ಲ. ಶನಿವಾರ ಭಾನುವಾರ ವೇಜಸ್ ಕೊಡುತ್ತಿಲ್ಲವೆಂಬ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಅದರ ಬಗ್ಗೆ ನಾನು ಸಂಬಂಧಪಟ್ಟ ಇಲಾಖೆಯವರೊಡನೆ ಮಾತನಾಡುತ್ತೇನೆ. ಎಲ್ಲಾ ಸದಸ್ಯರು ಲೇಬರ್ ಕೋರ್ಟುಗಳಲ್ಲಿ ಡಿಸ್‌ಪ್ಯೂಟ್ಸ್ ಲೇಟ್ ಆಗುತ್ತಿದೆ ಎಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ನಾನು ವಕೀಲನಾಗಿ ನನಗೆ ಗೊತ್ತಿದೆ. ಲೇಬರ್ ಕೋರ್ಟಿನಲ್ಲಿ ಕೇಸ್ ನಡೆಸುವುದಕ್ಕೂ ಕ್ರಿಮಿನಲ್ ಕೋರ್ಟಿನಲ್ಲಿ ಕೇಸ್ ನಡೆಸುವುದಕ್ಕೂ ವ್ಯತ್ಯಾಸ ಇದೆ. ಲೇಬರ್ ಕೋರ್ಟಿನಲ್ಲಿ ಸ್ವಲ್ಪ ತಡವಾಗುತ್ತದೆ. ತಡವಾಗುವುದನ್ನು ನಾನು ಒಪ್ಪುವುದಿಲ್ಲ. ಆದರೆ ನಮ್ಮಲ್ಲಿ ಏನಾಗಿದೆ ಎಂದರೆ ೭ ಲೇಬರ್ ಕೋರ್ಟುಗಳು ಇವೆ, ೩ ಇಂಡಸ್ಟ್ರಿಯಲ್ ಟ್ರಿಬ್ಯುನಲ್‌ಗಳು ಇವೆ. ಇನ್ನೊಂದು ಲೇಬರ್ ಕೋರ್ಟನ್ನು ಮತ್ತು ಒಂದು ಟ್ರಿಬ್ಯುನಲ್ ಅನ್ನು ಚಿಕ್ಕಮಗಳೂರಿನಲ್ಲಿ ಸ್ಥಾಪಿಸುವ ವ್ಯವಸ್ಥೆ ಆಗಬೇಕೆಂದು ಸರ್ಕಾರಕ್ಕೆ ಒತ್ತಾಯ ಮಾಡಿದ್ದೇನೆ. ಪ್ರಿಸೈಡಿಂಗ್ ಆಫೀಸರ್ಸ್ ಕರೆದು ಮಾತನಾಡಿ ಜಾಗ್ರತೆ ವಿವಾದವನ್ನು ಬಗೆಹರಿಸಬೇಕೆಂದು ತಿಳಿಸಿದ್ದೇನೆ. ಪ್ರತಿಯೊಂದು ಜಿಲ್ಲೆಯಲ್ಲೂ ಲೇಬರ್ ಕೋರ್ಟ್ ಆಗಬೇಕೆಂದು ಸದಸ್ಯರು ಹೇಳಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲಿ ಮಾಡುವುದು ಕಷ್ಟವಾಗಬಹುದು. ಅವಶ್ಯಕವಾಗಿ ಬೇಕಾದ ಕಡೆ ಮಾಡಲು ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇವರ ಮಾತು ಇದೇ ತರಹ ಹೋದರೆ ಕಷ್ಟವಾಗುತ್ತದೆ. ಪ್ರಥಮ ಸಾರಿ ಹೇಳಿದಿರಿ ಶನಿವಾರ, ಭಾನುವಾರ ವೇಜ್ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ, ಶಿಫಾರಸ್ಸು ಮಾಡುತ್ತೇನೆಂದು. ೨ನೇ ವಿಷಯ ತೆಗೆದುಕೊಳ್ಳುವಾಗ ಇನ್ನೊಂದು ಹೊಸ ಲೇಬರ್ ಕೋರ್ಟನ್ನು ಮಾಡಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇನೆಂದು. ಇದು ಚರ್ಚೆಗೆ ಸೂಕ್ತವಾದ ಉತ್ತರ ಅಲ್ಲ ಅನ್ನಿಸುತ್ತದೆ. ತಾವು ಒತ್ತಾಯ ಮಾಡಲಿಕ್ಕೆ ಮಾಜಿ ಮಂತ್ರಿಗಳು ಅಲ್ಲ, ಹಾಲಿ ಅಧಿಕಾರದಲ್ಲಿರತಕ್ಕ ಮಂತ್ರಿಗಳು ಇದು ನನ್ನ ಸಲಹೆ.

ಶ್ರೀ ಡಿ. ಮಂಜುನಾಥ್.—ಅದನ್ನು ನಾನು ಒಪ್ಪುತ್ತೇನೆ. ನಮ್ಮ ಇಲಾಖೆಯ ಅಭಿಪ್ರಾಯವನ್ನು ಸರ್ಕಾರದ ಮುಂದೆ ಇಡಬೇಕು ಅಂದರೆ ಕ್ಯಾಬಿನೆಟ್ ಮುಂದೆ ನಾನು ತರಬೇಕು. ಮಂಜೂರ್ ಮಾಡಿಸಬೇಕೆಂಬ ಅರ್ಥದಲ್ಲಿ ಹೇಳಿದೆನೇ ಹೊರತು ಬೇರೆ ಅಲ್ಲ. ಆದರೂ ಸಹ ಡಿಸ್‌ಪ್ಯೂಟ್ಸ್ ಬಹಳ ಇವೆ ಎಂಬುದನ್ನು ಸದಸ್ಯರ ಗಮನಕ್ಕೆ ತರುತ್ತೇನೆ. ಅಧ್ಯಕ್ಷಾಂತಯ್ಯನವರು ಒಂದು ಮಾತು ಹೇಳಿದರು ಕನ್ಸಲಿಯೇಷನ್ ಆದಮೇಲೆ ಸರ್ಕಾರಕ್ಕೆ ಹೋಗಿ, ಸರ್ಕಾರದಿಂದ ಡಿಸ್‌ಪ್ಯೂಟ್ಸ್ ಲೇಬರ್ ಕೋರ್ಟಿಗೆ ರೆಫರ್ ಆಗಬೇಕು ಎಂದು. ಈ ದಿಸೆಯಲ್ಲಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಟರ್ಮಿನೇಷನ್ ಅಥವಾ ಡಿಸ್‌ಮಿಸ್ ಆದರೆ ಯಾರಿಗೆ ತೊಂದರೆಯಾಗುತ್ತದೆ ಅವರು ನೇರವಾಗಿ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಅದು ಅಮೆಂಡ್‌ಮೆಂಟ್ ಆಗಿ ಕೇಂದ್ರ ಸರ್ಕಾರದ ಮುಂದಿದೆ, ಇಷ್ಟರಲ್ಲೇ ಬರುತ್ತದೆ, ನಾನು ನಿನ್ನೆ ದಿವಸ ಚರ್ಚೆ ಮಾಡಿದ ವಿಷಯಗಳ ಬಗ್ಗೆ ಹೇಳುತ್ತಿದ್ದೇನೆ. ಪ್ರತಿಯೊಬ್ಬ ಸದಸ್ಯರೂ ಹೇಳಿದ್ದಕ್ಕೆ ಆಮೇಲೆ ಉತ್ತರಿಸುತ್ತೇನೆ, ಉದ್ಯೋಗ ವಿನಿಮಯ ಕೇಂದ್ರದಲ್ಲಿ ಇವತ್ತು ಬಹಳ ಜನ ನೋಂದಾಯಿಸಿದವರಿಗೆ ಕೆಲಸ ಸಿಕ್ಕಿಲ್ಲವೆಂದು ಹೇಳಿದ್ದಾರೆ. ಇವರ ಬಗ್ಗೆ ಅನೇಕ ಸಾರಿ ಹೇಳಿದ್ದೇನೆ. ಉದ್ಯೋಗ ವಿನಿಮಯ ಕೇಂದ್ರದಲ್ಲಿ ಈ ಸರಳೀಕರಣ ಮಾಡಿದ್ದೇವೆ. ಮೊದಲು ೬ ತಿಂಗಳಿಗೆ ಒಂದು ಸಾರಿ ರಿನ್ಯೂ ಮಾಡಬೇಕೆಂದು ಇತ್ತು, ಈಗ ೩ ವರ್ಷಕ್ಕೊಮ್ಮೆ ನೋಂದಾಯಿಸಬೇಕೆಂದು ಮಾಡಿದ್ದೇವೆ. ಹಿಂದೆ ೬ ತಿಂಗಳಿಗೆ ಒಂದು ಸಾರಿ ರಿನ್ಯೂ ಆಗದಿದ್ದರೆ ಹೆಸರನ್ನು ಕಿತ್ತು ಹಾಕುತ್ತಿದ್ದರು, ಉದ್ಯೋಗ ವಿನಿಮಯ ಕೇಂದ್ರದ ಜೊತೆಗೆ ಸರ್ಕಾರದಲ್ಲಿ ಅನೇಕ ನೇಮಕಾತಿ ಸಮಿತಿಗಳನ್ನು ಮಾಡಿದ್ದೇವೆ. ಪಬ್ಲಿಕ್ ಸರ್ವೀಸ್ ಕಮೀಷನ್ ಕೂಡ ಇದೆ. ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸಿದ್ದವರು ಅಲ್ಲಿಗೆ ಸಂದರ್ಶನಕ್ಕೆ ಹೋಗುತ್ತಾರೆ. ಕೆಲಸ ಸಿಗುತ್ತದೆ. ಕೆಲಸ ಸಿಕ್ಕಿದ ಮೇಲೂ ಉದ್ಯೋಗ ವಿನಿಮಯ ಕೇಂದ್ರಕ್ಕೆ ಕೆಲಸ ಸಿಕ್ಕಿದೆ ಎಂದು ತಿಳಿಸುತ್ತಿಲ್ಲ. ತಿಳಿಸಿದರೆ ಹೆಸರನ್ನು ತೆಗೆದು ಹಾಕಬಹುದು. ಅದಕ್ಕೋಸ್ಕರ ಒಂದು ತೀರ್ಮಾನ ಮಾಡಿ ಎಲ್ಲಾ ಇಲಾಖೆಯವರಿಗೂ ಮತ್ತು ಲೋಕಸೇವಾ ಆಯೋಗದವರಿಗೂ ಬರೆದಿದ್ದೇವೆ. ಅದೇನೆಂದರೆ, ನಿಮ್ಮ ಅರ್ಜಿ ನಮೂನೆಯಲ್ಲಿ ಒಂದು ಕಲಂ ಹಾಕಿ ಯಾರು ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಾಯಿಸುತ್ತಾರೆ ಅಂಥವರು ನಂಬರ್ ಕೊಡಬೇಕೆಂದು ಮಾಡಿ ಎಂದು ಹೇಳಿದ್ದೇವೆ. ರಿಕ್ರೂಟ್‌ಮೆಂಟ್ ಫಾರಂನಲ್ಲೇ ಇದನ್ನು ಹಾಕಬೇಕೆಂದು ಮಾಡಿದ್ದೇವೆ. ಬಹುಶಃ

ಮುಂದಿನ ಸಾರಿಯಿಂದ ಇದು ಜಾರಿಗೆ ಬರಬಹುದು. ಕಳೆದ ವರ್ಷ ೧೮ ಸಾವಿರ ಜನ ಶಿಕ್ಷಕರ ನೇಮಕವಾಯಿತು. ಸಾಮಾನ್ಯವಾಗಿ ಎಲ್ಲಾ ಜಿಲ್ಲಾ ನೇಮಕಾತಿ ಸಮಿತಿಗಳಲ್ಲೂ ಆಯಿತು. ಆ ೧೮ ಸಾವಿರ ಮಂದಿಯ ಹೆಸರುಗಳು ಇನ್ನೂ ಉದ್ಯೋಗ ವಿನಿಮಯ ಕೇಂದ್ರದಲ್ಲಿವೆ. ಕೇಂದ್ರದಲ್ಲಿ ನಂಬರ್ ಮಾಡಿಸಿರುವವರು ೯ ಲಕ್ಷ ಚಿಲ್ಲರೆ ಜನರಿದ್ದಾರೆ. ಬಹುತೇಕವಾಗಿ ಅವರಿಗೆ ಕೆಲಸ ಸಿಕ್ಕಿದೆ. ಉದ್ಯೋಗ ವಿನಿಮಯ ಕೇಂದ್ರದ ಕೆಲಸ ಗೈಡೆನ್ಸ್ ಕೊಡುವುದು ಅಷ್ಟೆ. ಸೆಲ್ಫ್ ಎಂಪ್ಲಾಯ್‌ಮೆಂಟ್ ಸ್ಕೀಂನವರಿಗೂ ಗೈಡೆನ್ಸ್ ಕೊಡುತ್ತಿದೆ. ಕೆಲಸ ಇಂಥ ಕಡೆ ಸಿಕ್ಕುತ್ತದೆಂದು ತೋರಿಸುತ್ತದೆ. ಉದ್ಯೋಗ ಇರುವ ಕಡೆಗೆ ಹೆಸರು ಕಳುಹಿಸುತ್ತದೆ. ಇವತ್ತಿನ ದಿವಸ ಅಲ್ಲಿ ನೋಂದಾಯಿಸುತ್ತಿರುವವರ ಸಂಖ್ಯೆ ಜಾಸ್ತಿ ಕಾಣುತ್ತದೆ. ಸ್ಟೈಪೆಂಡರಿ ಪದವೀಧರರು ಈಗ ಸ್ವಲ್ಪ ಕಡಿಮೆಯಾಗುತ್ತಿದ್ದಾರೆ. ಈ ವರ್ಷದಲ್ಲಿ ಅವರಿಗೆ ಕೆಲಸ ಸಿಗುತ್ತದೆ. ೫೦ ಪರ್ಸೆಂಟ್ ಲೋಕಲ್ ಕ್ಯಾಂಡಿಡೇಟ್ಸ್ ಮತ್ತು ಸ್ಟೈಪೆಂಡರಿಯವರಿಗೆ ಕೆಲಸ ಕೊಡಬೇಕೆಂದು ಸರ್ಕಾರ ಮಾಡಿರುವುದರಿಂದ ೧೧ ಲಕ್ಷ ಇದ್ದದ್ದು ೯ ಲಕ್ಷಕ್ಕೆ ಇಳಿದಿದೆ. ವೆಂಕಟರಾಮಯ್ಯನವರು ಹೇಳಿದರು, ಅವರಿಗೆ ಏಜ್ ಬಾರ್ ಆಗುತ್ತಿದೆ ಎಂದು, ಅದರ ಬಗ್ಗೆ ಮುಖ್ಯ ಮಂತ್ರಿಗಳು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಅಡ್ಯಂತಯ್ಯನವರು ಕಾರ್ಮಿಕ ಮುಖಂಡರು. ಅವರು ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ಇಲಾಖೆ ಬಹಳ ಸಮಸ್ಯೆಗಳನ್ನುಳ್ಳ ಇಲಾಖೆ. ಪ್ರತಿ ದಿವಸ ಸಮಸ್ಯೆಗಳು ಉದ್ಭವವಾಗುತ್ತಿವೆ. ಕಾಯಿದೆಗಳು ಬಹಳ ಇವೆ. ಈ ಇಲಾಖೆಯಲ್ಲಿರುವಷ್ಟು ಕಾಯಿದೆಗಳು ಬೇರೆ ಯಾವ ಇಲಾಖೆಯಲ್ಲೂ ಇಲ್ಲ. ಈ ದಿಸೆಯಲ್ಲಿ ಮಾನ್ಯ ಸದಸ್ಯರಾದ ಅಡ್ಯಂತಯ್ಯನವರು ಹೇಳಿದ ಪ್ರಕಾರ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ಇಲ್ಲಿ ಮೋಟಿವೇಷನ್ ಸರಿ ಇಲ್ಲ. ಕೆಲಸ ಮಾಡುತ್ತಿಲ್ಲವೆಂದರು. ನಾನು ಬೇರೆ ರಾಜ್ಯಗಳನ್ನು ನೋಡಿದ್ದೇನೆ. ನಮ್ಮಲ್ಲಿರುವ ಸಿಬ್ಬಂದಿಯಲ್ಲಿ ಕಾಯಿದೆಯ ಇತಿಮಿತಿಯಲ್ಲಿ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಎಲ್ಲವನ್ನು ಮಾಡಿದ್ದೇವೆಂದು ಹೇಳುವುದಿಲ್ಲ. ಲೇಬರ್ ಇಲಾಖೆಯಲ್ಲಿ ಲೇಬರ್, ಡಿಸ್‌ಪ್ಯೂಟ್ಸ್ ಬಗೆಹರಿಯಬೇಕಾದರೆ ಕಾರ್ಮಿಕ ವರ್ಗ ಮತ್ತು ಆಡಳಿತ ವರ್ಗ ಇವರಿಬ್ಬರೂ ಸೇರಿ ಒಂದು ತೀರ್ಮಾನಕ್ಕೆ ಬಂದರೆ ಮಾತ್ರ ಸಾಧ್ಯವಿದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ಸ್ ಆಕ್ಟ್ ಪ್ರಕಾರ ಸರ್ಕಾರಕ್ಕೆ ಅಧಿಕಾರ ಇಲ್ಲವೆಂಬುದು ಅಡ್ಯಂತಯ್ಯನವರಿಗೆ ಗೊತ್ತಿದೆ. ನಾವು ಆ ಕಾಯಿದೆಯ ಇತಿಮಿತಿಯಲ್ಲಿ ಕೆಲಸ ಮಾಡಬೇಕು. ನಾವು ಕನ್ಸಿಲಿಯೇಷನ್ ಮಾಡುತ್ತಿದ್ದೇವೆ. ಕಾರ್ಮಿಕ ವರ್ಗ ಮತ್ತು ಮಾಲೀಕರನ್ನು ಕೂಡಿಸಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ನೀವು ವಿಧಾನಸೌಧದವರೆಗೆ ಬರಬೇಡಿ. ನಿಮ್ಮ ನಿಮ್ಮಲ್ಲೇ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯತೆ ಇದೆ, ಮಾಡಿ ಎಂದು ಹೇಳಿದ್ದೇವೆ. ಅವರ ಹೊಂದಾಣಿಕೆಯಾಗುವುದಕ್ಕೆ ಪ್ರಯತ್ನ ಮಾಡಿದ್ದೇವೆ. ೩–೪ ಸೆಮಿನಾರ್ ಮಾಡಿಸಿದ್ದು ಆಯಿತು. ಕಾರ್ಮಿಕರು ಮತ್ತು ಮಾಲೀಕರನ್ನು ಕೂಡಿಸಿ ವಿವಾದಗಳನ್ನು ಬಗೆಹರಿಸುವುದಕ್ಕೆ ಯಾವ ಯಾವ ರೀತಿ ಮಾಡಿದರೆ ಒಡಂಬಡಿಕೆ ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇವೆ ಎಂಬುದನ್ನು ಮಾಡಿದ್ದು ಆಗಿದೆ, ಅವರಲ್ಲೂ ಎರಡು ಕಾಲು ಜಡ್ಡು ಹಿಡಿದಿದೆ. ಆದರೆ ನಾವು ಜಡ್ಡು ಹಿಡಿಯುವುದಕ್ಕೆ ಬಿಡುವುದಿಲ್ಲ. ನಮ್ಮ ಇಲಾಖೆಯ ವರದಿಯನ್ನು ನೋಡಿದಾಗ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ ಎಂಬುದು ಗೊತ್ತಾಗುತ್ತದೆ. ಅಧಿಕಾರಿಗಳನ್ನು ಒತ್ತಾಯಿಸಿ ಯಾವುದೇ ವಿಷಯ ನಿಮ್ಮ ಗಮನಕ್ಕೆ ಬಂದಾಗ ಆದಷ್ಟು ಜಾಗ್ರತೆ ನೀವು ಅವರನ್ನು ಕರೆಸಿ ಮಾತನಾಡಬೇಕೆಂದು ಹೇಳಿದ್ದೇವೆ. ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದೇವೆ. ಇಂದು ಅಂಕಿ ಸಂಖ್ಯೆಗಳನ್ನು ನೋಡಿದಾಗ ಲಾಕ್‌ಔಟ್ಸ್ ಮತ್ತು ಸ್ಟ್ರೈಕ್ಸ್ ಬಹಳ ಕಡಿಮೆ ಆಗಿದೆ. ಅಡ್ಯಂತಯ್ಯನವರು ಹೇಳಿದರು, ಕೆಎಸ್‌ಆರ್‌ಟಿಸಿ ಡಿಸ್‌ಪ್ಯೂಟ್ ಏನಿದೆ ಇದು ಬೆಂಗಳೂರಿನ ಕೋರ್ಟುಗಳಲ್ಲಿ ಇತ್ಯರ್ಥವಾಗುವುದಿಲ್ಲ. ಇದಕ್ಕೆ ಪ್ರತ್ಯೇಕ ಕೋರ್ಟನ್ನು ಮಾಡಿ ಎಂದು ಅದನ್ನು ಪರಿಶೀಲಿಸಬೇಕಾಗುತ್ತದೆ. ಹಾಗೂ ಹಣಕಾಸಿನ ಇತಿಮಿತಿಯಲ್ಲಿ ಯೋಚಿಸಬೇಕಾಗುತ್ತದೆ. ಇದನ್ನು ನಾನು ಯೋಚನೆ ಮಾಡುತ್ತೇನೆ.

ಅವಾರ್ಡ್ಸ್‌ಗಳು ಏನಾಗಿದೆ. ಅವಾರ್ಡ್ಸ್‌ಗಳು ಇಂಪ್ಲಿಮೆಂಟ್ ಆಗುತ್ತಿಲ್ಲ. ಇದು ನನ್ನ ಗಮನಕ್ಕೆ ಬಂದಿದೆ. ಈ ಅವಾರ್ಡ್ಸ್‌ಗಳು ಕೋರ್ಟಿನಲ್ಲಿ ಮೊದಲೇ ಲೇಟಾಗುತ್ತದೆ. ಅವಾರ್ಡ್ಸ್ ಬಂದ ಮೇಲೆ ಲೇಟಾಗುತ್ತದೆ, ತೊಂದರೆಯಾಗುತ್ತದೆ ಎಂದು ಹೇಳಿದ್ದಾರೆ. ಈ ದಿಶೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಈ ಅವಾರ್ಡ್ಸ್‌ನ್ನು ಜಾಗ್ರತೆಯಾಗಿ ಇಂಪ್ಲಿಮೆಂಟ್ ಮಾಡುವುದಕ್ಕೆ ಎಲ್ಲಾ ರೀತಿಯ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇನ್ನೊಂದು ವಿಷಯ ಮಾನ್ಯ ಅಡ್ಯಂತಾಯರವರು ಹೇಳಿದರು.

ಪೋಲೀಸ್ ಇಂಟರ್‌ಫಿಯರೆನ್ಸ್ ಜಾಸ್ತಿ ಇದೆ ಎಂದು ಹೇಳಿದರು. ನಾವು ಪೋಲೀಸ್‌ರನ್ನು ಕರೆಯುವುದಿಲ್ಲ ಎಂದು ಹೇಳುತ್ತೇನೆ. ಘರ್ಷಣೆ ಆದಾಗ ಬಹುತೇಕ ಮಾಲೀಕ ವರ್ಗದವರಾಗಲೀ ಅಥವಾ ಕಾರ್ಮಿಕ ವರ್ಗದವರಾಗಲೀ ಪೋಲೀಸರಿಗೆ ತಿಳಿಸಿದಾಗ ಅವರು ಹೋಗಿರಬಹುದೇ ಹೊರತು ನಾವು ಎಂದೂ ಕಾರ್ಮಿಕ ಇಲಾಖೆಯಿಂದ ಪೋಲೀಸರನ್ನು ಕರೆಸಿಲ್ಲ.

ಶ್ರೀ ಬಿ. ಎಂ. ಆಡ್ಯಂತಾಯ.—ತಾವು ಕರೆಸುವುದಿಲ್ಲ ಎಂದು ನನಗೆ ಗೊತ್ತು. ಆದರೆ ಗೃಹ ಮಂತ್ರಿಗಳ ಪ್ರವೇಶ ಆಗಬಾರದು.

ಶ್ರೀ ಬಿ. ರಾಚಯ್ಯ.—ನಮ್ಮನ್ನು ಕರೆಯದೇ ನಾವು ಹೋಗುವುದಿಲ್ಲ. ಸ್ವಾಮಿ.

ಶ್ರೀ ಬಿ. ಎಂ. ಆಡ್ಯಂತಾಯ.—ಅವರು ಕರೆದರೂ ತಾವು ಪ್ರವೇಶ ಮಾಡಬೇಡಿ.

ಶ್ರೀ ಡಿ. ಮಂಜುನಾಥ್.—ನಮ್ಮ ಇಲಾಖೆಯಿಂದ ಕರೆಯುವುದಿಲ್ಲ. ಅಂಥ ಅಹಿತಕರ ಘಟನೆಗಳು ಆದಾಗ ಮಾತ್ರ ಅವರು ಲಾ ಅಂಡ್ ಆರ್ಡರನ್ನು ಮೆಯಿನ್‌ಟೈನ್ ಅವರ ಜವಾಬ್ದಾರಿ ಇದ್ದರೆ ಅವರು ಹೋಗಬಹುದು. ಇವತ್ತಿನ ದಿವಸ ನಮ್ಮ ಪಕ್ಕದ ರಾಜ್ಯಗಳಿಗೆ ಹೋಲಿಸಿ ನೋಡಿದಾಗ ನಮ್ಮ ಕರ್ನಾಟಕದಲ್ಲಿ ಒಂದು ಕೈಗಾರಿಕಾ ಶಾಂತಿ ಇದೆ ಎಂದು ಹೇಳಬಹುದು. ಅಹಿತಕರ ಘಟನೆಗಳು ಏನೂ ಆಗಿಲ್ಲ. ಆಗುವುದಕ್ಕೂ ನಾವು ಬಿಡುವುದಿಲ್ಲ. ಒಟ್ಟಿನಲ್ಲಿ ನಮ್ಮ ಇಲಾಖೆಗೆ ಯಾವುದೇ ಒಂದು ಸಮಸ್ಯೆ ಮುಂದೆ ಬಂದಾಗ ಅದನ್ನು ಜಾಗ್ರುತೆ ಬಗೆಹರಿಸುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ನಾನು ಈ ದಿವಸ ಮಾನ್ಯ ಸದಸ್ಯರಿಗೆ ಆಶ್ವಾಸನೆ ಕೊಡುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸಂಘಟಿತ ಕಾರ್ಮಿಕರು ಬಹಳ ಇದ್ದಾರೆ ಎಂಬುದು ನನಗೆ ಗೊತ್ತಿದೆ, ಕಡಲ ಹುರಿಯುವವರು, ಇಟ್ಟಿಗೆ ಮಾಡುವವರು, ಲೋಡಿಂಗ್, ಅನ್ ಲೋಡಿಂಗ್ ಮಾಡುವವರು ಮುಂತಾದವರು ಬಹಳಷ್ಟು ಜನ ಇದ್ದಾರೆ. ಅದರ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಎಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲೂ ಇವತ್ತು ೪೬ ವೃತ್ತಿಗಳಲ್ಲಿ ಸಹಾ ಅಸಂಘಟಿತ ಕಾರ್ಮಿಕರ ಬಗ್ಗೆ ಮಿನಿಮಮ್ ವೇಜಸ್ ಫಿಕ್ಸ್ ಮಾಡಬೇಕೆಂದು ಮಾಡಿದ್ದೇವೆ. ಲೋಡಿಂಗ್ ಅನ್–ಲೋಡಿಂಗ್ ಎಂದು ಹೇಳಿದರು. ಮಂಗಳೂರು ಪೋರ್ಟ್‌ನಲ್ಲಿ ಕಂಟ್ರಾಕ್ಟ್ ಮೇಲೆ ಲೋಡಿಂಗ್ ಅನ್ ಲೋಡಿಂಗ್‌ಗೆ ಬರುತ್ತದೆ.

ಶ್ರೀ ಬಿ. ಎಂ. ಆಡ್ಯಂತಾಯ.—ಮಂಗಳೂರು ಪೋರ್ಟ್‌ನಲ್ಲಿ ಲೋಡಿಂಗ್ ಅನ್‌ಲೋಡಿಂಗ್ ವರ್ಕ್‌ರ್ಸ್ ಬರುವುದಿಲ್ಲ, ಅಲ್ಲಿ ಹೆಡ್ ಲೋಡ್ ವರ್ಕರ್ಸ್ ಎಂದು ಇದ್ದಾರೆ. ಕೇರಳದಲ್ಲಿ ಹೆಡ್‌ಲೋಡ್ ವರ್ಕರ್ಸ್ ಆ್ಯಕ್ಟ್ ಎಂದಿದೆ. ಮಿನಿಮಮ್ ವೇಜಸ್ ಆ್ಯಕ್ಟ್ ಅಲ್ಲದೇ ಹೆಡ್ ಲೋಡ್ ವರ್ಕರ್ಸ್ ಆ್ಯಕ್ಟ್ ಎಂದು ಇದೆ. ಸಪರೇಟ್ ಆ್ಯಕ್ಟ್ ಮಾಡಿದ್ದಾರೆ. ಆ ರೀತಿಯಲ್ಲಿ ಮಾಡಿ.

ಶ್ರೀ ಡಿ. ಮಂಜುನಾಥ್.—ಇನ್ನೊಂದು ವಿಷಯವನ್ನು ಆಡ್ಯಂತಾಯರವರು ಹೇಳಿದರು. ೨೪೦ ದಿನವೂ ಕೆಲಸ ಮಾಡುತ್ತಾರೆ. ಅವರಿಗೆ ಫ್ಯಾಕ್ಟರಿ ಆ್ಯಕ್ಟನ್ನು ಅಮೆಂಡ್‌ಮೆಂಟ್ ಮಾಡಿ ಎಂದು ಹೇಳಿದ್ದಾರೆ. ಫ್ಯಾಕ್ಟರಿ ಆ್ಯಕ್ಟ್ ಅಮೆಂಡ್‌ಮೆಂಟ್ ಮಾಡುವಂಥ ಅವಶ್ಯಕತೆ ಇಲ್ಲ. ೨೪೦ ದಿನಕ್ಕೂ ಕಡಿಮೆ ಕೆಲಸ ಮಾಡಿದವರಿಗೂ ಸೌಲಭ್ಯ ಇಲ್ಲ ಎನ್ನುವುದು ಸರಿಯಲ್ಲ. ಉಳಿದ ದಿನಗಳಲ್ಲಿ ಈ ಮೂರನೇ ಎರಡು ಭಾಗ ಒಟ್ಟು ದಿನಗಳಲ್ಲಿ ಕೆಲಸ ಮಾಡಿದರೂ ಅಂಥವರಿಗೂ ಸಹಾ ಈ ಆ್ಯಕ್ಟ್ ಪ್ರಕಾರ ಅವರು ಬರುತ್ತಾರೆ. ಇದನ್ನು ಫ್ಯಾಕ್ಟರಿ ಆ್ಯಕ್ಟ್ ಅಮೆಂಡ್‌ಮೆಂಟ್‌ಗೆ ಬರುವುದಿಲ್ಲ ಎಂದು ಮಾನ್ಯ ಸದಸ್ಯರಿಗೆ ಈ ಮೂಲಕ ತಿಳಿಯಪಡಿಸುತ್ತೇನೆ.

ಮೇ ೧ರಂದು ರಜಾ ಘೋಷಣೆ ಮಾಡುವುದರ ಬಗ್ಗೆ ಸರ್ಕಾರ ಮುತುವರ್ಜಿ ವಹಿಸಿ ಮಾಡಿದೆ, ಈ ವಿಷಯದಲ್ಲಿ ನಮ್ಮ ಸರ್ಕಾರ ಬಹಳ ಮುತುವರ್ಜಿ ವಹಿಸಿ ಕಳೆದ ವರ್ಷದಿಂದ ರಜಾವನ್ನು ಘೋಷಣೆ ಮಾಡಿದ್ದಾಯಿತು. ಅದಕ್ಕೆ ಈ ಸದನದಲ್ಲಿ ಒಂದು ತಿದ್ದುಪಡಿಯನ್ನು ತಂದು ಮಾಡಿದ್ದಾಯಿತು. ಕೇಂದ್ರ ಸರ್ಕಾರಕ್ಕೆ ನಾವು ಮೊದಲು ಬರೆದು ಮೇ ೧ರಂದು ರಜಾ ಘೋಷಣೆ ಮಾಡಬೇಕೆಂದು ಕೇಳಿ ಕೊಂಡಿದ್ದೇವು. ಏಕೆಂದರೆ, ಸಿಗ್‌ನಿಫಿಕೆಂಟ್ ಡೇ ಎಂದು ಇರುವುದರಿಂದ ಮಾಡಬೇಕೆಂದು ಕೇಳಿ ಕೊಂಡಿದ್ದೆವು. ಆದರೂ ಅವರು ಒಪ್ಪಲಿಲ್ಲ. ಅದರೂ ಸಹ ಅಮೆಂಡ್‌ಮೆಂಟ್ ತಂದು ಕಳೆದ ಸಾರಿ ಮಾಡಿದೆವು. ಈಗ ಮತ್ತೆ ಒಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಮೂಲ ಕಾಯ್ದೆಯಲ್ಲಿ ಅಷ್ಟು ದಿವಸ ಮೀರಬಾರದು ಎಂದು ಅದರಲ್ಲಿಯೂ ಕಾಯ್ದೆಯನ್ನು ತರುತ್ತಿದ್ದೇವೆ. ಅದಕ್ಕೆ ಈಗಾಗಲೇ ಸದನದಲ್ಲಿ ಒಂದು ಇಂಟ್ರಡೂಸ್ ಮಾಡಿದ್ದೇವೆ.

ಇನ್ನು ಇ.ಎಸ್.ಐ. ಆಸ್ಪತ್ರೆಗಳ ಬಗ್ಗೆ ಮಾನ್ಯ ಅಧ್ಯಕ್ಷರವರು ಕೆಲವು ವಿಷಯಗಳನ್ನು ಹೇಳಿದರು. ಮೂರು ದಿವಸದ ಹಿಂದೆ ಅವರು ಒಂದು ಸುದ್ದಿಯನ್ನು ಎತ್ತಿದ್ದರು. ಡಾಕ್ಟರ್ ಒಬ್ಬರು ಹರ್ನಿಯಾ ಆಪರೇಷನ್ ಮಾಡಿದ್ದಾರೆ, ತೊಂದರೆಯಾಗಿದೆ ಎಂದು ಹೇಳಿದ್ದಾರೆ.ಅವರಿಗೆ ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಆ ಡಾಕ್ಟರ್ ಮೇಲೆ ಎನ್‌ಕ್ವೈರಿ ಮಾಡಿಸಿ ಕ್ರಮ ತೆಗೆದು ಕೊಳ್ಳುತ್ತೇನೆ. ಒಂದು ವಾರದೊಳಗೆ ಈ ಕೆಲಸ ಮಾಡುತ್ತೇನೆಂದು ತಿಳಿಸುತ್ತೇನೆ. ಲಂಚದ ಹಾವಳಿ ಜಾಸ್ತಿಯಾಗಿದೆಯೆಂದೂ ತಿಳಿಸಿದ್ದಾರೆ. ಕೆಲವು ದೂರು ಸಹ ಬಂದಿದೆ. ಕೆಲವು ಕಾರ್ಮಿಕರು ಇವತ್ತಿನ ದಿವಸ ಡಾಕ್ಟರ್ ಹತ್ತಿರ ಹೋಗಿ ಬಲವಂತ ಮಾಡಿ ಸರ್ಟಿಫಿಕೇಟ್ ತೆಗೆದುಕೊಂಡಿರತಕ್ಕದ್ದು ನನ್ನ ಗಮನಕ್ಕೆ ಬಂದಿದೆ. ಅಂಥ ಸಂದರ್ಭದಲ್ಲಿ ಡಾಕ್ಟರ್‌ಗೂ, ಅವನಿಗೂ ಏನಾದರೂ ನಡೆದಿದ್ದರೆ ನನಗೆ ಇಂಥ ಕಡೆ ನಡೆದಿದೆ ಎಂದು ನಿರ್ದಿಷ್ಟವಾದ ದೂರು ಬಂದಿಲ್ಲ. ಅಂಥ ದೂರುಗಳು ಮಾನ್ಯ ಸದಸ್ಯರಿಗೆ ಬಂದರೆ ಅದನ್ನು ದಯವಿಟ್ಟು ಅವರು ತಿಳಿಸಿದರೆ ಖಂಡಿತವಾಗಿಯೂ ಡಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ಒಂದು ವಿಷಯವನ್ನು ಬಹಳ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಇ.ಎಸ್.ಐ. ಆಸ್ಪತ್ರೆಗಳ ಬಗ್ಗೆ ಹೆಚ್ಚು ಆಸಕ್ತಿ ತೆಗೆದುಕೊಂಡು ಅಡ್ಮಿನಿಸ್ಟ್ರೇಷನ್ ಸ್ಟ್ರೀಮ್‌ಲೈನ್ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ ನಾವು ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಬಹುತೇಕ ಡಾಕ್ಟರ್‌ಗಳು ಅಲ್ಲಿ ಏನು ಕೆಲಸ ಮಾಡಬೇಕಾಗಿತ್ತು. ಅದಕ್ಕೆ ಅವರೆಲ್ಲರನ್ನೂ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಡೆಪ್ಯುಟೇಷನ್ ಮೇಲೆ ತೆಗೆದುಕೊಂಡಿದ್ದೇವು ಈಗ ನಮ್ಮದೇ ಒಂದು ಇ.ಎಸ್.ಐ. ಡಾಕ್ಟರ್‌ಗಳ ಕೇಡರ್ ಮಾಡಬೇಕೆಂದು ಮಾಡಿ ಈಗಾಗಲೇ ಒಂದು ನೂರು ಜನ ಡಾಕ್ಟರನ್ನು ಪಬ್ಲಿಕ್ ಸರ್ವಿಸ್ ಕಮಿಷನ್‌ಗೆ ಬರೆದಿದ್ದೇವೆ. ಅವರು ಸೆಲೆಕ್ಟ್ ಮಾಡಿ ಲಿಸ್ಟ್ ಕಳುಹಿಸಿದ್ದಾರೆ. ಅವರೆಲ್ಲರೂ ಯುವಕರು ಇದ್ದಾರೆ. ಚೆನ್ನಾಗಿ ಕೆಲಸ ಮಾಡುವಂಥ ಎಲ್ಲಾ ಕಾರ್ಯಕ್ರಮವನ್ನು ತೆಗೆದು ಕೊಂಡಿದ್ದೇವೆ. ಅದರ ಜೊತೆಗೆ ಈಗ ನಮ್ಮ ರಾಜ್ಯದಲ್ಲಿ ೧೨೭ ಡಿಸ್‌ಪೆನ್ಸರಿ ಇದೆ. ಅದರಲ್ಲಿ ೬ ಆಸ್ಪತ್ರೆ ಗಳು. ಇವುಗಳಲ್ಲಿ ಬಹುತೇಕವಾಗಿ ಬಾಡಿಗೆ ಕಟ್ಟಡಗಳಲ್ಲಿದೆ. ಅನೇಕ ಕಡೆ ಸೈಟುಗಳನ್ನು ತೆಗೆದುಕೊಂಡು ನಾಲ್ಕು ವರ್ಷಗಳಲ್ಲಿ ಎಲ್ಲಾ ಆಸ್ಪತ್ರೆಗಳಿಗೂ ನಮ್ಮದೇ ಆದ ಸ್ವಂತ ಕಟ್ಟಡಗಳನ್ನು ಕಟ್ಟಿಸಬೇಕೆಂದು ಪ್ರಯತ್ನ ಮಾಡಿದ್ದೇವೆ. ಇದಕ್ಕೆ ಇ.ಎಸ್.ಐ. ಕಾರ್ಪೊರೇಷನ್‌ನವರು ಸಾಕಷ್ಟು ಸಹಾಯ ಮಾಡಿದ್ದಾರೆ ೧೯೮೫ರಲ್ಲಿ ಒಂದು ವರ್ಷದ ಅವಧಿಯಲ್ಲಿಯೇ ಹತ್ತು ಕೋಟಿ ರೂಪಾಯಿಗಳನ್ನು ಇ.ಎಸ್.ಐ. ಕಾರ್ಪೊರೇಷನ್‌ನವರು ಕೊಟ್ಟಿದ್ದಾರೆ. ಮಂಗಳೂರಿನಲ್ಲೂ ಸಹಾ ೫೦ ಬೆಡ್ ಇರುವಂಥ ಆಸ್ಪತ್ರೆಗಳನ್ನು ೧೦೦ ಬೆಡ್ಸ್‌ನ್ನಾಗಿ ಮಾಡಿದ್ದೇವೆ. ಇನ್ನೂ ಎರಡು ಡಿಸ್‌ಪೆನ್ಸರಿಯನ್ನು ಕಟ್ಟಿಸಿದ್ದೇವೆ. ಇ.ಎಸ್.ಐ. ಕಾರ್ಪೊರೇಷನ್‌ನವರು ಸಹಾಯ ಮಾಡುತ್ತಿದ್ದಾರೆ. ಅವರ ಜೊತೆಗೆ ಈಗ ನಾವು ರಾಜ್ಯ ಸರ್ಕಾರ ದವರು ಏನು ಮಂತಿಗೆಯನ್ನು ಕೊಡಬೇಕೋ ಅದನ್ನು ಹೆಚ್ಚಾಗಿಯೇ ಕೊಡುತ್ತಿದ್ದೇವೆ. ಇವತ್ತು ಇದನ್ನು ಬಹಳ ಹೆಮ್ಮೆಯಿಂದ ಹೇಳಬೇಕಾಗುತ್ತದೆ. ಇಡೀ ರಾಷ್ಟ್ರದಲ್ಲಿ ಎಲ್ಲಾ ರಾಜ್ಯಗಳಿಗಿಂತ ಕರ್ನಾಟಕ ರಾಜ್ಯ ಹೆಚ್ಚಿಗೆ ಹಣವನ್ನು ಕೊಡುತ್ತಿದೆ. ಇ.ಎಸ್.ಐ. ನಾರ್ಮ್ಸ್ ಪ್ರಕಾರ ೮ನೇ ಒಂದು ಭಾಗ ರಾಜ್ಯ ಸರ್ಕಾರ ಕೊಡಬೇಕು. ಇನ್ನು ೮ನೇ ಏಳು ಭಾಗ ಕೇಂದ್ರ ಸರ್ಕಾರ ಕೊಡಬೇಕು. ೧೧ ಕೋಟಿ ರೂಪಾಯಿಯನ್ನು ಕಳೆದ ವರ್ಷ ನಾವು ಕೊಟ್ಟಿದ್ದೇವೆ. ಔಷಧಿಗಾಗಿ ೪ ಕೋಟಿ ರೂಪಾಯಿ ಕೊಟ್ಟಿದ್ದೇವೆ. ಔಷಧಿಯ ಕೊರತೆ ನಮ್ಮ ಆಸ್ಪತ್ರೆಗಳಲ್ಲಿಲ್ಲ. ಬೇರೆ ಆಸ್ಪತ್ರೆಗಳಿಗಿಂತ ಉತ್ತಮವಾದ ಆಸ್ಪತ್ರೆಗಳನ್ನು ನಡೆಸುವುದಕ್ಕೆ ಎಲ್ಲಾ ಪ್ರಯತ್ನವನ್ನು ಮಾಡಿದ್ದೇವೆ. ಈಗ ಡಾಕ್ಟರ್‌ಗಳ ಬಗ್ಗೆ ನಿರ್ದಿಷ್ಟವಾದ ದೂರುಗಳು ಇದ್ದರೆ ತಾವು ನನಗೆ ತಿಳಿಸಬಹುದು. ನಾನು ಖಂಡಿತಾ ಸರಿ ಮಾಡುತ್ತೇನೆ ಎಂದು ತಮ್ಮ ಮೂಲಕ ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇನೆ.

ಇನ್ನೊಂದು ವಿಷಯವನ್ನು ಹೇಳಿದರು. ರಿಲೀಫ್ ಅಂಡರ್‌ಟೇಕಿಂಗ್ ಪ್ರಕಾರ ಕೆಲವು ಇಂಡಸ್ಟ್ರೀಸ್‌ ಗಳನ್ನು ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಖಾಸಗಿಯವರ ಇಂಡಸ್ಟ್ರೀಸ್ ಆಗಿತ್ತು. ಅದನ್ನು ಸರ್ಕಾರ ವಹಿಸಿಕೊಂಡ ಮೇಲೆ ಇನ್ನೂ ತೊಂದರೆಯಲ್ಲಿದೆ. ಆದರೂ ಸಹಾ ಇವತ್ತಿನ ದಿವಸ ನಡೆಸುತ್ತಿದ್ದೇವೆ. ಈ ಸಿಕ್ ಟೆಕ್ಸ್‌ಟೈಲ್ ಮಿಲ್ಸ್ ಬಗ್ಗೆ ಮಾನ್ಯ ಅಧ್ಯಕ್ಷರವರು ಟ್ರೈಪಾರ್‌ಟೈಟ್ ಕಮಿಟಿಯ ಅಗ್ರಿಮೆಂಟ್ ಫುಲ್‌ಫಿಲ್ ಆಗಿಲ್ಲ, ಇಂಪ್ಲಿಮೆಂಟ್ ಆಗಿಲ್ಲ ಎಂದು ಹೇಳಿದರು ತಾವು ಹೇಳಿದ್ದನ್ನು ಒಪ್ಪುತ್ತೇನೆ. ಎರಡು ಮೂರು ಮಿಲ್‌ನಲ್ಲಿ ಆಗಿಲ್ಲ. ಬಿನ್ನಿಯಲ್ಲಿ ಆಗಿಲ್ಲ. ಇಂಪ್ಲಿಮೆಂಟ್ ಮಾಡಲೇಬೇಕೆಂದು ಅವರಿಗೆ ಹೇಳಿದ್ದೇವೆ. ಈ ರೀತಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ

ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಮತ್ತು ಕೆ.ಆರ್. ಮಿಲ್ ಬಗ್ಗೆ ಲೇಬರ್ ಡಿಸ್‌ಪ್ಯೂಟ್ ಬಗೆಹರಿಸಿದ್ದೇವೆ. ಇಂಡಸ್ಟ್ರೀಸ್ ಮಿನಿಸ್ಟರ್‌ಗೆ ಹೇಳಿದೆ. ಅವರು ನಾವು ಕೂಡಿ ಮೀಟಿಂಗ್ ಮಾಡಿ ಏನಾದರೂ ಮಾಡಿ ಮಿಲ್ ತೆಗೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲೆಂಬಿಕ್ ಕಾರ್ಖಾನೆಯವರು ನಮಗೆ ಕೇಳುವಷ್ಟು ಎಲೆಕ್ಟ್ರಿಸಿಟಿ ಕೊಡಬೇಕೆಂದು ಹೇಳಿದರು. ಪವರ್ ಷಾರ್ಟೇಜ್ ಇರುವುದರಿಂದ ಆಗುವುದಿಲ್ಲ ಎಂದು ಹೇಳಿದೆವು. ಅವರು ಕೋರ್ಟಿಗೆ ಹೋದರು. ಕೆ.ಆರ್. ಮಿಲ್ ಬಗ್ಗೆ ಹೇಳುವುದಾದರೆ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನವರು ಸವಲತ್ತುಗಳನ್ನು ಕೊಡುವ ಬಗ್ಗೆ ಐ.ಡಿ.ಬಿ.ಗೆ ರೆಕಮೆಂಡ್ ಮಾಡಿದ್ದಾರೆ. ಬಹುತೇಕ ಸಾಲ ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ ಎಂದು ವರ್ತಮಾನ ಬಂದಿದೆ. ನಮ್ಮ ಇಲಾಖೆಯಿಂದ ಏನು ಮಾಡಬೇಕೋ ಅದನ್ನು ಮಾಡಿದ್ದೇವೆ. ಅಧ್ಯಂತಾಯ ಅವರು ಮುಖ್ಯವಾಗಿ ಒಂದು ವಿಷಯವನ್ನು ತಿಳಿಸಿದರು, ಮಹಾರಾಷ್ಟ್ರದಲ್ಲಿ ಕೋಡ್ ಆಫ್ ಡಿಸಿಪ್ಲೀನ್ ಕೈಗಾರಿಕೆಗಳ ಬಗ್ಗೆ ಇದೆ ಎಂದು ಹೇಳಿದರು. ಮೂಡಲಗಿರಿಯಪ್ಪನವರು ಹೇಳಿದಹಾಗೆ ಲೇಬರ್ ಯೂನಿಯನ್ ಲೀಡರ್ಸ್ ಬಹುತೇಕ ರಾಜಕೀಯ ಪಕ್ಷದವರು. ಆಯಾ ಕಾರ್ಖಾನೆಗಳಲ್ಲಿರುವವರೇ ಲೇಬರ್ ಲೀಡರ್ಸ್ ಆದರೆ ಅನುಕೂಲವಾಗುತ್ತದೆ. ಆದರೆ ಈಗ ಸಾಮಾನ್ಯವಾಗಿ ಹೊರಗಡೆಯವರೇ ಲೀಡರ್ಸ್ ಆಗಿರುತ್ತಾರೆ. ಹೀಗಿರುವುದರಿಂದ ಕೆಲವು ಕಡೆ ಹೊಂದಾಣಿಕೆ ಇಲ್ಲದೆ ವಾದವಿವಾದಗಳು ಆಗಿವೆ. ಕೆ.ಆರ್. ಮಿಲ್‌ನಲ್ಲಿ ನಾಲ್ಕು ಯೂನಿಯನ್ ಇದೆ. ಅವರಲ್ಲಿ ಒಡಂಬಡಿಕೆ ಇಲ್ಲದೆ ಅನೇಕಸಾರಿ ಸ್ಟ್ರೈಕ್ ಆಗುತ್ತದೆ. ಆದರೆ ಅವರು ಹೇಳಿರುವುದು ಒಳ್ಳೆಯದು. ನಾವು ಎಗ್ಸಾಮಿನ್ ಮಾಡಿ ಒಂದು ಕಮಿಟಿ ಮಾಡಿ ಸರಿಮಾಡಬೇಕಾಗುತ್ತದೆ. ಟ್ರೇಡ್ ಯೂನಿಯನ್ ಆ್ಯಕ್ಟ್ ಬಹಳ ಹಳೆಯದು. ೭ ಜನ ಇದ್ದರೆ ಸಾಕು ಒಂದು ಯೂನಿಯನ್ ರಿಜಿಸ್ಟರ್ ಮಾಡಬಹುದಾಗಿದೆ ಇದು ಬಹಳ ಹಳೆಯ ನಿಯಮವಾಗಿರುವುದರಿಂದ ಇದನ್ನು ಬದಲಾವಣೆ ಮಾಡಬೇಕಾಗಿದೆ. ಇವು ಸೆಂಟ್ರಲ್ ಆಕ್ಟ್. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್, ಟ್ರೇಡ್ ಯೂನಿಯನ್ ಆಕ್ಟ್ ಕೇಂದ್ರ ಸರ್ಕಾರದ ಕಾಯಿದೆಗಳು. ನಾನೂ ಸಹ ಅದನ್ನು ಬದಲಾವಣೆ ಮಾಡಿ ಎಂದು ಒತ್ತಾಯ ಮಾಡುತ್ತಿದ್ದೇನೆ. ಅದನ್ನು ಬದಲಾವಣೆ ಮಾಡಿ ಸರ್ಕಾರಕ್ಕೆ ಅಧಿಕಾರ ಕೊಡಿ ಎಂದು ಕೇಳುತ್ತಿದ್ದೇವೆ. ಟ್ರೇಡ್ ಯೂನಿಯನ್ ಆಕ್ಟ್ ಅಮೆಂಡ್‌ಮೆಂಟ್ ಆಗುವವರೆಗೂ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ ನಮಗೆ ಮತ್ತು ಕಾರ್ಮಿಕ ಮುಖಂಡರಿಗೂ ಕಷ್ಟವಾಗುತ್ತದೆ. ಕೇಂದ್ರ ಸರ್ಕಾರಕ್ಕೂ ಒತ್ತಾಯ ಮಾಡಿದ್ದೇವೆ, ಮಾಡುತ್ತಿದ್ದೇವೆ. ರಾಯಬಾಗ್ ಸಕ್ಕರೆ ಕಾರ್ಖಾನೆ ವಿಷಯ ಹೇಳಿದರು. ಮೊನ್ನೆತಾನೇ ನಾನು ಬೆಳಗಾವಿಗೆ ಹೋಗಿದ್ದೆ. ಅಲ್ಲಿ ನಾನು ವಿಚಾರ ಮಾಡಿದೆ. ಅಲ್ಲಿ ಏನಾಗಿದೆಯೆಂದರೆ ೪೦ ಜನರನ್ನು ಟರ್ಮಿನೇಟ್ ಮಾಡಿದ್ದಾರೆ. ಕಾನೂನು ಪ್ರಕಾರ ಅಧಿಕಾರಿಗಳು ಕಾನೂನಿನ ಇತಿಮಿತಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ. ಆ ಮುಖ್ಯಸ್ಥರನ್ನು ಕರೆಸಿ ಮಾತನಾಡಿ ಇತ್ಯರ್ಥ ಮಾಡಬೇಕೆಂದು ಹೇಳಿದ್ದೇವೆ. ಜಿಲ್ಲಾ ಸಚಿವರಾದ ವಿ. ಎಲ್. ಪಾಟೀಲರ ಹತ್ತಿರ ಅರಿಕೆ ಮಾಡಿಕೊಂಡಿದ್ದೇನೆ.

ಶ್ರೀ ಎಂ. ಎಸ್. ಪಾಟೀಲ್.—ಅದಾಗಿ ಬಹಳ ದಿವಸ ಆಗಿದೆ. ನೀವು ಅವರು ಕೂಡಿ ಚರ್ಚೆ ಮಾಡಿ ಸೆಟ್ಲ್ ಮಾಡಿ.

ಶ್ರೀ ಡಿ. ಮಂಜುನಾಥ್.—ಮಾತನಾಡಿದ್ದೇನೆ ಆದಷ್ಟು ಜಾಗ್ರತೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಬೆಳಗಾವಿಗೆ ಹೋದಾಗಲೂ ಕಾರ್ಮಿಕ ಮುಖಂಡರನ್ನು ಅಧಿಕಾರಿಗಳನ್ನು ಕರೆಸಿ ಮಾತನಾಡಿದ್ದೇನೆ. ಬಹುತೇಕ ಅದು ಮುಗಿಯುವ ಹಂತದಲ್ಲಿದೆ. ಇನ್ನೊಂದು ವಿಷಯವನ್ನು ಅಧ್ಯಂತಾಯ ಅವರು ಹೇಳಿದರು. ಕಾರ್ಖಾನೆಯಲ್ಲಿ ಸೇಫ್ಟಿ ಬಗ್ಗೆ ಹೇಳಿದರು. ಅಫಘಾತಗಳು ಜಾಸ್ತಿಯಾಗುತ್ತಿವೆ ಎಂದು ಹೇಳಿದರು. ವರದಿಯಲ್ಲಿ ಕೊಟ್ಟಿರುವಂತೆ ೩೦ ಅಫಘಾತಗಳು ಆಗಿವೆ. ೫ ಜನ ಹಾರ್ಟ್‌ಫೈಲ್ ಆಗಿ ಸತ್ತುಹೋಗಿದ್ದಾರೆ. ಸೇಫ್ಟಿ ಬಗ್ಗೆ ಹೆಚ್ಚು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಕಾರ್ಖಾನೆ ಮಾಲೀಕರಿಗೆ ಹೇಳಿದ್ದೇವೆ. ೧ ಸಾವಿರ ಜನ ಮೇಲ್ಪಟ್ಟು ಕೆಲಸಗಾರರು ಇರುವ ಕಡೆ ಸೇಫ್ಟಿ ಆಫೀಸರ್ ಅಪಾಯಿಂಟ್ ಮಾಡಿಕೊಳ್ಳಬೇಕೆಂದು ಒತ್ತಾಯ ಮಾಡಿದ್ದೇವೆ. ನಮ್ಮಲ್ಲಿ ಹನ್ನೊಂದೂವರೆ ಸಾವಿರ ಫ್ಯಾಕ್ಟರಿಗಳಿವೆ, ಏಳೂವರೆ ಲಕ್ಷ ಜನ ಕಾರ್ಮಿಕರಿದ್ದಾರೆ. ೫೦೦ ಫ್ಯಾಕ್ಟರಿಯನ್ನು ಒಬ್ಬ ಇನ್‌ಸ್ಪೆಕ್ಟರ್ ನೋಡಬೇಕಾಗಿದೆ. ಫ್ಯಾಕ್ಟರಿ ಇನ್‌ಸ್ಪೆಕ್ಟರೇಟನ್ನು ರೀಆರ್ಗನೈಸ್ ಮಾಡಿ ಇನ್ನೂ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ೩೦೦ ಫ್ಯಾಕ್ಟರಿಯನ್ನು ಒಬ್ಬ ಇನ್‌ಸ್ಪೆಕ್ಟರ್ ನೋಡುವುದಕ್ಕೆ ಕಷ್ಟವಾಗುತ್ತದೆ, ಸೇಫ್ಟಿ ಡೇ ಎಂದು ದೊಡ್ಡದಾಗಿ ವಿಧಾನಸೌಧದ ಬ್ಯಾಂಕ್ವೆಟ್ ಹಾಲಿನಲ್ಲಿ ಮಾಡಿದ್ದೆವು. ಅದರಲ್ಲಿ ಇಂಡಸ್ಟ್ರಿಯಲಿಸ್ಟ್ ಬಂದಿ ರ . ನಿಮ್ಮ ಕಾರ್ಖಾನೆಯಲ್ಲಿ ಸುರಕ್ಷತೆಯನ್ನು ಕಾಪಾಡುವುದು ನಿಮ

ಜವಾಬ್ದಾರಿ ಎಂದು ಹೇಳಿದ್ದೇವೆ. ಸುರಕ್ಷತೆ ಇದ್ದರೆ ಕಾರ್ಖಾನೆ ಚೆನ್ನಾಗಿ ನಡೆಯುತ್ತದೆ. ಆದ್ದರಿಂದ ಸುರಕ್ಷತೆ ಕಾಪಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಐ.ಟಿ.ಐ. ಬಗ್ಗೆ ಹೇಳಿದರು. ಪ್ರತಿಯೊಂದು ತಾಲ್ಲೂಕಿಗೂ ಐ.ಟಿ.ಐ. ಮಾಡಬೇಕೆಂದು ಹೇಳಿದ್ದಾರೆ. ಈ ಬಾರಿ ಸರ್ಕಾರದಿಂದ ಐ.ಟಿ.ಐ. ಮಾಡಲಿಲ್ಲ. ೧೪ ಐ.ಟಿ.ಐ.ಗೆ ಪರವಾನಗಿ ಕೊಟ್ಟಿದ್ದೇವೆ. ಖಾಸಗಿ ಐ.ಟಿ.ಐ.ಗಳನ್ನು ಕೆಲವರು ಚೆನ್ನಾಗಿ ಮಾಡಿದ್ದಾರೆ, ಸೌತ್‌ಕೆನರಾದಲ್ಲಿ ನಾನು ನೋಡಿದ್ದೇನೆ. ರಿಜಿಸ್ಟರ್ಡ್ ಸೊಸೈಟಿಯವರು ಮುಂದೆ ಬಂದರೆ ನಾವು ಅವರಿಗೆ ಪರವಾನಗಿ ಕೊಡುತ್ತೇವೆ. ಹಿಂದೆಲ್ಲಾ ಕಾನೂನು ಕಟ್ಟಲೆ ಇಲ್ಲದೆ ೧೬೬ ಐ.ಟಿ.ಐ.ಗಳಿಗೆ ಪರವಾನಗಿ ಕೊಟ್ಟಿದ್ದರು. ಅದರ ಕಾರ್ಯ ವೈಖರಿಯನ್ನು ನೋಡಿ ಅದಕ್ಕೆ ಒಂದು ಕಾರ್ಯಕ್ರಮವನ್ನು ರೂಪಿಸಿ ಅದರಂತೆ ಮಾಡಬೇಕೆಂದು ಮಾಡಿದ್ದೇವೆ. ಈ ವರ್ಷ ೨೦ ಖಾಸಗಿಯವರಿಗೆ ಕೊಡುವುದಕ್ಕೆ ತಯಾರಿದ್ದೇವೆ. ಕಾಟಿಪಾಳ್ಯದಲ್ಲಿ ಖಾಸಗಿಯವರಿಂದ ಅರ್ಜಿ ಬಂದರೆ ಖಂಡಿತ ಮಾಡುತ್ತೇವೆ. ಸರ್ಕಾರ ದಿಂದ ಎಲ್ಲಾ ಕಡೆ ಮಾಡುವುದಕ್ಕೆ ಕಷ್ಟ ಇದೆ. ಹಣದ ಕೊರತೆ ಇದೆ. ರಿಜಿಸ್ಟರ್ಡ್ ಸೊಸೈಟಿಯಿಂದ ಅರ್ಜಿ ಕೊಡಿಸಿದರೆ ಪರವಾನಗಿ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಅಪ್ರೆಂಟೀಸ್‌ಷಿಪ್ ಆಕ್ಟ್ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಇದರಲ್ಲಿ ಫ್ಯಾಕ್ಟರಿಯವರು ೫೦ ಪರ್ಸೆಂಟ್ ಖರ್ಚನ್ನು ವಹಿಸಿಕೊಂಡರೆ ನಾವು ೫೦ ಪರ್ಸೆಂಟ್ ವಹಿಸಿಕೊಂಡು ಕೆಲಸ ಮಾಡುತ್ತಿದ್ದೇವೆ. ಅಪ್ರೆಂಟೀಸ್‌ಷಿಪ್ ಆಕ್ಟ್ ಪ್ರಕಾರ ನಾವು ಅಲ್ಲಿರುವ ನೌಕರರನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುವಹಾಗಿಲ್ಲ. ಆದರೂ ಸಹ ಮನವೊಲಿಸಿ ಒಪ್ಪಿಸಿ ೫೦ ಪರ್ಸೆಂಟ್ ಜನರನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ನಾವೇ ಟ್ರೈನ್ಡ್ ಮಾಡಿದ್ದೇವೆ. ಅದರಲ್ಲಿ ಸ್ಕಿಲ್ಡ್ ವರ್ಕರ್ ಇದ್ದಾರೆ, ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಅದನ್ನು ಅನೇಕ ಜನರು ಒಪ್ಪಿಕೊಂಡಿದ್ದಾರೆ. ಅದರ ಪ್ರಕಾರ ನಡೆದ ಕೊಳ್ಳುತ್ತಾರೆಂಬ ನಂಬಿಕೆ ಇದೆ. ಗ್ರ್ಯಾಚುಯಿಟಿ ಬಗ್ಗೆ ಹೇಳಿದರು. ಅದನ್ನು ಕೇಂದ್ರ ಸರ್ಕಾರದವರು ನಿಗದಿ ಮಾಡಿದ್ದಾರೆ. ಅದರ ಪ್ರಕಾರ ಇಂಪ್ಲಿಮೆಂಟ್ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಎಲ್ಲಾದರೂ ಮಾಡದಿದ್ದರೆ, ಅದನ್ನು ನನ್ನ ಗಮನಕ್ಕೆ ತಂದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬಹುದು. ಮಾನ್ಯ ವೇದಾಂತ ಹೆಮ್ಮಿಗೆ ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಜಾಬ್ ಒರಿಯೆಂಟೆಡ್ ಕೋರ್ಸ್ ಮಾಡಿ ಎಂದು ಹೇಳಿದ್ದಾರೆ. ಐ.ಟಿ.ಐ.ನಲ್ಲಿ ಮಾಡುತ್ತಿರುವುದೇ ಅದು. ಒಂದೇನೆಂದರೆ ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್ ಕೊಡಬೇಕು. ಹಾಗೆ ಮಾಡಿದರೆ ಕರ್ನಾಟಕದಲ್ಲಿ ಕೆಲಸ ಸಿಗದಿದ್ದರೂ ಭಾರತ ದೇಶದಲ್ಲಿ ಎಲ್ಲಿ ಹೋದರೂ ಕೆಲಸ ಸಿಗುತ್ತದೆ. ಮಹಿಳೆಯರಿಗೆ ಐ.ಟಿ.ಐ.ಗಳನ್ನು ಜಾಸ್ತಿ ಮಾಡಿ ಎಂದು ಹೇಳಿದ್ದಾರೆ. ಎಲೆಕ್ಟ್ರಾನಿಕ್, ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಇದಕ್ಕೆ ಹೆಣ್ಣುಮಕ್ಕಳೂ ಸಹ ಸೇರುತ್ತಿದ್ದಾರೆ. ಮುಂದಿನ ವರ್ಷದಿಂದ ಹೆಣ್ಣುಮಕ್ಕಳಿಗೆ ಇನ್ನೂ ಹೆಚ್ಚಿನ ಅವಕಾಶ ಮಾಡಿಕೊಡುವುದಕ್ಕೆ ಏರ್ಪಾಡು ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೇನೆ.

ಇನ್ನು ಮೈಸೂರಿನಲ್ಲಿರುವ ಇ.ಎಸ್.ಐ. ಆಸ್ಪತ್ರೆಯಲ್ಲಿ ವ್ಯವಸ್ಥೆ ಬಹಳ ಚೆನ್ನಾಗಿದೆಯೆಂದು ಹೇಳಿ ಅವರ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಒಟ್ಟಿನಲ್ಲಿ ಕಾರ್ಮಿಕರ ಆಗುಹೋಗುಗಳ ಬಗ್ಗೆ ಸರ್ಕಾರ ಪ್ರಾಮಾಣಿಕವಾದ ಕೆಲಸವನ್ನು ಮಾಡುತ್ತಿದೆ ಯೆಂದು ಹೇಳುತ್ತೇನೆ. ಕಾರ್ಮಿಕ ಇಲಾಖೆಯಲ್ಲಿ ಸಮರ್ಪಕವಾಗಿ ಕೆಲಸ ನಡೆಯುತ್ತಿಲ್ಲ ತಾವು ಅಸಮರ್ಪಕರು ಎಂದು ಮಾನ್ಯ ಪಂಪಾಪತಿಯವರು ಹೇಳಿದರು. ನಾವು ಅಸಮರ್ಥರಾಗಿಲ್ಲ, ಅಸಹಕಾರಿಗಳಾಗಿದ್ದೇವೆ. ಇವತ್ತು ನಮಗೆ ಕೇಂದ್ರದ ಕಾಯ್ದೆ ಇದೆ. ಅದರಲ್ಲಿ ನಮ್ಮ ಸರ್ಕಾರಕ್ಕೆ ಅಷ್ಟು ಅಧಿಕಾರ ಇಲ್ಲ. ಇದಕ್ಕೆ ಏನಾದರೂ ಮಾಡಿ ಅಮೆಂಡ್‌ಮೆಂಟ್ ಮಾಡಿ ಹೆಚ್ಚು ಅಧಿಕಾರ ಕೊಡುವುದಾದರೆ... ಈ ಬಗ್ಗೆ ಮಾನ್ಯ ಅಧ್ಯಕ್ಷರಾದ ಅವರು ಮಾಡಬಹುದು, ಅವರು ಈ ಬಗ್ಗೆ...

ಶ್ರೀ ಎನ್. ಎಂ. ಅಡ್ಯಂತಾಯ.—ಇವತ್ತು ಲೇಬರ್ ಕಾನ್‌ಫರೆನ್ಸ್ ಲಿಸ್ಟ್‌ನಲ್ಲಿ ಇದೆ. ಆ ಬಗ್ಗೆ ನಾವೂ ಕೂಡ ಒತ್ತಾಯ ಮಾಡಿದ್ದೇವೆ. ಇವತ್ತು ಐ.ಎನ್.ಟಿ.ಯು.ಸಿ. ನಿಮ್ಮ ಸಂಸ್ಥೆ ಇದ್ದು ಅದು ಬಹಳ ದೊಡ್ಡ ಸಂಸ್ಥೆಯಾಗಿದೆ.

ಶ್ರೀ ಡಿ. ಮಂಜುನಾಥ್.—ನೀವು ಈ ಬಗ್ಗೆ ಕಾಯ್ದೆಗೆ ತಿದ್ದುಪಡಿ ಮಾಡಿ ಸರ್ಕಾರಕ್ಕೆ ಅಧಿಕಾರವನ್ನು ಕೊಟ್ಟರೆ ನಾವು ಎಷ್ಟು ಸಮರ್ಥರಿದ್ದೇವೆಂಬುದನ್ನು ತೋರಿಸುತ್ತೇವೆ. ಇನ್ನು ಮಾನ್ಯ ಸದಸ್ಯರು ಪೋಲೀಸರನ್ನು ಕರೆಸುತ್ತೀರಿ ಎಂದು ಹೇಳಿದ್ದಾರೆ. ನಾವು ಪೋಲೀಸರನ್ನು ಕಳುಹಿಸುವುದಿಲ್ಲ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬಂದರೆ ಆ ಬಗ್ಗೆ ಗೃಹ ಮಂತ್ರಿಗಳು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ನಾವೇ ಪೋಲೀಸರನ್ನು ಕಳುಹಿಸುವುದಿಲ್ಲ. ಇನ್ನು ಕಾರ್ಮಿಕ ಇಲಾಖೆಯಲ್ಲಿ

ಐ.ಎ.ಎಸ್. ಅಧಿಕಾರಿಯನ್ನು ಹಾಕಿದ್ದೀ ಎಂದು ಹೇಳಿದರು. ಇದರಿಂದ ಇವರಿಗೆ ಹೆಚ್ಚು ಗೊತ್ತಿರುವುದಿಲ್ಲವೆಂದು ಹೇಳುತ್ತಿದ್ದಾರೆ. ನನಗೆ ತಿಳಿದ ಮಟ್ಟಿಗೆ ಐ.ಎ.ಎಸ್. ಅಧಿಕಾರಿಗಳು ಸ್ವಲ್ಪ ಮಟ್ಟಿಗೆ ಚೆನ್ನಾಗಿ ಕೆಲಸ ಮಾಡುತ್ತಾರೆ. ಇವತ್ತು ಕನ್ಸಿಲಿಯೇಷನ್ ಆಫೀಸರ್ ಕೆಳಗೆ ಜಾಯಿಂಟ್ ಲೇಬರ್ ಕಮೀಷನರ್, ಅಸಿಸ್ಟೆಂಟ್ ಲೇಬರ್ ಕಮೀಷನರ್, ಡೆಪ್ಯುಟಿ ಲೇಬರ್ ಕಮೀಷನರ್ ಎಲ್ಲರೂ ನಮ್ಮ ಇಲಾಖೆಯವರೇ ಇರುವುದರಿಂದ ಏನೂ ತೊಂದರೆ ಆಗಲಿಕ್ಕಿಲ್ಲ. ಇನ್ನು ಚೈಲ್ಡ್ ಲೇಬರ್ ಬಗ್ಗೆ ಹೇಳಿದರು. ಇದರ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಚರ್ಚೆಯಾಗಿದೆ. ನಮಗೆ ಒಂದು ಆಕ್ಟ್ ಇದೆ, ಅದು ಚೈಲ್ಡ್ ಲೇಬರ್ ಆಕ್ಟ್. ಅದರಲ್ಲಿ ೧೪ ವರ್ಷದ ಒಳಗೆ ಇರುವವರನ್ನು ಪ್ರಿವೆಂಟ್ ಮಾಡಬೇಕೆಂದು ಇದೆ. ದುರಾದೃಷ್ಟವಶಾತ್ ನಮ್ಮ ದೇಶ ಬಡ ದೇಶ. ಬಡತನವೇ ಇದಕ್ಕೆ ಕಾರಣವಾಗಿದೆ. ಇವತ್ತು ಬಡತನದ ದಿಸೆಯಲ್ಲಿ ಈ ಮಕ್ಕಳನ್ನು ಆಟೋಗ್ಯಾರೇಜ್‌ಗೆ ಕಳುಹಿಸುತ್ತಾರೆ. ನನ್ನ ವೈಯಕ್ತಿಕ ಅಭಿಪ್ರಾಯವನ್ನು ಹೇಳಬೇಕೆಂದರೆ, ಈ ಚೈಲ್ಡ್ ಲೇಬರ್ ರೆಗ್ಯುಲೇಟ್ ಮಾಡಿದರೇ ಒಳ್ಳೆಯದು. ಈ ದಿಸೆಯಲ್ಲಿ ನಾವು ರಾಜ್ಯಮಟ್ಟದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಈ ಸಮಿತಿಯವರು ಬಹುತೇಕವಾಗಿ ಅಧ್ಯಯನ ಮಾಡುತ್ತಿದ್ದಾರೆ. ಇವತ್ತು ಹೆಜಾರ್ಡಸ್ ಇಂಡಸ್ಟ್ರೀಸ್‌ನಲ್ಲೂ ಈ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಬೆಂಕಿಪೊಟ್ಟಣ ತಯಾರು ಮಾಡುವ ಕಾರ್ಖಾನೆಗಳಲ್ಲಿ ಈ ಮಕ್ಕಳು ಕೆಲಸ ಮಾಡುತ್ತಿದ್ದಾರೆ. ಇದಕ್ಕೋಸ್ಕರವೇ ಒಬ್ಬ ಅಧಿಕಾರಿಗಳೂ ಸಹ ಇದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ ಒಬ್ಬರೇ ಆಫೀಸರು ಇರುವುದು. ಆದುದರಿಂದ ನಾವೇನು ಮಾಡಿದ್ದೇವೆ ಎಂದರೆ, ಬೇರೆ ಇಲಾಖೆಯ ಅಧಿಕಾರಿಗಳು ಎಂದರೆ, ರೆವಿನ್ಯೂ ಇನ್‌ಸ್ಪೆಕ್ಟರ್ ಏನಿದ್ದಾರೆ ಅವರಿಗೆಲ್ಲಾ ಆ ಅಧಿಕಾರವನ್ನು ವಹಿಸಿದ್ದೇವೆ. ಇದನ್ನು ಕಾಯ್ದೆ ಪ್ರಕಾರ ಮಾಡುವುದಕ್ಕೆ ಬಹಳ ಕಷ್ಟವಾಗಿದೆ. ಅದಕ್ಕೋಸ್ಕರ ಬೇರೆ ರೀತಿಯಲ್ಲಿ ಕೆಲಸ ಮಾಡಿದರೂ ಕೂಡಾ ಆ ಮಕ್ಕಳಿಗೆ ವಿದ್ಯಾಭ್ಯಾಸ, ವೊಕೇಷನಲ್ ಟ್ರೈನಿಂಗ್ ಕೊಡುವುದು ಈ ರೀತಿ ಮಾಡಬಹುದೇ ಹೊರತು ಪೂರ್ತಿ ಇದನ್ನು ತಪ್ಪಿಸುವುದು ಕಷ್ಟವಾಗುತ್ತದೆ ಏಕೆಂದರೆ...

ಶ್ರೀ ಯಂ. ಭೂಪತಿ.—ಚೈಲ್ಡ್ ಲೇಬರ್ ಆಕ್ಟನ್ನು ರೆಗ್ಯುಲೇಟ್ ಮಾಡುತ್ತೇವೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ. ಇದರ ಇಂಪ್ಲಿಮೆಂಟೇಷನ್‌ನಲ್ಲಿ ಏನಾದರೂ ತಪ್ಪು ಆಗಿದ್ದರೆ ಅದನ್ನು ಕಂಡುಹಿಡಿಯಲು ಒಂದು ಹೈ ಲೆವಲ್ ಕಮಿಟಿ ಮಾಡಿ, ತಪ್ಪನ್ನು ಕಂಡುಹಿಡಿದು ಆ ಬಗ್ಗೆ ಸರಿಮಾಡಿ.

ಶ್ರೀ ಡಿ. ಮಂಜುನಾಥ್.—ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ, ಯಾವ ರೀತಿ ಮಾಡಬೇಕು ಎನ್ನುವುದಕ್ಕೆ ರೆಗ್ಯುಲೇಟ್ ಮಾಡಬೇಕೋ, ನಿಲ್ಲಿಸಬೇಕೋ ಎಂದು ಹೇಳುವುದಕ್ಕೆ ಬಹಳ ಕಷ್ಟ ಇದೆ. ಕಾಯ್ದೆ ಪ್ರಕಾರ ಅದನ್ನು ತಪ್ಪಿಸುವುದೂ ಬಹಳ ಕಷ್ಟ ಇದೆ. ಅದಕ್ಕೋಸ್ಕರ ಅಧ್ಯಯನ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸುವುದರ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ. ಅದು ಏನು ಮಾಡುತ್ತದೋ ನೋಡೋಣ. ಇದರಲ್ಲಿ ಏನಾದರೂ ಮಾಡಬೇಕಾಗುತ್ತದೆ. ಇದರ ಬಗ್ಗೆ ನಾವು ಬಹಳ ಯೋಚನೆ ಮಾಡಿದ್ದೇವೆ. ಕೇಂದ್ರ ಮಟ್ಟದಲ್ಲೂ ಕೂಡ ಲೇಬರ್ ಕಾನ್‌ಫರೆನ್ಸ್‌ನಲ್ಲಿ ಈ ಬಗ್ಗೆ ೨ ಗಂಟೆ ಚರ್ಚೆಯಾಗಿದೆ. ಕೆಲವರು ಇದನ್ನು ರೆಗ್ಯುಲೇಟ್ ಮಾಡಬೇಕೆಂದು, ಕೆಲವರು ಪ್ರಿವೆಂಟ್ ಮಾಡಬೇಕೆಂದು ಹೇಳಿದರು. ಈ ಬಗ್ಗೆ ಕೇಂದ್ರ ಮಟ್ಟದಲ್ಲಿ ಒಂದು ಬಿಲ್ ತನ್ನಿ ಎಂದು ಹೇಳಿದೆ. ಆ ಬಗ್ಗೆ ಏನು ಮಾಡುತ್ತಾರೋ ಗೊತ್ತಿಲ್ಲ. ರಾಜ್ಯಮಟ್ಟದಲ್ಲಿ ನಾವು ಈ ಬಗ್ಗೆ ತೀರ್ಮಾನ ಮಾಡಿದ್ದೇವೆ. ಇದನ್ನು ತಪ್ಪಿಸಬೇಕೆಂಬುದು ನಮ್ಮ ಉದ್ದೇಶ. ಈ ಬಗ್ಗೆ ಕಮಿಟಿ ಮಾಡಿದ್ದೇವೆ. ಅದು ಏನು ಶಿಫಾರಸ್ಸು ಕೊಡುತ್ತದೋ ಆ ಬಗ್ಗೆ ಚರ್ಚೆ ಮಾಡಿ ಕೊನೆಗೆ ಯೋಜನೆ ಮಾಡಿ ಕೇಂದ್ರದ ಜೊತೆ ಸಂಪರ್ಕ ಮಾಡಿ ಮುಂದಿನ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಅಧ್ಯಕ್ಷರೇ, ಮೆಟರ್ನಿಟಿ ಬೆನಿಫಿಟ್ ಕಾನೂನು ಪ್ರಕಾರ ಸರಿಯಾಗಿ ಆಗುತ್ತಾ ಇಲ್ಲವೆಂದು ಮಾನ್ಯ ಪಂಪಾಪತಿಯವರು ಹೇಳಿದ್ದಾರೆ. ಇದರ ಬಗ್ಗೆ ನಾನು ಇಲಾಖೆಯ ಅಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇನೆ. ಇಲ್ಲಿ ಏನಾಗಿದೆ ಎಂದರೆ, ಬೀಡಿ ಕಾರ್ಮಿಕರಿಗೆ ಮೆಟರ್ನಿಟಿ ಬೆನಿಫಿಟ್ ಕೊಡಬೇಕೆಂದು ಇದೆ. ಬೀಡಿ ಕಾರ್ಮಿಕರಿಗೆ ಕೇರಳದಲ್ಲಿ ಕೊಡುವಂತೆಯೇ ಇಲ್ಲೂ ವೇಜಸ್ ಕೊಡುತ್ತೇವೆ. ಆದರೆ ಕೇರಳದಲ್ಲಿ ಮೆಟರ್ನಿಟಿ ಬೆನಿಫಿಟ್ ಕೊಡುತ್ತಿಲ್ಲ. ಇಲ್ಲಿ ಏನಾಗಿದೆ ಎಂದರೆ, ಮೆಟರ್ನಿಟಿ ಬೆನಿಫಿಟ್ ಅನ್ನು ಸರಿಯಾಗಿ ಕೊಡುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆ. ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಇನ್ನು ಕೆ. ಆರ್. ಮಿಲ್ ಹಾಗೂ ಶಂಕರ್ ಮಿಲ್ ಬಗ್ಗೆ ಹೇಳಿದ್ದಾರೆ. ಕೆ. ಆರ್. ಮಿಲ್ ಬಗ್ಗೆ ನಾನು ಈ ಹಿಂದೆ ಬಹಳ ಸಾರಿ ಹೇಳಿದ್ದೇನೆ. ಇನ್ನು ಶಂಕರ್ ಟೆಕ್ಸ್‌ಟೈಲ್ಸ್ ಮಿಲ್ ಬಗ್ಗೆ ಮಾನ್ಯ ಪಂಪಾಪತಿಯವರಿಗೆ ಹಾಗೂ ನನಗೆ

ಚೆನ್ನಾಗಿ ಗೊತ್ತಿದೆ. ಅವರ ಒಂದು ಸಲಹೆಯನ್ನು ತೆಗೆದುಕೊಂಡೇ ಸರ್ಕಾರ ಆತನಿಗೆ ಅನುಕೂಲ ಮಾಡಬೇಕೆಂದು ಹೇಳಿ ಅಲ್ಲಿ ಭೂಮಿಯನ್ನು ಸ್ಪೈಟ್ ಮಾಡಿ ಮಾರಾಟ ಮಾಡುವುದಕ್ಕೆ ಸರ್ಕಾರ ಮಾಡಿಸಿದೆ. ಈಗಾಗಲೇ ಈ ಕೆಲಸ ಆಗಿದ್ದು, ಅವರಿಗೆ ೧ ಕೋಟಿ ರೂಪಾಯಿ ಹಣ ಬರುತ್ತದೆ. ಆದ್ದರಿಂದ ಅವರು ಫ್ಯಾಕ್ಟರಿಯನ್ನು ಪ್ರಾರಂಭ ಮಾಡಬಹುದಾಗಿದೆ. ಈ ಬಗ್ಗೆ ಪಂಪಾಪತಿಯವರು ಮತ್ತು ನಾನು ಮಾಲೀಕರನ್ನು ಕರೆಸಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆಂದು ಹೇಳುತ್ತೇನೆ. ಇನ್ನು ಕಾಂಪನ್‌ಸೇಷನ್ ಬಗ್ಗೆ ಅನೇಕ ಅರ್ಜಿಗಳು ಇವೆಯೆಂದು ಹೇಳಿದ್ದಾರೆ. ಎಲ್ಲಾ ಕಡೆ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರಿಗೆ ಅಧಿಕಾರವನ್ನು ವಹಿಸಿದ್ದೇವೆ. ಕೆಲವು ಕಡೆ ಎವಿಡೆನ್ಸನ್ನೇ ಕೊಡುವುದಕ್ಕೆ ಹೋಗುವುದಿಲ್ಲ. ಇದನ್ನು ತೀವ್ರಗೊಳಿಸಿ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ. ಇನ್ನು ಅಂಗಡಿಗಳಲ್ಲಿ ೮ ಗಂಟೆಗೂ ಮೀರಿ ಕೆಲಸ ಮಾಡುತ್ತಾರೆಂದು ಹೇಳಿದ್ದಾರೆ. ಇದು ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಮಿನಿಮಮ್ ವೇಜಸ್ ಫಿಕ್ಸ್ ಮಾಡಿ ಇಷ್ಟು ಗಂಟೆಗಳ ಕಾಲ ಕೆಲಸ ಮಾಡಬೇಕೆಂದು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಈ ಬಗ್ಗೆ ನೋಟಿಫಿಕೇಷನ್ ಹೊರಡಿಸುವುದಕ್ಕೆ ಏರ್ಪಾಟು ಮಾಡಿದ್ದೇವೆ.

ಇನ್ನು "ಆಶಾಕಿರಣ ಯೋಜನೆ" ಬಗ್ಗೆ ಹೇಳಬೇಕೆಂದರೆ ಇದು ಬಹಳ ಒಳ್ಳೆಯ ಯೋಜನೆ ಇದೆ. ಅಸಂಘಟಿತ ಕಾರ್ಮಿಕರಿಗಾಗಿ ಈ ಯೋಜನೆಯನ್ನು ಮಾಡಿದ್ದೇವೆ. ಅಶ್ಯೂರೆನ್ಸ್ ಕಂಪೆನಿ ಪ್ರಕಾರ ನಾವೇ ಡೈರೆಕ್ಟಾಗಿ ಮಾಡಿದ್ದೇವೆ. ಇದರಿಂದ ಹೆಚ್ಚು ಜನರಿಗೆ ಅನುಕೂಲವಾಗಿದ್ದರೂ ಇದು ಸಾಕಷ್ಟು ಪ್ರಚಾರವಾಗಿಲ್ಲವೆಂದು ಹೇಳಿರುವುದನ್ನು ನಾನು ಒಪ್ಪುತ್ತೇನೆ. ಈ ಬಗ್ಗೆ ನಾನು ವಾರ್ತಾ ಮತ್ತು ಪ್ರಚಾರ ಇಲಾಖೆಯವರಿಗೆ ತಿಳಿಸಿ ಹೆಚ್ಚು ಪ್ರಚಾರ ಮಾಡಿಸುತ್ತೇವೆ. ಇದರ ಜೊತೆಗೆ ದೂರದರ್ಶನ ಹಾಗೂ ರೇಡಿಯೋಗಳಲ್ಲೂ ಪ್ರಸಾರ ಮಾಡುವ ಬಗ್ಗೆ ಕ್ರಮ ಕೈಗೊಳ್ಳುತ್ತೇವೆ. ಆಶಾಕಿರಣ ಎಂದರೆ, ಇವತ್ತು ಅಸಂಘಟಿತ ಕಾರ್ಮಿಕ, ಅಥವಾ ವ್ಯವಸಾಯಗಾರ ಸಿಡಿಲು ಹೊಡೆದು ಸತ್ತರೆ, ಹಾವು ಕಡಿದು ಸತ್ತರೆ ಅಂತಹವನ ಬಗ್ಗೆ ತಹಶೀಲ್ದಾರರಿಗೆ ಅರ್ಜಿ ಕೊಡಬೇಕಾಗುತ್ತದೆ. ಅವರು ಆ ಬಗ್ಗೆ ತನಿಖೆ ಮಾಡಿದಮೇಲೆ ಅದನ್ನು ಮಂಜೂರು ಮಾಡುವುದಕ್ಕೆ ಅಸಿಸ್ಟೆಂಟ್ ಕಮಿಷನರ್ ಅವರಿಗೆ ಅಧಿಕಾರ ಕೊಟ್ಟಿದ್ದೇವೆ. ಅಪಘಾತದಲ್ಲಿ ಸತ್ತವರಿಗೆ ೫ ಸಾವಿರ ರೂಪಾಯಿವರೆಗೆ, ಕಣ್ಣು ಅಥವಾ ಕಾಲು ಕಳೆದುಕೊಂಡವರಿಗೆ ಎರಡೂವರೆ ಸಾವಿರ, ನಾಲ್ಕು ಸಾವಿರ ಹೀಗೆ ಹಣವನ್ನು ಕೊಡುವ ವ್ಯವಸ್ಥೆ ಇದೆ. ಅಸಿಸ್ಟೆಂಟ್ ಕಮಿಷನರ್ ಮಂಜೂರು ಮಾಡಿ ನಮ್ಮ ಆಫೀಸಿಗೆ ತಿಳಿಸಿದರೆ ನಾವು ಚೆಕ್ ಕಳುಹಿಸುತ್ತೇವೆ. ಇವತ್ತು ಹಣದ ಬಗ್ಗೆ ಯೋಚನೆ ಮಾಡಬೇಕಾಗಿಲ್ಲ. ಹಣವನ್ನು ಲೇಬರ್ ಕಮಿಷನರ್‌ರ ಪಿ ಡಿ. ಅಕೌಂಟ್‌ನಲ್ಲಿ ಇಟ್ಟಿದ್ದೇವೆ, ಇದಕ್ಕೆ ಸಾಕಷ್ಟು ಪ್ರಚಾರ ಸಿಕ್ಕಿಲ್ಲ. ಇನ್ನು ಐ.ಟಿ.ಐ.ನ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ಜಾಸ್ತಿ ಮಾಡಬೇಕೆಂದು ಹೇಳಿದರು. ಇವತ್ತು ಐ.ಟಿ.ಐ.ನ ವಿದ್ಯಾರ್ಥಿಗಳಿಗೆ ೫೦ ರೂಪಾಯಿ ಕೊಡುತ್ತೇವೆ. ಅದು ಬಹಳ ಕಡಿಮೆ ಎಂದರೆ ಅದನ್ನು ಪರಿಶೀಲಿಸುತ್ತೇನೆ. ಇವತ್ತು ಅಲ್ಲಿ ಕೆಲವು ಪರಿಶಿಷ್ಟ ಜಾತಿ ಹಾಗೂ ಪಂಗಡದ ಜನರೂ ವ್ಯಾಸಂಗ ಮಾಡುತ್ತಿದ್ದಾರೆ. ಅವರಿಗೆ ಸ್ಕಾಲರ್‌ಶಿಪ್ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇವತ್ತು ಪಾಲಿಟೆಕ್ನಿಕ್‌ಗಳಲ್ಲಿ ಸ್ಕಾಲರ್‌ಶಿಪ್ ಕೊಡುತ್ತಿದ್ದಾರೆ. ಇನ್ನು ಐ.ಟಿ.ಐ ನಲ್ಲಿ ಎಸ್.ಎಸ್.ಎಲ್.ಸಿ. ಪಾಸ್ ಆದವರನ್ನು ಸೇರಿಸಿಕೊಳ್ಳಬೇಕೆಂದು ಆಲೋಚನೆ ಮಾಡಿದ್ದೇವೆ. ಇವರಿಗೆ ಸ್ಕಾಲರ್‌ಶಿಪ್ ಕೊಡಬೇಕೆಂಬ ವಿಷಯವನ್ನು ಕ್ಯಾಬಿನೆಟ್ ಮುಂದೆ ತಂದು ಅಲ್ಲಿ ಒಪ್ಪಿಗೆಯನ್ನು ಪಡೆದುಕೊಂಡು ಈ ವರ್ಷದಿಂದ ಅವರಿಗೆ ಸ್ಕಾಲರ್‌ಶಿಪ್ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಸ್ಟೈಪೆಂಡ್ ಜಾಸ್ತಿ ಮಾಡುವ ಬಗ್ಗೆ ಪರಿಶೀಲನೆ ಮಾಡಬೇಕಾಗುತ್ತದೆ. ಇದನ್ನು ನಾನು ಪರಿಶೀಲನೆ ಮಾಡುತ್ತೇನೆ. ಇನ್ನು ಖಾಸಗಿಯವರು ಕೆಲವು ಕಡೆ ಚೆನ್ನಾಗಿಯೇ ನಡೆಸುತ್ತಿದ್ದಾರೆ. ಹಿಂದೆ ಏನು ಮಾಡಿದ್ದರು ಎಂದರೆ, ಹಿಂದೆ ಅರ್ಜಿ ಕೊಟ್ಟವರಿಗೆಲ್ಲಾ ಐ.ಟಿ.ಐ. ಕೊಡುತ್ತಿದ್ದರು. ಈಗ ನಾವು ಒಂದು ಕಂಡೀಷನ್ ಹಾಕಿದ್ದೇವೆ. ಯಾರು ಐ.ಟಿ.ಐ. ಪ್ರಾರಂಭ ಮಾಡಬೇಕೆಂದು ಮುಂದೆ ಬರುತ್ತಾರೆ ಅವರು ೫೦ ಸಾವಿರ ರೂಪಾಯಿ ಡಿಪಾಸಿಟ್ ಇಟ್ಟುಕೊಳ್ಳಬೇಕಾಗುತ್ತದೆ. ಆ ಹಣ ಡೈರೆಕ್ಟರ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಮತ್ತು ಆ ಇನ್‌ಸ್ಟಿಟ್ಯೂಟಿನ ಮೇನೇಜ್‌ಮೆಂಟಿನ ಜಾಯಿಂಟ್ ಅಕೌಂಟ್‌ನಲ್ಲಿ ಇರುತ್ತದೆ. ನಾಳೆ ದಿವಸ ಆ ಸಂಸ್ಥೆಯಲ್ಲಿ ಮಿಷಿನರಿಗೋ ಅಥವಾ ಇನ್ಯಾವುದಕ್ಕೋ ಹಣ

ಬೇಕಾದಾಗ ಆ ಹಣವನ್ನು ಉಪಯೋಗಿಸಬಹುದಾಗಿರುತ್ತದೆ. ಆದ್ದರಿಂದ ಇತ್ತೀಚೆಗೆ ಹೆಚ್ಚು ಅರ್ಜಿಗಳು ಬರುತ್ತಿಲ್ಲ. ಇನ್ನು ಇಲ್ಲಿ ಕ್ಯಾಪಿಟೇಷನ್ ಹಣವನ್ನು ಜಾಸ್ತಿ ತೆಗೆದುಕೊಂಡು ಸೀಟ್ ಕೊಡುತ್ತಿದ್ದಾರೆಂದು ಹೇಳುತ್ತಿದ್ದಾರೆ. ಅಂಥದ್ದು ನನ್ನ ಗಮನಕ್ಕೆ ಬಂದಿಲ್ಲ. ಖಾಸಗಿಯಾಗಿ ನಡೆಸುವವರು ಸ್ವಲ್ಪ ಹಣ ತೆಗೆದುಕೊಳ್ಳುತ್ತಾರೆ. ಅದನ್ನು ತಪ್ಪಿಸುವುದು ಕಷ್ಟ ಇದೆ.

ಇನ್ನು ಮಾನ್ಯ ಸದಸ್ಯರಾದ ವೆಂಕಟರಾಮಯ್ಯನವರು ಇನ್ನೊಂದು ವಿಷಯವನ್ನು ಹೇಳಿದರು ಅದು ಏನೆಂದರೆ, ಲೇಬರ್ ಇನ್‌ಸ್ಪೆಕ್ಟರುಗಳು ಬಹಳ ಕರಪ್ಟ್ ಆಗಿದ್ದಾರೆ ಎಂದು. ಅದು ಎಷ್ಟರ ಮಟ್ಟಿಗೆ ಸತ್ಯವೋ ನನಗಂತೂ ಗೊತ್ತಿಲ್ಲ. ಆದರೆ ಅವರು ಸಂಪೂರ್ಣವಾಗಿ ಸ್ವಚ್ಛವಾಗಿದ್ದಾರೆಂದು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಒಂದು ವೇಳೆ ನಿರ್ದಿಷ್ಟವಾಗಿ ಇಂಥ ಇನ್‌ಸ್ಪೆಕ್ಟರು ಈ ರೀತಿ ಮಾಡುತ್ತಿದ್ದಾರೆ, ಲಂಚವನ್ನು ಕಾರ್ಮಿಕರಿಂದ ತೆಗೆದುಕೊಂಡು ಕೆಲಸಮಾಡುತ್ತಿದ್ದಾರೆಂದು ಲಿಖಿತ ಮೂಲಕ ದೂರನ್ನು ಕೊಟ್ಟರೆ ಖಂಡಿತವಾಗಿಯೂ ಅಂಥವರ ವಿರುದ್ಧ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಕಂಪ್ಯೂಟರೈಸೇಷನ್ ಮಾಡುವುದರಿಂದ, ನೌಕರರಿಗೆ ಅನ್ಯಾಯವಾಗುತ್ತದೆ, ತೊಂದರೆಯಾಗುತ್ತದೆಂದು ಹೇಳಿದರು. ಸ್ವಾಮಿ, ನಾವು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಪ್ರಾಯೋಗಿಕವಾಗಿ ಕಂಪ್ಯೂಟರೈಸೇಷನ್ ಮಾಡಿರುವುದು ನಿಜ. ಈ ವಿಚಾರವನ್ನು ಮಾನ್ಯ ಪ್ರಧಾನ ಮಂತ್ರಿಯವರೂ ಹೇಳಿದ್ದಾರೆ ಆದರೆ ಅವರು ಕಂಪ್ಯೂಟರೈಸೇಷನ್ ಮಾಡಿ ಎಂದು ಹೇಳುವುದಕ್ಕೂ ಮುಂಚೆಯೇ ನಾವು ಇದನ್ನು ಮಾಡಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಅಲ್ಲಿ ಯಾವುದೇ ರೀತಿಯ ಅವ್ಯವಹಾರಗಳು ಅನ್ಯಾಯಗಳು ಆಗಬಾರದು, ಸರಿಯಾದ ರೀತಿಯಲ್ಲಿ ಕೆಲಸಗಳಾಗಬೇಕು, ಅನ್ಯಾಯಗಳು ಆಗಬಾರದು, ಸರಿಯಾದ ರೀತಿಯಲ್ಲಿ ಕೆಲಸಗಳಾಗಬೇಕು. ಎನ್ನುವ ದೃಷ್ಟಿಯಿಂದ ಬೆಂಗಳೂರು, ಮಂಡ್ಯ, ಮತ್ತು ಕೋಲಾರ ಈ ಎಂಪ್ಲಾಯ್‌ಮೆಂಟ್ ಕಚೇರಿಗಳಲ್ಲಿ ಕಂಪ್ಯೂಟರ್‌ಗಳನ್ನು ಅಳವಡಿಸಿದ್ದೇವೆ. ಈಗ ಅಲ್ಲಿ ಬಹಳ ಚೆನ್ನಾಗಿ ಕೆಲಸ ನಡೆಯುತ್ತಿದೆ. ಇದೇ ರೀತಿ ಇನ್ನೂ ಬೇರೆಬೇರೆ ಜಿಲ್ಲೆಗಳಲ್ಲೂ ಕಂಪ್ಯೂಟರ್‌ಗಳನ್ನು ಅಳವಡಿಸಬೇಕೆಂದು ಯೋಚನೆ ಮಾಡಿದ್ದೇವೆ,

ಇನ್ನು ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಅಸಂಘಟಿತ ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಶಿವಮೊಗ್ಗದಲ್ಲಿ ಒಂದು ಲೇಬರ್ ಕೋರ್ಟ್ ಬೇಕೆಂದು ಕೇಳಿದ್ದಾರೆ. ಈಗಾಗಲೇ ಈ ವಿಚಾರ ಸರ್ಕಾರದ ಮುಂದಿದ್ದು ಈ ಲೇಬರ್ ಕೋರ್ಟ್‌ಗಳನ್ನು ಎಲ್ಲಿ ಕೊಡಬೇಕು ? ಎಷ್ಟು ಕೊಡಬೇಕೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿದ್ದೇವೆ. ಮಾನ್ಯ ಸದಸ್ಯರು ಶಿವಮೊಗ್ಗಾ ಫೌಂಡ್ರಿಯಲ್ಲಿ ಕಾರ್ಮಿಕರಿಗೆ ಸರಿಯಾಗಿ ಸಂಬಳ ಮತ್ತಿತರ ಸವಲತ್ತುಗಳನ್ನು ಅಲ್ಲಿನ ಮಾಲೀಕರು ಕೊಡುತ್ತಿಲ್ಲವೆಂದು ಹೇಳಿದರು. ಸ್ವಾಮಿ, ಮಾನ್ಯ ಸದಸ್ಯರು ಈ ವಿಚಾರವನ್ನು ಪ್ರಸ್ತಾಪ ಮಾಡಿದಮೇಲೆ ನಾನೇ ಖುದ್ದಾಗಿ ಶಿವಮೊಗ್ಗಾಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇನೆ, ಆ ಆ ಮಾಲೀಕರು ಅಲ್ಲಿನ ಕಾರ್ಮಿಕರಿಗೆ ಸರಿಯಾಗಿ ಸಂಬಳ ಮತ್ತಿತರ ಸೌಲತ್ತುಗಳನ್ನು ಕೊಡುತ್ತಿದ್ದಾರೆ ಅಲ್ಲಿ ಏನಾಗಿದೆ ಎಂದರೆ 2 ಯೂನಿಯನ್‌ಗಳಿವೆ ಒಂದು ಯೂನಿಯನ್‌ನವರು ಸರಿಯಾಗಿ ಸಂಬಳವನ್ನು ಮಾಲೀಕರು ಕೊಡುತ್ತಿಲ್ಲ ಎಂದು ಹೇಳುತ್ತಾರೆ, ಇನ್ನೊಂದು ಯೂನಿಯನ್‌ನವರು ಸಂಬಳವನ್ನು ಸರಿಯಾಗಿ ಕೊಡುತ್ತಿದ್ದಾರೆಂದು ಹೇಳುತ್ತಾರೆ. ಈ ವಿಚಾರಕ್ಕೆ ಸಂಬಂಧಪಟ್ಟಂತೆ ನಾನೇ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಆ ಫೌಂಡ್ರಿಯೂ ಚೆನ್ನಾಗಿ ಕೆಲಸಮಾಡುತ್ತಿದೆ. ಕಾರ್ಮಿಕರಿಗೆ ಸಂಬಳವನ್ನೂ ಅಲ್ಲಿನ ಮಾಲೀಕರು ಕೊಡುತ್ತಿದ್ದಾರೆ. ಅಲ್ಲಿ ಊಟವನ್ನು ಕಾರ್ಮಿಕರಿಗೆ ಸರಿಯಾಗಿ ಕೊಡುತ್ತಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆಯೂ ಕೂಡಾ ಆ ಮಾಲೀಕರನ್ನು ಕರೆಸಿಕೊಂಡು ಕೇಳಿದ್ದೇನೆ. ಅವರು ಊಟವನ್ನೂ ಕೂಡ ಸರಿಯಾಗಿ ಕೊಡುತ್ತಿದ್ದಾರೆ. ನಾನು ಅಲ್ಲಿಗೆ ಹೋಗಿ ಬಂದಮೇಲೆ ಏನಾದರೂ ಅಲ್ಲಿನ ಕಾರ್ಮಿಕರಿಗೆ ತೊಂದರೆಯಾಗಿದ್ದರೆ, ಇತ್ತೀಚಿನ ವಿವರಗಳು ಮಾನ್ಯ ಸದಸ್ಯರ ಹತ್ತಿರ ಏನಾದರೂ ಇದ್ದರೆ ಅದನ್ನು ಮಾನ್ಯ ಸದಸ್ಯರು ನನಗೆ ಕಳುಹಿಸಿಕೊಟ್ಟರೆ ಆ ಮಾಲೀಕರ ವಿರುದ್ಧ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಇನ್ನು ಕೆ.ಎಸ್.ಆರ್.ಟಿ.ಸಿ.ಗೆ ಪ್ರತ್ಯೇಕವಾದ ಒಂದು ಕೋರ್ಟ್‌ನ್ನು ಮಾಡಬೇಕೆಂದು ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರೆ, ಆದರೆ ಕೇವಲ ಕೆ.ಎಸ್.ಆರ್.ಟಿ.ಸಿ ಯವರಿಗೋಸ್ಕರವೇ ಪ್ರತ್ಯೇಕವಾದ ಒಂದು ಕೋರ್ಟ್‌ನ ಅವಶ್ಯಕತೆ ಇಲ್ಲವೆಂದು ನನಗನಿಸುತ್ತದೆ. ಏಕೆಂದರೆ, ಈಗಿರತಕ್ಕ

ಕೋರ್ಟುಗಳು ಸರಿಯಾಗಿ ಕೆಲಸ ಮಾಡಿದರೆ ಇದೇ ಸಾಕಾಗುತ್ತದೆ? ಆದರೆ ಈಗಿರತಕ್ಕ ಕೋರ್ಟುಗಳ ಜೊತೆಗೆ ಇನ್ನು ಒಂದೆರಡು ಕೋರ್ಟುಗಳನ್ನು ತೆರೆದರೆ ಬಹುಶ: ಸಾಕಾಗುತ್ತದೆ. ಆದರೆ ಮಾನ್ಯ ಸದಸ್ಯರು ಕೇಳುವ ರೀತಿಯಲ್ಲಿ ಕೆ.ಎಸ್.ಆರ್.ಟಿ.ಸಿ ಗೋಸ್ಕರವೇ ಒಂದು ಪ್ರತ್ಯೇಕ ಕೋರ್ಟನ್ನು ತೆರೆಯುವ ಅವಶ್ಯಕತೆ ಇಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಮೂಡಲಗಿರಿಯಪ್ಪನವರು ಬಹಳ ಉತ್ತಮ ಸಲಹೆಯನ್ನು ಕೊಟ್ಟಿದ್ದಾರೆ. ಅದು ಏನೆಂದರೆ ಯೂನಿಫಾರಂ ಲಾ ಬರಬೇಕೆಂಬುದು. ಇದು ಕೆ.ಎಸ್.ಆರ್.ಟಿ.ಸಿ.ಗೆ ಸಂಬಂಧಪಟ್ಟಿದ್ದು. ವರ್ಕರ್ಸ್ ಪಾರ್ಟಿಸಿಪೇಷನ್ ಮ್ಯಾನೇಜ್‌ಮೆಂಟ್‌ನ ಜೊತೆ ಹೆಚ್ಚು ಹೆಚ್ಚು ಇದ್ದಷ್ಟೂ ಅವರ ಸಮಸ್ಯೆಗಳನ್ನು ಅವರವರೇ ಇತ್ಯರ್ಥ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಒಂದೇ ಒಂದು ಯೂನಿಯನ್ ಇದೆ. ಈ ಯೂನಿಯನ್‌ನ ಅಧ್ಯಕ್ಷರೇ ಆ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಸದಸ್ಯರಾಗಿದ್ದಾರೆ, ಹೀಗಿರುವುದರಿಂದ ಅವರು ತಮ್ಮ ಸಮಸ್ಯೆಗಳನ್ನು ನಮ್ಮ ಹತ್ತಿರ ತರುವುದೇ ಇಲ್ಲ. ತಮ್ಮ ತಮ್ಮ ಸಮಸ್ಯೆಗಳನ್ನು ತಾವುತಾವೇ ಪರಿಹರಿಸಿಕೊಳ್ಳುತ್ತಾರೆ. ಇದೇ ರೀತಿ ಬೇರೆ ಬೇರೆ ಸಂಘ ಸಂಸ್ಥೆಗಳಲ್ಲೂ ಮಾಡಿಕೊಂಡರೆ ಅವರವರ ಸಮಸ್ಯೆಗಳನ್ನು ಅವರವರೇ ಪರಿಹರಿಸಿಕೊಳ್ಳಬಹುದು. ಈ ವಿಚಾರಕ್ಕೆ ಸಂಬಂಧಪಟ್ಟಂತೆ, ಕಾರ್ಮಿಕರ ಸಮಸ್ಯೆಗಳ ಪರಿಹಾರದ ಬಗ್ಗೆ ದೆಹಲಿಯಲ್ಲಿ ಒಂದು ಸಮ್ಮೇಳವೂ ಆಯಿತು. ಇದರ ಬಗ್ಗೆ ಒಂದು ಸಬ್ ಕಮಿಟಿಯನ್ನು ನೇಮಕ ಮಾಡಲಾಗಿದೆ ಅವರು ಏನು ವರದಿಯನ್ನು ಕೊಡುತ್ತಾರೋ ನೋಡೋಣ. ಇನ್ನೊಂದು ವಿಚಾರ ಏನೆಂದರೆ, ಯೂನಿಯನ್‌ನಲ್ಲಿ ಪೊಲಿಟಿಕಲ್ ಅಫಿಲಿಯೇಷನ್ ಇರಬಾರದೆಂದು ಹೇಳಿದರು. ಇದು ಬಹಳ ಕಷ್ಟದ ಕೆಲಸ. ಆದರೂ ಇದರ ಬಗ್ಗೆ ನಾವು ಒಂದು ಪ್ರಯತ್ನವನ್ನು ಮಾಡುತ್ತಿದ್ದೇನೆ. ಇವತ್ತಿನ ದಿವಸ ಯೂನಿಯನ್‌ನಲ್ಲಿ ಪೊಲಿಟಿಕಲ್ ಪಾರ್ಟೀಸ್ ಇರಲಿ, ಅಥವಾ ಬೇರೆಯವರೂ ಇರಲಿ. ಆದರೆ ನಮಗೆ ಬೇಕಾದುದು ಏನು ? ಯಾವುದೇ ಕೈಗಾರಿಕೆಗಳಾಗಲಿ ಚೆನ್ನಾಗಿ ನಡೆಯಬೇಕು. ಕಾರ್ಮಿಕರಿಗೆ ತೊಂದರೆ ಆಗಬಾರದು, ಅವರಿಗೆ ಎಲ್ಲ ಅನುಕೂಲಗಳೂ ಸಿಕ್ಕಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ರೈತರನ್ನು ದೇಶದ ಬೆನ್ನುಮೂಳೆ ಎಂದು ನಾವು ಕರೆಯುತ್ತೇವೆ. ಅವರು ಉತ್ಪಾದನೆಯನ್ನು ಮಾಡತಕ್ಕ ಜನ. ಅದೇರೀತಿ ಕಾರ್ಮಿಕರೂ ಕೂಡ. ಇದನ್ನು ಸಚಿವರಾಗಲಿ, ಮಾಲೀಕವರ್ಗದವರಾಗಲಿ, ಚೆನ್ನಾಗಿ ನೋಡಿಕೊಳ್ಳಬೇಕು. ಅವರಿಗೆ ನ್ಯಾಯವಾಗಿ ಸಲ್ಲಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕು, ನಾನು ಕಾರ್ಮಿಕರು ಮತ್ತು ಮಾಲೀಕರಲ್ಲಿ ಮನವಿ ಮಾಡಿಕೊಂಡಿದ್ದೇನೆ. ಕೈಗಾರಿಕಾ ಕ್ಷೇತ್ರದಲ್ಲಿ ಉತ್ಪತ್ತಿ ಜಾಸ್ತಿ ಆಗಬೇಕಾದರೆ ಕಾರ್ಮಿಕರ ಪಾತ್ರ ಬಹಳ ಮುಖ್ಯವಾದುದು. ಇದನ್ನು ಕಾರ್ಮಿಕರ ಬಹಳ ಮುಖ್ಯವಾದುದು. ಇದನ್ನು ಕಾರ್ಮಿಕರೂ ಕೂಡ ಒಪ್ಪಿಕೊಂಡಿದ್ದಾರೆ.

ಇನ್ನು ಸಿರಾದಲ್ಲಿ ಬೀಡಿ ಕಾರ್ಮಿಕರು ಬಹಳ ಜನರಿದ್ದಾರೆ, ಅವರಿಗೆ ಅನುಕೂಲ ಮಾಡಿಕೊಡಬೇಕೆಂದರೆ ಮೊದಲು ಅವರಿಗೆ ನಿವೇಶನಗಳನ್ನು ಕೊಡಿಸಬೇಕು. ಇದಕ್ಕಾಗಿ ಅವರಿಗೆ ೫೦೦ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಒಂದು ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಇನ್ನು ಇ.ಎಸ್.ಐ.ಗೆ ಔಷಧಿಗಳು ಸರಿಯಾಗಿ ಸರಬರಾಜಾಗುತ್ತಿಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ನಮ್ಮ ರಾಜ್ಯದ ಈ ಔಷಧಿಗೋಸ್ಕರ ಕೊಡುತ್ತಿರುವಷ್ಟು ಹಣವನ್ನು ಬೇರೆ ಯಾವ ರಾಜ್ಯ ಸರ್ಕಾರಗಳೂ ಕೊಡುತ್ತಿಲ್ಲ. ಈ ಸಾರಿ ನಾವು ೧೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಔಷಧಿಗಳು ಸರಬರಾಜಾಗುತ್ತಿಲ್ಲವೆಂದು ನಮಗೆ ಇದುವರೆಗೂ ಯಾವುದೇ ದೂರು ಬಂದಿಲ್ಲ. ಒಂದುವೇಳೆ ಮಾನ್ಯ ಸದಸ್ಯರ ಗಮನಕ್ಕೆ ಅಂಥ ದೂರು ಯಾವುದಾದರೂ ಬಂದಿದ್ದರೆ ನಿರ್ದಿಷ್ಟವಾಗಿ ಲಿಖಿತ ಮೂಲಕ ತಿಳಿಸಿದರೆ ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಬಯಸುತ್ತೇನೆ.

ಇನ್ನು ಹಿರಿಯೂರಿನ ಮಾನ್ಯ ಸದಸ್ಯರಾದ ರಾಮಪ್ಪನವರು ಅಸಂಘಟಿತ ಕಾರ್ಮಿಕರ ಬಗ್ಗೆ ಒಂದು ಮಾತನ್ನು ಏನು ಹೇಳಿದ್ದಾರೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ದಾವಣಗೆರೆಯ ಮಾನ್ಯ ಸದಸ್ಯರಾದ ಮಲ್ಲಪ್ಪನವರು ಐ.ಟಿ.ಐ.ಗಳಲ್ಲಿ ಹಳ್ಳಿಗಾಡಿನಿಂದ ಬರತಕ್ಕ ಮಕ್ಕಳಿಗೆ ಸೀಟುಗಳನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಹಳ್ಳಿಗಾಡಿನ ಮಕ್ಕಳಿಗೆ

೧೦ ಪರ್ಸೆಂಟ್ ಸೀಟನ್ನು ಜಾಸ್ತಿ ಮಾಡಬೇಕೆಂದು ಮಾಡಿದ್ದೇವೆ. ಆದರೆ ಇನ್ನೂ ಜಾಸ್ತಿ ಮಾಡಬೇಕೆಂದು ಕೇಳಿದ್ದಾರೆ. ಸಾಕಷ್ಟು ಎಕ್ವಿಪ್‌ಮೆಂಟ್ಸ್ ಎಲ್ಲೆಲ್ಲಿ ಇರುತ್ತದೆ, ಅಲ್ಲೆಲ್ಲಾ ಅವಶ್ಯಕತೆಯನ್ನು ನೋಡಿ ವ್ಯವಸ್ಥೆ ಮಾಡುತ್ತೇವೆಂದು ಹೇಳಬಯಸುತ್ತೇನೆ. ಇನ್ನು ಮುಚ್ಚಿರತಕ್ಕ ಕಾರ್ಖಾನೆಗಳ ಕಾರ್ಮಿಕರಿಗೆ ಬೇರೆಕಡೆ ಕೆಲಸವನ್ನು ಒದಗಿಸಬೇಕೆಂದು ಕೇಳಿದ್ದಾರೆ. ಇವತ್ತು ಶಂಕರ್ ಟೆಕ್ಸ್‌ಟೈಲ್ ಮಿಲ್‌ನ ಸುಮಾರು ೮೦೦ ಜನ ಕಾರ್ಮಿಕರಿಗೆ ಕೆಲಸಕ್ಕೆ ತೊಂದರೆಯಾಗಿದೆ ಅವರನ್ನು ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ವ್ಯವಸ್ಥೆ ಮಾಡಿ ಎಂದರೆ ಅದನ್ನು ಮಾಡುವುದು ಕಷ್ಟವಾಗುತ್ತದೆ. ಇದನ್ನು ಎಲ್ಲರೂ ಯೋಚನೆ ಮಾಡಬೇಕು.

ಇನ್ನು ಮಾನ್ಯ ಸದಸ್ಯರಾದ ಶಿವಣ್ಣನವರು ಮಾತನಾಡುತ್ತಾ ಐ.ಟಿ.ಐ ನಲ್ಲಿ ಪಾಸ್ ಆದವರಿಗೆ ಬ್ಯಾಂಕ್‌ನಿಂದ ಸಾಲವನ್ನು ಕೊಡಿಸಿ ಅವರು ಸ್ವಯಂ ಉದ್ಯೋಗ ಮಾಡಿಕೊಳ್ಳಲು ಅವಕಾಶ ಮಾಡಿಕೊಡಬೇಕೆಂದು ಹೇಳಿದರು. ಯಾರು ಐ.ಟಿ.ಐ. ಪಾಸ್ ಮಾಡಿಕೊಂಡು ತಾವೇ ಸ್ವಯಂ ಉದ್ಯೋಗ ಮಾಡಿಕೊಳ್ಳುತ್ತೇವೆಂದು ಮುಂದೆ ಬರುತ್ತಾರೆ. ಅಂಥವರಿಗೆ ಬ್ಯಾಂಕ್‌ನಿಂದ ಸಾಲವನ್ನು ಕೊಡತಕ್ಕ ವ್ಯವಸ್ಥೆ ಈಗಾಗಲೇ ಇದೆ, ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಕಂಶಾಲ್‌ರವರು ಒಂದು ಮಾತನ್ನು ಮಾತನಾಡಿ ಕಾರ್ಮಿಕ ಇಲಾಖೆಯಲ್ಲಿ ಕಾರ್ಮಿಕರ ಕಲ್ಯಾಣ ಮಂಡಲಿಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಿಲ್ಲವೆಂದು ತಿಳಿಸಿದ್ದಾರೆ. ಈಗಾಗಲೇ ೨೩ ಕಾರ್ಮಿಕ ಕಲ್ಯಾಣ ಕೇಂದ್ರಗಳು ಇದ್ದು ಅಲ್ಲಿನ ಕಾರ್ಮಿಕ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಮತ್ತು ಅವರ ಕ್ಷೇಮಾಭ್ಯುದ್ಧಿಗೋಸ್ಕರ ಹಲವಾರು ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ಕಳೆದ ಸಾರಿ ಈ ಬಾಬಿಗೋಸ್ಕರ ೪ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವು. ಈಸಾರಿ ಇನ್ನೂ ಹೆಚ್ಚು ಹಣವನ್ನು ಕೊಡಬೇಕೆಂದು ಉದ್ದೇಶವನ್ನಿಟ್ಟುಕೊಂಡಿದ್ದೇವೆ.

ಆಮೇಲೆ ಶ್ರೀ ಟಿ.ಎಸ್. ಮಣಿಯವರು ನಮ್ಮ ಲೇಬರ್ ಪಾಲಿಸಿ-ಆ್ಯಂಟಿ ಲೇಬರ್ ಪಾಲಿಸಿ ಎಂದು ಹೇಳಿದರು, ಅದನ್ನು ಕೇಳಿ ನನಗೆ ಬಹಳ ವ್ಯಸನವಾಯಿತು. ಇವತ್ತು ಅನೇಕ ಕಾರ್ಖಾನೆಗಳಲ್ಲಿ ಸರ್ಕಾರಕ್ಕೆ ನಷ್ಟವಾಗುತ್ತಿದ್ದರೂ ಸಹ ಅವುಗಳನ್ನು ನಡೆಸುತ್ತಿದ್ದೇವೆ. ಏಕೆಂದರೆ ಕಾರ್ಮಿಕರಿಗೆ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ. ಉದಾಹರಣೆಗೆ ಭದ್ರಾವತಿ ಉಕ್ಕಿನ ಕಾರ್ಖಾನೆಯಿಂದ ಎಷ್ಟು ನಷ್ಟವಾಗುತ್ತಿದೆ ? ಆದರೂ ಸಹ ಹನ್ನೊಂದು ಸಾವಿರ ಕಾರ್ಮಿಕರಿಗೆ ತೊಂದರೆಯಾಗಬಾರದು ಎನ್ನುವ ಉದ್ದೇಶದಿಂದ ಇವತ್ತು ಆ ಕಾರ್ಖಾನೆಯನ್ನು ಮುಚ್ಚಿಲ್ಲ. ಆದಕಾರಣ ನಮ್ಮದು ಆ್ಯಂಟಿ ಲೇಬರ್ ಪಾಲಿಸಿ ಅಲ್ಲ. ಕಾರ್ಮಿಕ ವರ್ಗಕ್ಕೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯಿಂದಲೇ, ಇಷ್ಟೊಂದು ಸರ್ಕಾರಿ ಉದ್ಯಮಗಳಲ್ಲಿ ನಷ್ಟವಾಗುತ್ತಿದ್ದರೂ ಕೂಡ ಅವುಗಳನ್ನು ಮುಚ್ಚದೆ ನಡೆಸಿಕೊಂಡು ಬರಲಾಗುತ್ತಿದೆ. ಹೀಗಿರುವಾಗ ಮಾನ್ಯ ಸದಸ್ಯರು ಹೇಳಿದ್ದು ಕೇಳಿ ಮನಸ್ಸಿಗೆ ತುಂಬಾ ನೋವಾಯಿತು. ಅವರು ಸರಿಯಾಗಿ ತಿಳಿದುಕೊಂಡಿಲ್ಲವೆಂಬುದು ಇದರಿಂದ ಅರ್ಥವಾಗುತ್ತದೆ. ಇನ್ನು, ಈಸ್ಟ್ ವೆಸ್ಟ್ ಹೋಟೆಲ್ ಬಗ್ಗೆ ಒಂದು ಮಾತನ್ನು ಹೇಳಿದರು. ಕನ್ಸಲೇಶನ್ ನಡೆಯುತ್ತಿದೆ. ಬಹುಶಃ ಸರ್ಕಾರ ಇದನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈಗ ಅಂತಿಮ ತೀರ್ಮಾನಕ್ಕೆ ಇನ್ನೂ ಬಂದಿಲ್ಲ. ವಿಚಾರಣೆ ಮಾಡಿ ತೀರ್ಮಾನ ಮಾಡುವುದಕ್ಕೆ ಹೇಳುತ್ತೇನೆ, ಆಮೇಲೆ ಹತ್ತು ಸಾವಿರ ಜನ ಅಸಂಘಟಿತ ಕಾರ್ಮಿಕರು ಬಂದಿದ್ದರು. ಮಾನ್ಯ ಸದಸ್ಯರು ಬಂದಿರಲಿಲ್ಲ, ಆದಷ್ಟು ಜಾಗ್ರತೆ ಮುಖಂಡರ ಮತ್ತು ಸಂಬಂಧಪಟ್ಟ ಇಲಾಖೆಯವರನ್ನು ಕರೆಸಿ ಚರ್ಚೆ ಮಾಡಿ ಏನು ಮಾಡಬೇಕೋ ಎನ್ನುವ ವಿಷಯದಲ್ಲಿ ತೀವ್ರ ಗಮನಹರಿಸುತ್ತೇನೆ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ಕೆ.ಜಿ.ಎಫ್.ನಲ್ಲಿ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಇದೆ. ಅದನ್ನು ಆಪ್‌ಗ್ರೇಡ್ ಮಾಡಬೇಕೆಂದು ಹೇಳಿದ್ದಾರೆ. ಈಗ ಇಲ್ಲಿಂದ ಹೆಸರುಗಳನ್ನು ಟ್ರಾನ್ಸ್‌ಫರ್ ಮಾಡುವುದಕ್ಕೆ ಒಂದು ತೊಂದರೆ ಇದೆ. ಇದನ್ನು ಡಿಸ್ಟ್ರಿಕ್ ಯೂನಿಟ್ ಮಾಡಬೇಕೆಂದು ಇದೆ. ಈ ದಿಸೆಯಲ್ಲಿ ಮಾಡಿ ಇದನ್ನು ಆದಷ್ಟು ಜಾಗ್ರತೆ ಮಾಡುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಇಷ್ಟು ಹೇಳಿ ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಅನೇಕ ಮಾನ್ಯ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ, ಕೆಲವು ಲೋಪದೋಷಗಳ ಬಗ್ಗೆಯೂ ಹೇಳಿದ್ದಾರೆ, ಈ ಲೋಪದೋಷಗಳ ಬಗ್ಗೆ ನಾನು ತೀವ್ರವಾಗಿ ಗಮನಹರಿಸಿ ಅವುಗಳನ್ನು ಸರಿಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ ಮತ್ತು ಮಾನ್ಯ ಸದಸ್ಯರು ಕೊಟ್ಟ ಸಲಹೆಗಳನ್ನು ಪರಿಶೀಲನೆ ಮಾಡಿ ಸೂಕ್ತವಾದ

ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿ ಇಷ್ಟು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಬೇಡಿಕೆಗಳನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳಬೇಕೆಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಮಾತನಾಡಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಬಗ್ಗೆ ಒಳ್ಳೆ ಕೆಲಸ ಮಾಡಿದ್ದೇವೆ ಎಂದು ಹೇಳಿದರು. ಆದರೆ ೧೮೪೦ ಜನರಿಗೆ ಷೋಕಾಸ್ ನೋಟೀಸ್ ಕೊಟ್ಟು ಪ್ರಾಸಿಕ್ಯೂಶನ್ ಮಾಡಿದ್ದು ಬರೀ ೧೮ ಜನರಿಗೆ ಮಾತ್ರ. ಇದೇ ರೀತಿಯಲ್ಲಿ ಇಂಡಸ್ಟ್ರೀಯಲ್ ಅಂಡರ್ ಟೇಕಿಂಗ್ಸ್‌ನಲ್ಲಿ ನೋಡುವಾಗ ಇನ್‌ಸ್ಪೆಕ್ಷನ್ ಮಾಡಲಿಕ್ಕೆ ನಮ್ಮ ಹತ್ತಿರ ಸಿಬ್ಬಂಧಿ ಇಲ್ಲವೆಂದು ಹೇಳಿದರು. ಶಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್‌ನ್ನು ತೆಗೆದುಕೊಂಡು ನೋಡಿದರೆ, ಸುಮಾರು ನಂಬರ್ ಆಫ್ ಕಾಂಟ್ರವೆನಶನ್ ನೋಟೀಸ್ಡ್ ೨೨೨೧ ಮಾಡಿದ್ದಾರೆ. ನಂಬರ್ ಆಫ್ ಇರ್‍ರೆಗ್ಯುಲಾರಿಟೀಸ್ ನೋಟೀಸ್ಡ್ ೪೨೨೬. ಆದರೆ ಷೋಕಾಸ್ ನೋಟಿಸ್ ಇಶ್ಯೂ ಮಾಡಿದ್ದು ೩೪೭ ಜನರಿಗೆ ಮಾತ್ರ. ಅದೇ ರೀತಿ ಪ್ರಾಸಿಕ್ಯೂಶನ್ ಕೂಡ ಹೆಚ್ಚಿಗೆ ಆಗಿಲ್ಲ. ಆದ್ದರಿಂದ ಇದು ಏನು ಎತ್ತಿ ತೋರಿಸುತ್ತದೆ ಎಂದರೆ ಅಧಿಕಾರಿಗಳು ವಿಸಿಟ್ ಮಾಡುತ್ತಾರೆ. ಇನ್‌ಸ್ಪೆಕ್ಷನ್ ಮಾಡಿ ಲಂಚ ತೆಗೆದುಕೊಂಡು ನಂತರ ಬಿಟ್ಟುಬಿಡುತ್ತಾರೆ. ಇಂತಹ ಒಂದು ವ್ಯವಸ್ಥೆ ಆಗಬಾರದು. ಆದ್ದರಿಂದ ಇದನ್ನು ಟ್ಯೂನ್‌ಅಪ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಎಂಪ್ಲಾಯ್‌ಮೆಂಟ್ ಆಫೀಸ್‌ನಿಂದ ಕ್ವಾರ್ಟರ್ಲಿ ರಿಟರ್ನ್ಸ್ ಕಳಿಸಬೇಕೆಂದು ಕಾಯದೆ ಪ್ರಕಾರ ಇದೆ. ಕಳಿಸದೆ ಇದ್ದರೆ ಪ್ರಾಸಿಕ್ಯೂಶನ್‌ಗೆ ಆರ್ಡರ್ ಮಾಡಿದ್ದೇನೆ. ಶಾಪ್ಸ್ ಅಂಡ್ ಎಸ್ಟಾಬ್ಲಿಶ್‌ಮೆಂಟ್ಸ್‌ನಲ್ಲಿ ಅನ್ಯಾಯವಾಗಿದೆ ಎಂದು ಹೇಳಿದ್ದಾರೆ. ಇದನ್ನು ನಾನು ಪರಿಶೀಲನೆ ಮಾಡಿ. ಸೆಟ್‌ರೈಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ. —ಮಾನ್ಯ ಅಧ್ಯಕ್ಷರೇ, ಮಾನ್ಯ ಕಾರ್ಮಿಕ ಮಂತ್ರಿಗಳನ್ನು ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಈ ಐ.ಟಿ.ಐ. ಕಾಲೇಜ್ ಇನ್ಸ್ಟಿಟ್ಯೂಟ್‌ಗಳನ್ನು ಏನು ಪ್ರಾರಂಭ ಮಾಡಿದ್ದಾರೆ, ಅಲ್ಲಿ ಸರಿಯಾದ ಕಟ್ಟಡಗಳಿಲ್ಲ. ಅಲ್ಲಿ ಇರತಕ್ಕಂಥ ವ್ಯವಸ್ಥೆ ನೋಡಿದರೆ, ಮಕ್ಕಳು ಯಾವ ರೀತಿ ಅಭ್ಯಾಸ ಮಾಡುತ್ತಿದ್ದಾರೆ ಎಂದು ಗಮನಿಸಿದರೆ ಬೇಸರವಾಗುತ್ತದೆ, ಇಷ್ಟೊಂದು ಹಣ ಖರ್ಚುಮಾಡಿದರೂ ಕೂಡ ವ್ಯವಸ್ಥಿತವಾದ ರೀತಿಯಲ್ಲಿ ಕಟ್ಟಡಗಳು ಇಲ್ಲದಿದ್ದರೆ, ಈ ಸಂಸ್ಥೆಗಳು ಚೆನ್ನಾಗಿ ನಡೆಯುವುದಕ್ಕೆ ಆಗುವುದಿಲ್ಲ. ಹುಡುಗರು ಹಳೆಯ ಕಟ್ಟಡಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇದರ ಕಡೆಗೆ ಗಮನ ಕೊಡುತ್ತೀರಾ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈ ವರ್ಷ ಕೆಲವು ಸರ್ಕಾರಿ ಐ.ಟಿ.ಐ.ಗಳಿಗೆ ಕಟ್ಟಡ ಕೊಡಬೇಕೆಂದು ಮಾಡುತ್ತಿದ್ದೇವೆ. ಈಗ ಒಟ್ಟು ೩೩ ಐ.ಟಿ.ಐ.ಗಳು ಸರ್ಕಾರದ್ದು ಇವೆ. ಕೆಲವು ಕಡೆ ಬಿಲ್ಡಿಂಗ್ಸ್ ಇಲ್ಲ. ಕಳೆದ ವರ್ಷ ಹಣಕಾಸಿನ ಇತಿಮಿತಿ ನೋಡಿಕೊಂಡು ಕೆಲಸ ಮಾಡುವುದಕ್ಕೆ ತೊಂದರೆಯಾಯಿತು. ಈ ವರ್ಷ ಕೆಲವಕ್ಕಾದರೂ ಕಟ್ಟಡ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಲೇಬರ್ ಆಫೀಸರ್‌ಗಳು ಎಲ್ಲರೂ ಒಳ್ಳೆಯವರು ಇದ್ದಾರೆ ಅಥವಾ ಕೆಟ್ಟವರು ಇದ್ದಾರೆ ಎಂದು ನಾವು ಹೇಳುವುದಕ್ಕೆ ಆಗುವುದಿಲ್ಲ. ಕೆಲವರು ಹೇಗೆ ಇದ್ದಾರೆ ಎಂದರೆ, ಕಾರು ಇಟ್ಟುಕೊಂಡು ಲಾಡ್ಜಿಂಗ್‌ನಲ್ಲಿ ರೂಮು ಮಾಡಿಕೊಂಡು ಇದ್ದಾರೆ. ಇಂಥವರ ಬಗ್ಗೆ ಪೋಲೀಸರನ್ನು ಕೇಳಿದರೆ ವರದಿ ಕೊಡುತ್ತಾರೆ. ಇದನ್ನು ಪ್ರಾಮಾಣಿಕವಾಗಿ ಸರಿಮಾಡಬೇಕು ಎನ್ನುವುದಾದರೆ, ಪ್ರಾಮಾಣಿಕರಾದ ಪೋಲೀಸ್ ಅಧಿಕಾರಿಗಳನ್ನು ಇವರ ಹಿಂದೆ ಬಿಟ್ಟರೆ ಗೊತ್ತಾಗುತ್ತದೆ. ಆಮೇಲೆ ನಮ್ಮ ದಾವಣಗೆರೆ ಐ.ಟಿ.ಐ.ನಲ್ಲಿ ಮೆಷಿನ್‌ಗಳು ಸರಿಯಾಗಿಲ್ಲ. ನಾನು ಹೋಗಿ ನೋಡಿ ಬಂದಿದ್ದೇನೆ. ಅಲ್ಲಿರುವ ಉಪಕರಣಗಳು ಏನೂ ಉಪಯೋಗ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಹೊಸದಾಗಿ ಕಲಿಯತಕ್ಕ ಹುಡುಗರಿಗೆ ತೊಂದರೆಯಾಗುತ್ತದೆ. ಆದ್ದರಿಂದ ಉಪಕರಣಗಳನ್ನು ಮತ್ತು ಮೇಶಿನ್‌ಗಳನ್ನು ಬದಲಾಯಿಸಿ ಅವುಗಳನ್ನು ಆಧುನಿಕ ಮೆಷಿನ್‌ಗಳಾಗಿ ಅಳವಡಿಸುವುದಕ್ಕೆ ಪ್ರಯತ್ನ ಪಟ್ಟರೆ ಅನುಕೂಲವಾಗುತ್ತದೆ. ಹಾಗೆಯೇ ೨೭ ಕೈಗಾರಿಕೆಗಳಲ್ಲಿ ಮಾತ್ರ ಕನಿಷ್ಟ ಕೂಲಿ ನಿಗದಿಮಾಡಿರುತ್ತಕ್ಕದ್ದು. ಅದಷ್ಟು ಬೇಗ ಉಳಿದವಕ್ಕೂ ನಿಗದಿ ಮಾಡಿದರೆ ಒಳ್ಳೆಯದು. ಏಕೆಂದರೆ ಬೆಲೆಗಳೇ ಏರುತ್ತಿವೆ. ಕೊನೆಯದಾಗಿ ದಾವಣಗೆರೆಯಲ್ಲಿ ೫೦ ಹಾಸಿಗೆಗಳ ಆಸ್ಪತ್ರೆಯನ್ನು ಕೊಟ್ಟಿದ್ದಾರೆ. ನೂರು

ಹಾಸಿಗೆಗಳ ಆಸ್ಪತ್ರೆಯನ್ನು ಮಂಜೂರು ಮಾಡಿರುವುದಾಗಿ ಮಾನ್ಯ ಮಂತ್ರಿಯವರು ಹೇಳಿದರು. ನಾನು ಕೇಳಿರುವ ಇಷ್ಟು ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್.—ಐ.ಟಿ.ಐ.ಗಳಲ್ಲಿ ಹಳೆಯ ಉಪಕರಣಗಳನ್ನು ರಿಪ್ಲೇಸ್ ಮಾಡಬೇಕು, ನಿಜ. ಈಗ ಕೇಂದ್ರಸರ್ಕಾರಕ್ಕೆ ಒಂದು ಪ್ರಪೋಸಲ್‌ನ್ನು ಕಳಿಸಿದ್ದೇವೆ. ಕೇಂದ್ರಸರ್ಕಾರದವರು ಇದಕ್ಕೆ ಸಹಾಯ ಕೊಡುತ್ತಿದ್ದಾರೆ. ಇತ್ತೀಚೆಗೆ ಕೇಂದ್ರ ಕಾರ್ಮಿಕ ಸಚಿವರು ಬೆಳಗಾವಿಗೆ ಬಂದಿದ್ದಾಗ ಭೇಟಿಯಾಗಿ ಹೇಳಿದ್ದೇನೆ. ಈ ಉಪಕರಣಗಳನ್ನೂ ಒದಗಿಸುವ ವ್ಯವಸ್ಥೆಯನ್ನು ಮಾಡಲಾಗುವುದು ಆಮೇಲೆ ಲೇಬರ್ ಆಫೀಸರ್‌ಗಳು ರೂಮ್‌ನಲ್ಲಿ ಇರುತ್ತಾರೆ. ಇದು ನನ್ನ ಗಮನಕ್ಕೆ ಬಂದಿದೆ. ಇದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಈಗ ದಾವಣಗೆರೆಗೆ ೫೦ ಬೆಡ್‌ಗಳ ಆಸ್ಪತ್ರೆ ಕೊಟ್ಟಿದ್ದೇವೆ. ಬಹುತೇಕ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಇದು ಮುಗಿದಮೇಲೆ, ಮತ್ತೆ ೫೦ ಬೆಡ್‌ಗಳನ್ನು ಕೊಡಬೇಕೆಂದು ಇದೆ. ಇದು ಕೂಡ ಮಂಜೂರಾಗಿದೆ. ಈಗಾಗಲೇ ಟೆಂಡರ್ ಕರೆಯುವುದಕ್ಕೆ ಏರ್ಪಾಡು ಮಾಡುತ್ತೇನೆ. ಆದಷ್ಟು ಬೇಗ ಇದನ್ನು ಕೂಡ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಐ ಬಿ. ಶಂಕರ್,—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿ ಒಂದು ಮಹಿಳಾ ಐ.ಟಿ.ಐ. ಮಂಜೂರು ಮಾಡಬೇಕೆಂದು ನಾನು ಕಳೆದ ಸಲವೂ ಕೇಳಿದ್ದೆ. ಆದರೆ ಇದರ ಬಗ್ಗೆ ಇದುವರೆಗೂ ಸರ್ಕಾರ ಗಮನಹರಿಸಲಿಲ್ಲ. ಎರಡನೆಯದಾಗಿ, ಕಾರ್ಮಿಕರ ಹೆರಿಗೆ ಭತ್ಯೆಯ ಬಗ್ಗೆ ಕೇಳಿದೆ. ನಾನು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಕಾರ್ಮಿಕರ ಶೋಷಣೆ ಆಗುತ್ತದೆ. ಎಂಟು–ಹತ್ತು ಹೆರಿಗೆಯಾದರೂ ಇದನ್ನು ಕೊಡಬೇಕೆಂದು ಕಾನೂನಿನ ತಿದ್ದುಪಡಿ ಮಾಡದೇ ಹೋದರೆ ಇದರಿಂದ ದೇಶಕ್ಕೇ ಭಾರವಾಗುತ್ತದೆ. ಮೂರನೆಯದಾಗಿ, ಕಾರ್ಮಿಕರ ಸಂಘಗಳ ಬಗ್ಗೆ ನನಗೆ ಅಪಾರ ಗೌರವ ಇದೆ. ಆದರೆ ಗಲ್ಲಿಗೆ ನಾಲ್ಕು ನಾಲ್ಕು ಸಂಘಗಳಂತೆ ಆಗುತ್ತಿವೆ. ಯಾರಿಗಾದರೂ ಒಂದು ಸಂಘದಲ್ಲಿ ಭಿನ್ನಾಭಿಪ್ರಾಯ ಬಂದಕೂಡಲೇ ಒಬ್ಬೊಬ್ಬರು ಒಂದೊಂದು ಸಂಘ ಮಾಡಿಕೊಂಡು ಬಿಡುತ್ತಾರೆ. ಇದರಿಂದ ಎಲ್ಲರಿಗೂ ತೊಂದರೆಯಾಗುತ್ತದೆ. ಇದರ ಬಗ್ಗೆ ನಿರ್ಬಂಧ ಹೇರಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಪ್ಲಾಂಟೇಷನ್ ಆಕ್ಟ್ ಪ್ರಕಾರವಾಗಿ ಅವರಿಗೆ ಮೆಟರ್‌ನಿಟಿ ಬೆನಿಫಿಟನ್ನು ಕೊಡಬೇಕಾಗುತ್ತದೆ. ಫ್ಯಾಮಿಲಿ ಪ್ಲಾನಿಂಗ್ ಎಂದು ಹೇಳತಕ್ಕಂಥದ್ದು ಏನು ಇರುತ್ತದೆ ಇದು ರಾಷ್ಟ್ರೀಯ ಕಾರ್ಯಕ್ರಮ, ಫ್ಯಾಮಿಲಿ ಪ್ಲಾನಿಂಗ್ ಪ್ರಕಾರ ಎಷ್ಟು ಹೆರಿಗೆಯಾದರೂ ಈ ಒಂದು ಬೆನಿಫಿಟ್ ಕೊಡತಕ್ಕಂಥದ್ದಲ್ಲ, ಅದನ್ನು ತಪ್ಪಿಸಬೇಕೆಂದು ಮಾನ್ಯ ಸದಸ್ಯರು ಹೇಳಿರುತ್ತಾರೆ. ಇದರ ಬಗ್ಗೆ ಅಧ್ಯಯನ ಮಾಡಿದ್ದೇವೆ. ಇದು ಕೇಂದ್ರ ಸರ್ಕಾರದ ಒಂದು ಕಾಯಿದೆಯಾಗಿರುತ್ತದೆ. ತಮಿಳುನಾಡು ಮತ್ತು ಕೇರಳದಲ್ಲಿ ಅವರು ಯಾವ ಒಂದು ರೀತಿಯಲ್ಲಿ ಇದನ್ನು ಅನುಸರಿಸಿರುತ್ತಾರೆಂಬುದನ್ನು ತರಿಸಿನೋಡುತ್ತೇನೆ. ಹೆಚ್ಚಿನ ಮಕ್ಕಳಿರತಕ್ಕವರಿಗೆ ಈ ಮೆಟರ್‌ನಿಟಿ ಬೆನಿಫಿಟ್ ಕೊಡಬಾರದು ಎನ್ನುವ ಬಗ್ಗೆ ಕಾಯಿದೆಯನ್ನು ತಿದ್ದುಪಡಿ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಬರೆಯಬೇಕಾಗುತ್ತದೆ. ಬರೆಯುತ್ತೇವೆ. ಒಂದೊಂದು ಯೂನಿಯನ್‌ನಲ್ಲೂ ಒಂದೊಂದು ರೀತಿಯಿರುತ್ತದೆ. ಅದಕ್ಕೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಬಹುಶಃ ಸೆಂಟ್ರಲ್ ಕಾಯಿದೆ ಏನು ಇದೆ ಅದನ್ನೇ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ.

ಇನ್ನು ಏಳು ಜನರು ಇದ್ದರೆ ಒಂದು ಯೂನಿಯನ್ ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಕಾಯಿದೆ ಪ್ರಕಾರ ಮಾಡಿಕೊಂಡಿರುವಾಗ ಅದನ್ನು ತಪ್ಪಿಸುವುದು ಕಷ್ಟವಾಗುತ್ತದೆ. ಇದರ ಬಗ್ಗೆ ತಿದ್ದುಪಡಿ ಮಾಡಿ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರಕ್ಕೆ ಕಾಗದ ಬರೆಯುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ ನಾನು ಮಾತನಾಡುವಾಗ ಒಂದೆರಡು ಸಮಸ್ಯೆಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮೊದಲನೆಯದೇನೆಂದರೆ ಜನತಾ ಸರ್ಕಾರದವರು ನಿರುದ್ಯೋಗ ಸಮಸ್ಯೆಯನ್ನು, ನಮ್ಮ ರಾಜ್ಯದಿಂದ ಹೊಡೆದೋಡಿಸುತ್ತೇವೆಂದು ಘೋಷಣೆ ಮಾಡಿದ್ದರು, ತಾವೇ ಅಂಕಿ ಅಂಶಗಳನ್ನು ಕೊಟ್ಟಿರುವ ಪ್ರಕಾರ ಸುಮಾರು ೧೦,೨೯,೩೫೪ ಜನರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಂಡಿರುತ್ತಾರೆ ಇವರಲ್ಲಿ ಎಷ್ಟು ಜನರು ಕೆಲಸಕ್ಕೆ ಸೇರಿಕೊಂಡಿರುತ್ತಾರೆ.? ಗೌವರ್ನಮೆಂಟ್ ನೌಕರರು ೫೫-೫೮ ಲಕ್ಷ ಜನರು ಇದ್ದಾರೆಂದು ಹೇಳಿರುತ್ತೀರಿ,

ಇವರಲ್ಲಿ ವರ್ಷಕ್ಕೆ ೧೨–೧೩ ಸಾವಿರ ಜನರು ನಿವೃತ್ತರಾಗುತ್ತಾರೆಂದರೆ, ಆ ವೇಕೆನ್ಸಿಗಳೂ ಕೂಡ ಖಾಲಿ ಬೀಳುತ್ತದೆ. ಹೀಗಿದ್ದರೂ ಕೂಡ ನಿರುದ್ಯೋಗ ಸಮಸ್ಯೆ ದಿನೇ ದಿನೇ ಜಾಸ್ತಿಯಾಗುತ್ತಾ ಬರುತ್ತಿದೆ. ಇದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ೧,೮೩೦ ಜನರು ಮಾತ್ರ ಇರುತ್ತಾರೆ ಅಂದರೆ ೧೦,೨೯,೩೫೪ ಜನರಲ್ಲಿ ೧,೮೩೦ ಜನರಿಗೆ ಮಾತ್ರ ಕೆಲಸ ಸಿಕ್ಕಿದೆ. ಆದ್ದರಿಂದ ಮುಂದೆ ಈ ಸಮಸ್ಯೆಗೆ ಪರಿಹಾರ ಮಾಡುವುದಕ್ಕೆ ಏನು ಮಾಡುತ್ತೀರಿ ? ಏನು ಕಾರ್ಯಕ್ರಮವನ್ನು ಕೈಗೊಳ್ಳುತ್ತೀರಿ ಎಂಬುದನ್ನು ಹೇಳಬೇಕು ?

ಎರಡನೆಯದಾಗಿ ಕಾರ್ಖಾನೆಗಳ ಸಂಖ್ಯೆ ೧೧,೪೦೭ ಎಂದು ಹೇಳಿದ್ದೀರಿ. ಇದರಲ್ಲಿ ಡಿಸ್‌ಪ್ಯೂಟ್ಸ್‌ಗೆ ಒಳಗಾಗಿರತಕ್ಕಂಥದ್ದು ೫,೬೦೦ ಕಾರ್ಖಾನೆಗಳು ಅಂದರೆ ಅರ್ಧಕ್ಕಿಂತ ಹೆಚ್ಚು ಕಾರ್ಖಾನೆಗಳಲ್ಲಿ ಇಂಥ ಒಂದು ಕಾರ್ಮಿಕರ ವಿವಾದ ಇದೆ. ಅಂದರೆ ಈಗಿರತಕ್ಕಂಥ ಕೋರ್ಟ್‌ಗಳ ಜೊತೆಗೆ ಇನಷ್ಟು ಕೋರ್ಟ್‌ಗಳನ್ನು ಮಾಡಿದರೂ ಕೂಡ ತೀರ್ಮಾನ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲ ಆದ್ದರಿಂದ ಲೇಬರಸ್‌ಗೂ ಮತ್ತು ಮ್ಯಾನೇಜ್‌ಮೆಂಟ್‌ಗೂ ಕನ್‌ಸಿಲಿಯೇಷನ್ ತೀವ್ರಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಡಿ. ಮಂಜುನಾಥ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದಂಥ ಎರಡು ಪ್ರಶ್ನೆಗಳಿಗೂ ಉತ್ತರವನ್ನು ಹೇಳಿದ್ದೆ. ಮಾನ್ಯ ಸದಸ್ಯರು ಆಗ ಇರಲಿಲ್ಲ ಮತ್ತೆ ಹೇಳುತ್ತೇನೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೋಂದಾಯಿಸಿ ಕೊಂಡಿರತಕ್ಕಂಥವರ ಸಂಖ್ಯೆ ೯ ಲಕ್ಷ ಚಿಲ್ಲರೆ ಇದ್ದಾರೆ. ಹೆಸರು ನೋಂದಾಯಿಸಿಕೊಂಡಿರತಕ್ಕಂಥವರಲ್ಲಿ ಬಹುತೇಕ ಕೆಲಸಗಳು ಸಿಕ್ಕಿರುತ್ತವೆ. ಎಲ್ಲ ಆಫೀಸರುಗಳಿಗೂ ಮತ್ತು ಪಬ್ಲಿಕ್ ಸರ್ವೀಸ್ ಕಮಿಷನರ್‌ರವರಿಗೂ, ಎಲ್ಲ ರಿಕ್ರೂಟ್‌ಮೆಂಟ್ ಕಮಿಟಿಯವರಿಗೂ ಒಂದು ಪತ್ರವನ್ನು ಬರೆದು, ಯಾವುದೇ ಒಂದು ಅರ್ಜಿಯನ್ನು ಕರೆಯತಕ್ಕಂಥ ಸಂದರ್ಭದಲ್ಲಿ, ಆ ಅರ್ಜಿಯಲ್ಲಿ ಒಂದು ಕಾಲವನ್ನು ತೆಗೆದು ಅದರಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ ನಂಬರು ಮತ್ತು ದಿನಾಂಕವನ್ನು ನೋಂದಾಯಿಸುವಂತೆ ತಿಳಿಸುತ್ತೇವೆ. ೧೮ ಸಾವಿರ ಉಪಾಧ್ಯಾಯರುಗಳ ರಿಕ್ರೂಟ್‌ಮೆಂಟ್ ಆಯಿತು. ಅದರಲ್ಲಿ ಎಷ್ಟು ಜನರಿಗೆ ಸಿಕ್ಕಿದೆ ಎಂಬುದು ತಿಳಿಯಲು ಸಾಧ್ಯವಾಗುತ್ತಿಲ್ಲ, ಆದ್ದರಿಂದ ರೀಡ್‌ಜೆಸ್ಟ್ ಮಾಡಬೇಕೆಂದು ತಿಳಿಸಿರುತ್ತೇವೆ. ಮತ್ತೆ ಹಿಂದೆ ಆರು ತಿಂಗಳಿಗೆ ಒಂದುಸಾರಿ ರಿನ್ಯೂವಲ್ ಮಾಡತಕ್ಕಂಥ ಪದ್ಧತಿ ಇತ್ತು. ಈಗ ಅದನ್ನು ಮೂರು ವರ್ಷಕ್ಕೆ ಒಂದು ಸಾರಿ ರಿನ್ಯೂವಲ್ ಮಾಡತಕ್ಕಂಥ ಪದ್ಧತಿಯನ್ನು ಜಾರಿಗೊಳಿಸಿರುತ್ತೇವೆ. ಆರುತಿಂಗಳಿಗೆ ಅವರುಗಳ ಹೆಸರುಗಳನ್ನು ತೆಗೆದುಬಿಡುತ್ತಿದ್ದೆವು ಈಗ ಮೂರು ವರ್ಷಗಳವರೆಗೂ ಅವರ ಹೆಸರು ಇರುತ್ತದೆ, ನಮ್ಮ ಇಲಾಖೆಯ ವತಿಯಿಂದ ಬಹಳಷ್ಟು ಜನರಿಗೆ ಕೆಲಸ ಸಿಕ್ಕಿದೆ.

ಮತ್ತೊಂದು ವಿಷಯ ಮಾನ್ಯ ಸದಸ್ಯರು ಕಾರ್ಖಾನೆಗಳಲ್ಲಿ ಡಿಸ್‌ಪ್ಯೂಟ್ಸ್ ಜಾಸ್ತಿ ಇರುತ್ತದೆಂದು ಹೇಳಿದರು. ಏಳುವರೆ ಲಕ್ಷ ಚಿಲ್ಲರೆ ಜನರು ಲೇಬರರ್ಸ್ ಇದ್ದಾರೆ. ಇಷ್ಟೊಂದು ಲೇಬರರ್ಸ್ ಇರುವಡೆಯಲ್ಲಿ ಡಿಸ್‌ಪ್ಯೂಟ್ಸ್ ಇದ್ದೇ ಇರುತ್ತದೆ. ಪ್ರತಿವರ್ಷ ನಾವು ಇದನ್ನು ಗಮನಿಸುತ್ತಲೇ ಇದ್ದೇವೆ. ಆದಷ್ಟು ಜಾಗ್ರತೆ ತೀರ್ಮಾನವಾಗಬೇಕೆಂಬುದೇ ನಮ್ಮ ಆಶಯ ಇರುತ್ತದೆ. ಸದಸ್ಯರು ಸಲಹೆಯನ್ನು ಕೊಟ್ಟು ಆದಷ್ಟು ಜಾಗ್ರತೆ ಈ ವಿವಾದಗಳನ್ನು ಇತ್ಯರ್ಥ ಮಾಡಬೇಕೆಂದು ಹೇಳಿದ್ದಾರೆ. ಈಗ ಜಡ್ಜ್‌ಸ್‌ನ್ನು ಕರೆಸಿ ಎಲ್ಲ ಪ್ರೊಸಿಡಿಂಗ್ಸ್‌ನ್ನು ಲೇಬರ್ ಕೋರ್ಟಿಗೆ ಕಳುಹಿಸಿಕೊಟ್ಟು ಇತ್ಯರ್ಥಗೊಳಿಸುವ ಬಗ್ಗೆ ಅವರ ಜೊತೆಯಲ್ಲಿ ಮಾತನಾಡಿದ್ದೇನೆ, ಆದಷ್ಟು ಜಾಗ್ರತೆಯಾಗಿ ಡಿಸ್‌ಪೋಸ್ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿರುದ್ಯೋಗವನ್ನು ಹೊಡೆದೋಡಿಸಿಬಿಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದಿರಿ. ಹತ್ತುಲಕ್ಷ ಚಿಲ್ಲರೆ ಜನರು ಇದ್ದಾರೆ. ಇಷ್ಟು ಜನ ನಿರುದ್ಯೋಗಿಗಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಏನು ಕಾರ್ಯಕ್ರಮ ಹಾಕಿಕೊಳ್ಳುತ್ತೀರಿ ಎಂಬುದನ್ನು ಹೇಳಿ.

ಶ್ರೀ ಡಿ. ಮಂಜುನಾಥ್.—ನಮ್ಮ ಇಲಾಖೆಯ ಬಗ್ಗೆ ಹೇಳುವುದಾದರೆ ನಮ್ಮ ಇಲಾಖೆಯಿರುವುದು ಕೆಲಸ ಕೊಡುವುದಕ್ಕಲ್ಲ. ಕೆಲಸ ಕೊಡುವವರನ್ನು ತೋರಿಸುವುದಕ್ಕೆ ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುವುದೇನೆಂದರೆ ಕಾನೂನು ಪ್ರಕಾರ ಎಲ್ಲ ಫ್ಯಾಕ್ಟರಿಯವರನ್ನು ಮತ್ತು ಇಂಡಸ್ಟ್ರಿಯಲಿಸ್ಟ್ಸ್‌ನ್ನು ಕರೆಸಿ ಅವರಿಗೆ ಸಾಕಷ್ಟು ಕೆಲಸ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ನಿರುದ್ಯೋಗ ಸಮಸ್ಯೆ ನಮ್ಮ ರಾಜ್ಯದಲ್ಲಿಯೇ ಅಲ್ಲ, ಇಡಿ ರಾಷ್ಟ್ರವ್ಯಾಪಿಯಾಗಿರುತ್ತದೆ. ನಮ್ಮ

ಇಲಾಖೆಗೆ ಸಂಬಂಧಪಟ್ಟ ಹಾಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನ ಪ್ರಾಮಾಣಿಕವಾಗಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಕೆ.ಬಿ. ಮಲ್ಲಪ್ಪ.—ಮಾನ್ಯ ಅಧ್ಯಕ್ಷರೇ ಕೆಲವು ಕಷ್ಟಕ್ಕೆ ಒಳಗಾದಂಥ ಸಕ್ಕರೆಯ ಕಾರ್ಖಾನೆಗಳು ಮಿಲ್‌ಗಳು ಪೂರ್ಣವಾಗಿ ಮುಚ್ಚಿದ ಮೇಲೆ ಅದರಮೇಲೆ ಅವಲಂಬಿಸಿರತಕ್ಕಂಥ ಕಾರ್ಮಿಕರಿಗೆ ಜೀವನವನ್ನು ನಡೆಸಲು ಕಷ್ಟವಾಗುತ್ತದೆ ಎನ್ನುವ ದೃಷ್ಟಿಯಿಂದ, ಎಲ್ಲಿ ಚೆನ್ನಾಗಿ ಕಾರ್ಖಾನೆಗಳು ನಡೆಯುತ್ತಿದೆ ಮತ್ತು ಎಲ್ಲಿ ಹೊಸದಾಗಿ ಕಾರ್ಖಾನೆಗಳನ್ನು ತೆಗೆಯುತ್ತಾರೆ ಅಲ್ಲಿ ಈ ರೀತಿಯಾಗಿ ತೊಂದರೆಯಾಗಿರತಕ್ಕಂಥ ಕಾರ್ಮಿಕರಿಗೆ ಕೆಲಸವನ್ನು ಕೊಟ್ಟು ಜೀವನೋಪಾಯಕ್ಕೆ ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿದ್ದಕ್ಕೆ ಮಾನ್ಯ ಸಚಿವರು ಹೇಳಿದರು, ಇಲ್ಲಿ ಕಾರ್ಮಿಕ ಸಂಘದ ಯೂನಿಯನ್‌ಗಳು ವಿರೋಧಿಸುತ್ತಾರೆಂದು, ಕಾರ್ಮಿಕ ಸಂಘದವರು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕು ಎನ್ನುವ ಪ್ರಯತ್ನದಲ್ಲಿರುವಾಗ ಏತಕ್ಕೆ ಅವರು ಈ ರೀತಿಯಾಗಿ ವಿರೋಧಿಸತಕ್ಕಂಥದ್ದು ಸಮಂಜಸವೇ ಎನ್ನುವ ಪ್ರಶ್ನೆ ಬರುತ್ತದೆ. ಕಾರ್ಮಿಕರ ಜೀವನದ ಹಿತದೃಷ್ಟಿಯಿಂದ ಕಾರ್ಮಿಕ ಸಂಘದವರೊಡನೆ ಪ್ರಸ್ತಾಪಮಾಡಿ ಅವರಿಗೆ ಉದ್ಯೋಗ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಂಪಾಪತಿ.—ಮಾನ್ಯ ಸದಸ್ಯರು ಯಾವ ಕಾರ್ಮಿಕ ಸಂಘದವರು ವಿರೋಧಿಸುತ್ತಾರೆಂಬುದನ್ನು ಹೇಳಬೇಕು.

ಶ್ರೀ ಡಿ. ಮಂಜುನಾಥ್.—ಮಾನ್ಯ ಸದಸ್ಯರು ಹೇಳಿದಂತೆ ಒಂದು ಕಾರ್ಖಾನೆಯನ್ನು ಮುಚ್ಚಿದರೆ ಅಲ್ಲಿ ಕೆಲಸ ಮಾಡತಕ್ಕಂಥ ಕಾರ್ಮಿಕರಿಗೆ ಬೇರೆ ಕಡೆಯಲ್ಲಿ ಕೆಲಸವನ್ನು ಕೊಡುವ ಬಗ್ಗೆ ಪ್ರಯತ್ನವನ್ನು ಆ ಕಾರ್ಖಾನೆಯವರು ಮಾಡಬೇಕು. ಹಿರಿಯೂರು ಸಕ್ಕರೆ ಕಾರ್ಖಾನೆ ಮುಚ್ಚಿದೆ, ಅಲ್ಲಿರತಕ್ಕಂಥ ಕಾರ್ಮಿಕರಿಗೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಕೊಡಲಿಕ್ಕೆ ಎಲ್ಲ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಕಾರ್ಮಿಕರಿಗೆ ತೊಂದರೆಯಾಗುತ್ತಿದೆ ಎನ್ನುವ ಉದ್ದೇಶದಿಂದ ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ.ಎ. ಉಮರಬ್ಬ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ಇನ್ನೂ ವರೆಗೆ ನಿಗದಿ ಮಾಡಿಲ್ಲ. ನಮ್ಮ ರಾಜ್ಯದ ಬಾರ್ಡರ್ ಏರಿಯಾದಲ್ಲಿ ೧೦ ರೂಪಾಯಿಗಳ ಕೂಲಿ ಇದ್ದರೆ ನೆರೆ ರಾಜ್ಯಗಳಲ್ಲಿ ೧೫ ರೂಪಾಯಿಗಳು ಇರುತ್ತದೆ. ಇಂಥ ಒಂದು ತಾರತಮ್ಯ ಇರುವ ಕಾರಣ ಬೀಡಿ ಕಾರ್ಮಿಕರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ನೆರೆ ರಾಜ್ಯಗಳಂತೆ ನಮ್ಮ ರಾಜ್ಯದಲ್ಲೂ ಕನಿಷ್ಠ ಕೂಲಿಯನ್ನು ನಿಗದಿ ಮಾಡಬೇಕು ಎನ್ನುವುದು ಒಂದು, ಮತ್ತೊಂದು ಏನೆಂದರೆ ಯಾರೇ ಆಗಲಿ ಲೇಬರ್ ಕೋರ್ಟಿಗೆ ನ್ಯಾಯಾಧೀಶರನ್ನು ನೇಮಕಾತಿ ಮಾಡಿದರೆ ಅವರಿಗೆ ಸಂಪೂರ್ಣವಾದ ಪರಿಣತಿ ಇರಬೇಕು. ಅದಕ್ಕೋಸ್ಕರವಾಗಿ ಅವರು ಓರಿಯೆಂಟಲ್ ಕೋರ್ಸ್‌ನ್ನು ಮಾಡಿದ್ದರೆ ಒಳ್ಳೆಯದು. ಇದರ ಬಗ್ಗೆ ಮುಖ್ಯನ್ಯಾಯಾಧೀಶರೊಡನೆ ಚರ್ಚೆಮಾಡಿ ಟ್ರೈನಿಂಗ್ ಕೊಡುವಂಥ ಕಾರ್ಯವನ್ನು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆಂದು ಭಾವಿಸುತ್ತೇನೆ.

ಶ್ರೀ ಡಿ. ಮಂಜುನಾಥ್.—ನಮ್ಮ ರಾಜ್ಯದಲ್ಲಿ ಎರಡು ತಿಂಗಳ ಕೆಳಗೆ ಬೀಡಿ ಕಾರ್ಮಿಕರಿಗೆ ಇಂಟೀರಿಯಮ್ ರಿಲೀಫ್‌ನ್ನು ಕೊಟ್ಟಿದ್ದೇವೆ. ಮೊದಲು ೧೦ ರೂಪಾಯಿ ೮೦ ಪೈಸೆ ಇದ್ದದ್ದನ್ನು ಈಗ ೧೧ ರೂಪಾಯಿ ೬೦ ಪೈಸೆಗೆ ಹೆಚ್ಚಿಸಲಾಗಿದೆ. ಇವರ ವಿಚಾರದಲ್ಲಿ ಅನೇಕ ಕಾರ್ಮಿಕ ಮುಖಂಡರುಗಳು ಮತ್ತು ಬೀಡಿ ಮಾಲೀಕರುಗಳ ನಡುವೆ ನಡೆದಂಥ ಚರ್ಚೆಯ ಫಲವಾಗಿ ಈಗ ಈ ವಿಚಾರ ವೇಜ್ ಬೋರ್ಡ್ ಮುಂದಿದೆ. ಅವರು ಒಂದು ತೀರ್ಮಾನ ಕೈಕೊಳ್ಳುತ್ತಾರೆ. ಕೇರಳದಲ್ಲಿ ೧೫ ರೂಪಾಯಿಗಳನ್ನು ಕೊಡುತ್ತಿದ್ದಾರೆಂದು ಹೇಳಿದರು. ಅದಕ್ಕೆ ಕಾರಣವೆಂದರೆ ಅಲ್ಲಿನ ದಿನೇಶ್ ಬೀಡಿ ಕಂಪನಿಯನ್ನು ಅಲ್ಲಿನ ಸರ್ಕಾರದವರೇ ನಡೆಸುತ್ತಿದ್ದಾರೆ. ಅಲ್ಲಿರುವಂತಹ ಅನೇಕ ಕೋಆಪರೇಟಿವ್ ಫ್ಯಾಕ್ಟರಿಯವರು ಸಹ ಹೆಚ್ಚಿನ ಕೂಲಿಯನ್ನು ಕೊಡುತ್ತಿದ್ದಾರೆ. ಆದರೆ ಅಲ್ಲಿ ಹೆರಿಗೆ ಸೌಲಭ್ಯ ಇಲ್ಲ. ನಮ್ಮ ರಾಜ್ಯದಲ್ಲಿ ಹೆರಿಗೆ ಸೌಲಭ್ಯ ಇದೆ. ನಮ್ಮಲ್ಲಿ ಸಹ ಬೀಡಿ ಕಾರ್ಮಿಕರ ವೇಜಸ್ ಬಗ್ಗೆ ಒಂದು ತೀರ್ಮಾನವನ್ನು ಜಾಗ್ರತೆ ತೆಗೆದುಕೊಂಡು ಒಂದು ನೋಟಿಫಿಕೇಷನ್ ಹೊರಡಿಸುತ್ತೇವೆ.

ಇನ್ನು ಲೇಬರ್ಸ್ ಲಾ ವಿಚಾರ ಚೆನ್ನಾಗಿ ತಿಳಿದಿರುವವನ್ನೇ ಲೇಬರ್ ಕೋರ್ಟುಗಳಿಗೆ ನೇಮಕ ಮಾಡಬೇಕೆಂದು ಹೇಳಿದ್ದಾರೆ. ಇಲ್ಲಿ ಕೆಲಸ ಮಾಡಲು ಹೈಕೋರ್ಟಿನವರು ಡಿಸ್ಟ್ರಿಕ್ಟ್ ಜಡ್ಜ್‌ಗಳನ್ನು

ನೇಮಕ ಮಾಡುತ್ತಾರೆ. ಈ ಡಿಸ್ಟ್ರಿಕ್ಟ್ ಜಡ್ಜ್‌ಗಳಿಗೆ ಹೆಚ್ಚಿನ ಮಾಹಿತಿ ತಿಳಿದಿರುತ್ತದೆ. ಒಂದು ವೇಳೆ ಏನಾದರೂ ತಿಳಿಯದಿದ್ದರೆ, ಸ್ವಲ್ಪ ದಿವಸಗಳ ಕಾಲ ಕೆಲಸ ಮಾಡಿದ ಮೇಲೆ ಎಲ್ಲ ಮಾಹಿತಿಗಳು ಸಹ ಸಿಗುತ್ತವೆ. ಇಲ್ಲಿ ಕೆಲಸ ಮಾಡಲು ಸರಿಯಾದವರನ್ನು ಕಳುಹಿಸುತ್ತಿಲ್ಲ ಎಂದು ಮಾನ್ಯ ಸದಸ್ಯರು ಏನು ಹೇಳಿದರೂ, ಅದನ್ನು ನಾನು ಒಪ್ಪುವುದಿಲ್ಲ. ಈಗಿರುವವರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನು ಮುಂದೆ ಒಳ್ಳೆಯ ಅನುಭವ ಇರುವವರನ್ನೇ ನೋಡಿ ಕಳುಹಿಸಿ ಎಂದು ನಾವು ಹೈಕೋರ್ಟಿನವರಿಗೆ ಹೇಳುತ್ತೇವೆ.

ಶ್ರೀ ಆರ್ ವೆಂಕಟರಾಮಯ್ಯ.—ಅಸಂಘಟಿತ ಕಾರ್ಮಿಕರ ಬಗ್ಗೆ ಒಂದು ಕಮಿಟಿ ರಚನೆ ಮಾಡುತ್ತೇವೆಂದು ಹೋದವರ್ಷದಿಂದಲೂ ಹೇಳುತ್ತಿದ್ದಾರೆ. ಆ ಕಮಿಟಿಯನ್ನು ಯಾವಾಗ ರಚನೆ ಮಾಡುತ್ತಾರೋ ಗೊತ್ತಿಲ್ಲ. ಮುಂದೆ ಇವರು ಅದನ್ನು ರಚನೆ ಮಾಡಿದ ಮೇಲೆ, ಅದು ಏನು ಶಿಫಾರಸ್ ಮಾಡುತ್ತದೋ, ಅದನ್ನು ಸರ್ಕಾರ ಒಪ್ಪುತ್ತದೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ. ಈಗ ನಮ್ಮಲ್ಲಿ ೫ ಲಕ್ಷ ಬೀಡಿ ಕಾರ್ಮಿಕರಿದ್ದಾರೆ. ಮಾನ್ಯ ಉಮರಬ್ಬ ಅವರು ಹೇಳಿದಂತೆ ಕೇರಳಾದಲ್ಲಿ ಸಾವಿರ ಬೀಡಿಗಳನ್ನು ಕಟ್ಟಿದರೆ ೧೫ ರೂಪಾಯಿಗಳ ಕೂಲಿ ಕೊಡುವಾಗ ಇಲ್ಲಿ ಏತಕ್ಕೆ ರೂ. ೧೧–೬೧ ಪೈಸೆ ಕೊಡಬೇಕು ? ಕೋಟ್ಯಾಂತರ ರೂಪಾಯಿಗಳಷ್ಟು ಲಾಭ ಪಡೆಯುತ್ತಿರುವಾಗ, ಬೀಡಿ ಕಂಪನಿ ಮಾಲೀಕರುಗಳು ಕೇರಳಾದಲ್ಲಿ ಕೊಡುತ್ತಿರುವ ಸೌಲಭ್ಯಗಳನ್ನೇ ಇಲ್ಲಿಯೂ ಏತಕ್ಕೆ ಕೊಡಬಾರದು ? ಮತ್ತೆ ನಮ್ಮ ರಾಜ್ಯದಲ್ಲಿ ಸ್ಟೈಫಂಡರಿ ಪದವೀಧರರು ಸುಮಾರು ಹತ್ತು ಸಾವಿರದಷ್ಟು ಇದ್ದಾರೆ. ಈ ಮಾರ್ಚಿ ಕೊನೆಗೆ ಇವರ ಕೆಲಸದ ಅವಧಿ ಮುಗಿಯುತ್ತದೆ. ಆದ್ದರಿಂದ ಅವರನ್ನು ಮಾರ್ಚಿ ನಂತರವೂ ಕೆಲಸದಲ್ಲಿ ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ನಮ್ಮ ಕೋಲಾರದಲ್ಲಿರುವಂತಹ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕಛೇರಿಗೆ ಒಂದು ಸರಿಯಾದ ಸ್ವಂತ ಕಟ್ಟಡ ಇಲ್ಲ. ಈಗ ಒಂದು ಚಿಕ್ಕ ಕಟ್ಟಡದಲ್ಲಿ ಅದು ಕೆಲಸ ಮಾಡುತ್ತಿದೆ. ಈ ಕಛೇರಿಯನ್ನು ಪದೇ ಪದೇ ಬೇರೆ ಬೇರೆ ಕಟ್ಟಡಗಳಿಗೆ ಸ್ಥಳಾಂತರ ಮಾಡುವುದಕ್ಕೆ ಬದಲು ಒಂದು ಖಾಯಂ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಅಸಂಘಟಿತ ಕೃಷಿ ಕಾರ್ಮಿಕರ ಬಗ್ಗೆ ಒಂದು ಸಮಿತಿ ನೇಮಕ ಮಾಡುತ್ತೇನೆಂದು ನಾನು ಆಶ್ವಾಸನೆ ಕೊಟ್ಟಿದ್ದೆ. ಅದರ ಪ್ರಕಾರ ಮಾಡಿದ್ದೇನೆ. ಅದು ೩–೪ ಸಲ ಸಭೆ ಸೇರಿದೆ. ಆ ಸಮಿತಿಯವರು ಇಷ್ಟರಲ್ಲಿಯೇ ತಮ್ಮ ಶಿಫಾರಸ್‌ನ್ನು ಸರ್ಕಾರಕ್ಕೆ ಸಲ್ಲಿಸುತ್ತಾರೆ. ಮತ್ತೆ ಸ್ಟೈಫಂಡರಿ ಪದವೀಧರರನ್ನು ಮಾರ್ಚಿ ನಂತರವೂ ಕೆಲಸದಲ್ಲಿ ಮುಂದುವರೆಸುತ್ತೇವೆ. ಅದಕ್ಕಾಗಿ ಬಜೆಟ್‌ನಲ್ಲಿ ಹಣ ಇಡುತ್ತೇವೆ. ಮಾನ್ಯ ಸದಸ್ಯರು ಕಟ್ಟಡದ ಬಗ್ಗೆ ಹೇಳಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಕಛೇರಿಗೆ ಒಂದು ಸ್ವಂತ ಕಟ್ಟಡ ಕಟ್ಟಿಸಲು ಸೈಟ್ ಕೊಡಬೇಕೆಂದು ನಾವು ಅಲ್ಲಿನ ಡಿ. ಸಿ. ಅವರಿಗೆ ಬರೆದಿದ್ದೇವೆ. ಮಾನ್ಯ ಸದಸ್ಯರು ಅಲ್ಲಿನ ಮುನಿಸಿಪಾಲಿಟಿಯವರಿಗೆ ಹೇಳಿ ಒಂದು ಸೈಟ್ ಕೊಡಿಸಿದರೆ, ನಾವು ಕಟ್ಟಡ ಕಟ್ಟಿಸಲು ವ್ಯವಸ್ಥೆ ಮಾಡುತ್ತೇವೆ,

ಶ್ರೀ ಎಸ್. ಕೆ. ಕಾಂತ.—ಈಗ ನಮ್ಮ ರಾಜ್ಯದಲ್ಲಿ ಖಂಡಸಾರಿ, ಬ್ರೂವರೀಸ್ ಹಾಗೂ ಡಿಸ್ಟಲರಿಗಳು ಏನಿವೆ, ಇವು ಸಕ್ಕರೆ ಕಾರ್ಖಾನೆಗಳ ತರಹ ನಡೆಯುತ್ತಿದ್ದರೂ ಸಹ, ಸಕ್ಕರೆ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ಕೊಡುತ್ತಿರುವಷ್ಟೇ ವೇಜಸ್‌ನ್ನು ಅಲ್ಲಿ ಕೊಡದಿರಲು ಕಾರಣವೇನು ? ಇದರ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಕನ್‌ಸಿಲಿಯೇಷನ್ ಪ್ರೊಸೀಡಿಂಗ್ಸ್ ಬಗ್ಗೆ ಸಂಬಂಧಪಟ್ಟ ಫ್ಯಾಕ್ಟರಿ ಮಾಲೀಕರನ್ನು ಸಮನ್ ಮಾಡುವಂತ ಅಧಿಕಾರ ಈಗ ಕನ್‌ಸಿಲಿಯೇಷನ್ ಆಫೀಸರ್‌ಗೆ ಇಲ್ಲ, ಇದೇ ಕಾರಣದಿಂದ ಕನ್‌ಸಿಲಿಯೇಷನ್ ಆಫೀಸ್ ಬಹಳ ತಡವಾಗಿ ಫೈಲ್ಯೂರ್ ರಿಪೋರ್ಟ್‌ನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತಾರೆ. ಸೆಕ್ರೆಟೇರಿಯಟ್‌ಗೆ ಬಂದಂಥ ಈ ರಿಪೋರ್ಟ್ ಒಂದು ವರ್ಷದವರೆಗೆ ಹಾಗೆಯೇ ಬಿದ್ದಿರುತ್ತದೆ. ಆದ್ದರಿಂದ ಸರ್ಕಾರಕ್ಕೆ ಅವರು ಕಳುಹಿಸಿಕೊಡುವಂತಹ ರಿಪೋರ್ಟ್ ಏನಿದೆ, ಅದನ್ನು ನೇರವಾಗಿ ಕೋರ್ಟಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡುತ್ತೀರಾ ? ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೭೫–೭೬ನೇ ಸಾಲಿನವರೆಗೆ ಅಡಿಷನಲ್ ಲೇಬರ್ ಕಮಿಷನರ್ ಪೋಸ್ಟ್ ಎಂಬುದು ಇತ್ತು. ಶ್ರೀ ಮೀರ್ ಮಕ್ಸೂದಾಲಿಖಾನ್ ಅವರು ಈ ಹುದೆ

ಯಲ್ಲಿದ್ದು ನಿವೃತ್ತರಾದ ಮೇಲೆ ಆ ಪೋಸ್ಟ್‌ನ್ನು ತೆಗೆದುಹಾಕಿದರು. ಈಗ ಮತ್ತೆ ಆ ಪೋಸ್ಟ್‌ನ್ನು ಕ್ರಿಯೇಟ್ ಮಾಡುತ್ತೀರಾ ? ಮತ್ತೆ ನಮ್ಮಲ್ಲಿರುವಂತಹ ಫ್ಯಾಕ್ಟರಿ ಇನ್‌ಸ್ಪೆಕ್ಟರ್ಸ್ ಮತ್ತು ಬಾಯ್ಲರ್ ಇನ್‌ಪೆಕ್ಟರ್ಸ್ ಏನಿದ್ದಾರೆ, ಇವರುಗಳು ಫ್ಯಾಕ್ಟರಿಗಳಿಗೆ ಹೋಗಿ ತನಿಖೆ ಮಾಡುವ ಸಂದರ್ಭದಲ್ಲಿ ಅಲ್ಲಿ ಏನಾದರು ತಪ್ಪುಗಳನ್ನು ಕಂಡುಹಿಡಿದಾಗ, ಆ ಫ್ಯಾಕ್ಟರಿ ಮಾಲೀಕರುಗಳಿಗೆ ೨೦ ರಿಂದ ೩೦ ರೂಪಾಯಿಗಳವರೆಗೆ ದಂಡ ಹಾಕಲಾಗುತ್ತದೆ. ಈಗಿನ ಆಕ್ಟ್‌ನಲ್ಲಿ ಇದಕ್ಕಿಂತ ಜಾಸ್ತಿ ದಂಡ ಹಾಕಲು ಅವಕಾಶವಿಲ್ಲ. ಲಕ್ಷಾಂತರ ರೂಪಾಯಿಗಳವರೆಗೆ ಹಣ ಗಳಿಸುತ್ತಿರುವ ಈ ಮಾಲೀಕರುಗಳು ತಪ್ಪು ಮಾಡಿದಾಗ ಕೇವಲ ೬–೭ ದಿವಸಗಳವರೆಗೆ ಶಿಕ್ಷೆ ಇಲ್ಲವೇ ೨೦–೩೦ ರೂಪಾಯಿಗಳವರೆಗೆ ದಂಡ ವಿಧಿಸುವುದು ಯಾವ ನ್ಯಾಯ? ಇಂತಹವರಿಗೆ ಇನ್ನೂ ಹೆಚ್ಚಿನ ದಂಡವನ್ನು ವಿಧಿಸುವುದಕ್ಕೆ ಅವಕಾಶವಾಗುವಂತೆ ಈಗಿನ ಫ್ಯಾಕ್ಟರಿಗಳ ಆಕ್ಟ್‌ನ್ನು ಬದಲಾವಣೆ ಮಾಡಬೇಕು. ಮತ್ತೆ ಗುಲ್ಬರ್ಗದಲ್ಲಿ ಇ. ಎಸ್. ಐ. ಆಸ್ಪತ್ರೆ ಕಟ್ಟಬೇಕೆಂಬ ವಿಚಾರದಲ್ಲಿ ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್.—ಖಂಡಸಾರಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ವೇಜಸ್ ಕಡಿಮೆ ಇವೆ ಎಂಬ ಬಗ್ಗೆ ನಮಗೆ ದೂರುಗಳು ಬಂದಿವೆ. ಈ ಕಾರ್ಖಾನೆಗಳು ಬೀದರ್‌ನಲ್ಲಿ ಜಾಸ್ತಿ ಇವೆ. ಈ ಖಂಡಸಾರಿ ಸಕ್ಕರೆ ಕಾರ್ಖಾನೆಗಳನ್ನು ನಡೆಸಲು ಡೈರೆಕ್ಟರ್ ಆಫ್ ಶುಗರ್ ಅವರು ಲೈಸನ್ಸ್ ಕೊಡುತ್ತಾರೆ. ಆಂಧ್ರದವರು ಈ ರೀತಿ ಲೈಸನ್ಸ್ ತೆಗೆದುಕೊಂಡು ನಡೆಸುತ್ತಿದ್ದಾರೆ. ವೇಜಸ್ ಸರಿಯಾಗಿ ಕೊಡದಿದ್ದರೂ ಸಹ ಅವರಿಗೆ ಲೈಸನ್ಸ್ ಯಾವ ರೀತಿ ಕೊಡುತ್ತಾರೋ ಗೊತ್ತಿಲ್ಲ. ಈ ಬಗ್ಗೆ ನಮಗೆ ಬಂದಿರುವ ದೂರುಗಳನ್ನು ಪರಿಶೀಲಿಸಲು ಲೇಬರ್ ಕಮೀಷನರ್ ಮತ್ತು ಚೀಫ್–ಇನ್‌ಸ್ಪೆಕ್ಟರ್ ಆಫ್ ಫ್ಯಾಕ್ಟರೀಸ್ ಅವರೇ ಅಲ್ಲಿಗೆ ಖುದ್ದಾಗಿ ಹೋಗಬೇಕೆಂದು ಹೇಳಿದ್ದೇನೆ. ಮತ್ತೆ ಕನ್ಸಿಲಿಯೇಷನ್ ಮಾಡಬೇಕಾದರೆ ಮೇನೇಜ್‌ಮೆಂಟ್‌ನವರನ್ನು ಕಡ್ಡಾಯವಾಗಿ ಕರೆಸಬೇಕೆಂದು ಈಗಿನ ಕಾನೂನಿಗೆ ತಿದ್ದುಪಡಿ ಆಗಿದೆ. ಆದ್ದರಿಂದ ಅವರನ್ನು ಕರೆಸಿ ಕನ್ಸಿಲಿಯೇಷನ್ ಮಾಡುತ್ತಾರೆ. ಈ ಮೊದಲು ಅಡಿಷನಲ್ ಲೇಬರ್ ಕಮೀಷನರ್ ಪೋಸ್ಟ್ ಇತ್ತು, ಈಗ ಇಲ್ಲ ಎಂದು ಹೇಳಿದ್ದಾರೆ. ಇದರ ಬಗ್ಗೆ ಸಹ ಪರಿಶೀಲನೆ ಮಾಡುತ್ತಿದ್ದೇವೆ. ಇ. ಎಸ್. ಐ. ಆಸ್ಪತ್ರೆಯ ಕಟ್ಟಡದ ಬಗ್ಗೆ ಹೇಳಿದ್ದಾರೆ. ಈ ಬಗ್ಗೆ ನಾವು ಇ. ಎಸ್. ಐ. ಕಾರ್ಪೊರೇಷನ್‌ಗೆ ಬರೆದಿದ್ದೇವೆ. ಅಲ್ಲಿಂದ ವರದಿ ಬಂದಮೇಲೆ ನಾವು ಕಟ್ಟಿಸಿಕೊಡುತ್ತೇವೆ.

ಶ್ರೀ ಎಂ. ಎಲ್. ಉಸ್ತಾದ್.—ಈಗ ಲೇಬರ್ ಕೋರ್ಟುಗಳಲ್ಲಿ ಅವಾರ್ಡ್ ದುಡ್ಡು ಏನಿರುತ್ತದೆ ಅದರಲ್ಲಿ ಶೇಕಡಾ ೮೦ ರಷ್ಟನ್ನು ಕಡ್ಡಾಯವಾಗಿ ಷೆಡ್ಯೂಲ್ ಬ್ಯಾಂಕ್‌ಗಳಲ್ಲಿ ಫಿಕ್ಸೆಡ್ ಡಿಪಾಜಿಟ್ ಮಾಡಬೇಕೆಂದು ಒತ್ತಾಯ ಮಾಡುತ್ತಾರೆ. ಆದ್ದರಿಂದ ಇದನ್ನು ತಪ್ಪಿಸಲು ನೀವು ಏನು ಕಾರ್ಯ ಕ್ರಮ ಹಾಕಿಕೊಂಡಿದ್ದೀರಿ ? ನಮ್ಮ ಬಿಜಾಪುರದಲ್ಲಿರುವಂತಹ ಐ. ಟಿ. ಐ. ನಲ್ಲಿ ಕೆಲಸ ಮಾಡುತ್ತಿರುವ ಪ್ರಿನ್ಸಿಪಾಲ್ ಅವರು ತಿಂಗಳಲ್ಲಿ ೪ ದಿವಸಗಳ ಕಾಲ ಮಾತ್ರ ಅಲ್ಲಿದ್ದು ಇನ್ನಿತರ ದಿನಗಳನ್ನು ಬೆಂಗಳೂರಿನಲ್ಲಿಯೋ ಕಳೆಯುತ್ತಿದ್ದಾರೆ. ಆದ್ದರಿಂದ ಇವರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಡಿ. ಮಂಜುನಾಥ.—ಅಲ್ಲಿನ ಐ.ಟಿ.ಐ. ಪ್ರಿನ್ಸಿಪಾಲ್‌ರ ಬಗ್ಗೆ ನಮಗೆ ದೂರು ಬಂದಿದೆ. ಈ ಬಗ್ಗೆ ಅವರಿಗೆ ಶೋಕಾಸ್ ನೋಟೀಸ್ ಇಶ್ಯೂ ಮಾಡುವುದಕ್ಕೆ ಹೇಳಿದ್ದೇನೆ. ಇನ್ನು ಮುಂದೆಯೂ ಅವರು ಇದೇ ರೀತಿ ನಡೆದು ಕೊಂಡರೆ ನಾನು ಅವರ ವಿರುದ್ಧ ಮುಂದಿನ ಕ್ರಮ ಕೈಕೊಳ್ಳುತ್ತೇನೆ.

ಶ್ರೀ ಕೆ ಬಿ. ಶಾಣಪ್ಪ.—ಬೆಂಗಳೂರಿನಲ್ಲಿ ಡೈರೆಕ್ಟರ್ ಆಫ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್ ಕಚೇರಿ ಏನಿದೆ, ಅಲ್ಲಿ ಕೆಲಸ ಮಾಡಲು ಎಷ್ಟು ಜನ ಸಿಬ್ಬಂದಿ ಬೇಕೆಂದು ತಾವು ಏನಾದರು ಪರಿಶೀಲನೆ ಮಾಡಿದ್ದೀರಾ ? ಏಕೆಂದರೆ ಅಲ್ಲಿ ಯಾವಾಗ ಹೋಗಿ ನೋಡಿದರೂ ಪೂಜೆ ಮಾಡುತ್ತಿರುತ್ತಾರೆ. ಯಾರು ಬೇಕಾದರೂ ಹೋಗಿ ನೋಡಲಿ. ಅಲ್ಲಿ ಹೆಚ್ಚಿನ ಸಿಬ್ಬಂದಿ ಇರುವುದರಿಂದಲೇ ಇದೆಲ್ಲಾ ನಡೆಯುತ್ತಿದೆ. ಮಾನ್ಯ ಮಂತ್ರಿಗಳು ಅಲ್ಲಿಗೆ ಒಂದು ಸ್ಟಡಿ ಟೀಮನ್ನು ಕಳುಹಿಸಿಕೊಟ್ಟು, ಅಲ್ಲಿ ಎಷ್ಟು ಜನ ಜಾಸ್ತಿ ಸಿಬ್ಬಂದಿ ಇದ್ದಾರೆ ಎಂಬ ಬಗ್ಗೆ ತನಿಖೆ ಮಾಡಿಸಿ, ಹೆಚ್ಚಿನ ಸಿಬ್ಬಂದಿಯನ್ನು ಬೇರೆ ಕಡೆಗಳಿಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಬೇಕು. ಮತ್ತೆ ಶಹಬಾದ್‌ನಲ್ಲಿ ಒಂದು ಇ ಎಸ್.ಐ. ಆಸ್ಪತ್ರೆಯನ್ನು ಕಟ್ಟಿಸುವುದಾಗಿ ೧೯೬೩ರಲ್ಲಿಯೇ ಹೇಳಿದ್ದರೂ ಸಹ ಅಲ್ಲಿ ಆ ಕೆಲಸ ಇನ್ನೂ ಆಗದಿರುವುದಕ್ಕೆ ಕಾರಣವೇನು ? ಐ. ಟಿ. ಐ. ಗೆ, ಸಂಬಂಧಪಟ್ಟಂತೆ ಎನ್.ಸಿ.ಬಿ.ಟಿ. ಕೋರ್ಸನ್ನು ಕೊಡುವ ಬದಲಾಗಿ ಎಸ್.ಸಿ.ಬಿ.ಟಿ. ಕೋರ್ಸ್‌ನ್ನು ಕೊಡುವುದು ಒಳ್ಳೆಯದು,

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಲ್ಲಿ ಯಾವಾಗಲೂ ಪೂಜೆಯನ್ನು ಮಾಡುತ್ತಿರುತ್ತಾರೆಂದು ಹೇಳಿದ್ದಾರೆ. ನಾನು ಎಲ್ಲಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳಿಗೂ ಇನ್ಸ್‌ಪೆಕ್ಷನ್ ಹೋಗಬೇಕೆಂದು ಇದ್ದೇನೆ. ಹೋದಾಗ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇನ್ನು ಶಹಬಾದ್ ಹಾಸ್ಪಿಟಲ್ ಬಗ್ಗೆ ಹೇಳಿದ್ದಾರೆ. ಅದನ್ನು ಮಂಜೂರು ಮಾಡಲಾಗಿದೆ. ಬಹುತೇಕ ಈ ವರ್ಷದ ಮೇ ತಿಂಗಳಿನಲ್ಲಿ ಫೌಂಡೇಷನ್ ಹಾಕಿಸುತ್ತೇನೆ. ಈ ಹಾಸ್ಪಿಟಲ್ ಜಾಗಕ್ಕೆ ಡಿಸ್‌ಪ್ಯೂಟ್ ಇದ್ದುದರಿಂದ ಸ್ವಲ್ಪ ನಿಧಾನವಾಗಿತ್ತು. ಈಗ ಅದು ಸೆಟಲ್‌ಮೆಂಟ್ ಆಗಿದೆ. ಇನ್ನು ಐ.ಟಿ.ಐ.ಗಳಲ್ಲಿ ಎನ್.ಸಿ.ಬಿ.ಟಿ. ಕೋರ್ಸ್‌ನ್ನು ಮಾಡುವುದರಿಂದ ವಿದ್ಯಾರ್ಥಿಗಳು ಆ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ರಾಷ್ಟ್ರದ ಯಾವುದೇ ಜಾಗದಲ್ಲಿ ಕೆಲಸಕ್ಕೆ ಹೋಗಬಹುದು. ಎಸ್.ಸಿ.ಬಿ.ಟಿ. ಸರ್ಟಿಫಿಕೇಟ್ ತೆಗೆದುಕೊಂಡರೆ ಬರೀ ರಾಜ್ಯದಲ್ಲಿ ಮಾತ್ರ ಕೆಲಸ ಸಿಗುವುದರಿಂದ ಎನ್.ಸಿ.ಬಿ.ಟಿ. ಕೋರ್ಸ್ ಬಹಳ ಒಳ್ಳೆಯದು. ಆದ್ದರಿಂದ ಅದನ್ನು ಕಡ್ಡಾಯ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ೩೩ ಐ.ಟಿ.ಐ., ಕೇಂದ್ರಗಳು ಇವೆ. ಇನ್ನು ಕೆಲವು ಪ್ರೈವೇಟ್ ಆಗಿ ಐ.ಟಿ.ಐ. ಇನ್ಸ್‌ಟ್ಯೂಷನ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಬೇಡಿಕೆ ಬಂದಿವೆ. ಅದರ ಬಗ್ಗೆ ನಾನು ಕೇಂದ್ರ ಸರ್ಕಾರದ ಮಂತ್ರಿಯವರ ಜೊತೆ ಚರ್ಚೆ ಮಾಡಿದ್ದೇನೆ. ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ.—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಹೆಂಚಿನ ಉದ್ದಿಮೆ ಇದೆ. ಇಲ್ಲಿ ತಯಾರಾಗುವ ಹೆಂಚುಗಳು ದೇಶ ವಿದೇಶಗಳಲ್ಲಿ ಕೀರ್ತಿ ಪಡೆದಿವೆ. ಈ ಉದ್ದಿಮೆಯಲ್ಲಿ ೭ ಸಾವಿರಕ್ಕೂ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಅವರ ಕನಿಷ್ಠ ಕೂಲಿಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಕ್ರಮ ತೆಗೆದುಕೊಳ್ಳಬೇಕು. ಆಮೇಲೆ ಉಳ್ಳಾಲದಲ್ಲಿ ಒಂದು E.S.I. ಆಸ್ಪತ್ರೆಯನ್ನು ಕಟ್ಟುವುದಕ್ಕೆ ಜಾಗವನ್ನು ನೋಡಿ ಇಟ್ಟಿದ್ದೀರಿ, ಆದರೆ ಇನ್ನೂ ಆಸ್ಪತ್ರೆಯನ್ನು ಮಾಡುವುದಕ್ಕೆ ಏರ್ಪಾಡು ಮಾಡಿಲ್ಲ ಅದರ ಬಗ್ಗೆಯೂ ಮಾನ್ಯ ಮಂತ್ರಿಯವರು ಕ್ರಮ ತೆಗೆದುಕೊಳ್ಳಬೇಕು. ಬೀಡಿ ಕೂಲಿಕಾರರಿಗೆ ಮನೆಗಳನ್ನು ಕಟ್ಟಿಕೊಡುವ ಬಗ್ಗೆ ಕಾರ್ಯಕ್ರಮಗಳನ್ನು ಮಾಡುತ್ತೀರೋ ಇಲ್ಲವೋ ಎಂಬುದನ್ನು ತಿಳಿಸಬೇಕು.

ಶ್ರೀ ಡಿ. ಮಂಜುನಾಥ್.—ಆದಷ್ಟು ಜಾಗ್ರತೆ ಹಂಚಿನ ಕಾರ್ಖಾನೆ ಕಾರ್ಮಿಕರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಮಿನಿಮಮ್ ವೇಜಸ್ ಬಗ್ಗೆ ಅನೌನ್ಸ್ ಮಾಡಿದ್ದೇವೆ. ಸೌತ್ ಕೆನರಾ ಕಡೆ ಇರುವ ಕೈಗಾರಿಕೆಯಲ್ಲಿ ನೌಕರರು ಒಂದು ದಿನಕ್ಕೆ ಇಷ್ಟು ಕೆಲಸವನ್ನು ಮಾಡಿದರೆ ಇಷ್ಟು ಕೂಲಿ ಎಂದು ನಿಗದಿ ಮಾಡಿದ್ದಾರೆ. ಅದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಇನ್ನು E.S.I ಆಸ್ಪತ್ರೆಯನ್ನು ಕಟ್ಟುವ ಬಗ್ಗೆ ಹೇಳಿದ್ದಾರೆ, ನಾನು ಅದನ್ನು ಪರಿಶೀಲನೆ ಮಾಡಿ, ಅಧಿಕಾರಿಗಳನ್ನು ಕರೆಸಿ ಸೂಚನೆಗಳನ್ನು ಕೊಡುತ್ತೇನೆ. ಇ.ಎಸ್.ಐ. ಆಸ್ಪತ್ರೆಯನ್ನು ಮಾಡಬೇಕಾದರೆ ಅದಕ್ಕೆ ಒಂದು ಗೈಡ್ ಲೈನ್ಸ್ ಇರುತ್ತದೆ, ಅದರ ಪ್ರಕಾರ ನಾವು ಆಸ್ಪತ್ರೆಯನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತೊಂದು ಪ್ರಶ್ನೆಯನ್ನು ಮಾನ್ಯ ಸದಸ್ಯರು ಹೇಳಿದ್ದಾರೆ, ಬೀಡಿ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ಬಗ್ಗೆ. ಮಾನ್ಯ ಸದಸ್ಯರಿಗೆ ನಾನು ಹೇಳುವುದು ಇಷ್ಟೇ, ನಮಗೆ ಸೈಟುಗಳನ್ನು ಕೊಡಿಸಿದರೆ ನಾವು ಕಟ್ಟಡಗಳನ್ನು ಕಟ್ಟಿಸುತ್ತೇವೆ ಕೇಂದ್ರ ಸರ್ಕಾರದ ಹಣ ನಮ್ಮ ಹತ್ತಿರ ಇದೆ. ಆದಷ್ಟು ಬೇಗ ಸೈಟುಗಳನ್ನು ಕೊಡಿಸಿದರೆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇನೆ. ಸೈಟನ್ನು ಕೊಡಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕು.

ಅಧ್ಯಕ್ಷರು.—ಕಾರ್ಮಿಕ ಮಂತ್ರಿಯವರ ಉತ್ತರ ಇಲ್ಲಿಗೆ ಮುಗಿಯಿತು. ಈಗ ಸಮಾಜ ಕಲ್ಯಾಣ ಮಂತ್ರಿಯವರಿಂದ ಉತ್ತರ.

ಸಮಾಜ ಕಲ್ಯಾಣ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ನೆನ್ನೆ ದಿವಸ ಕಾರ್ಮಿಕ ಇಲಾಖೆಯ ಬೇಡಿಕೆ ಮೇಲೆ ಮತ್ತು ಸಮಾಜ ಕಲ್ಯಾಣ ಇಲಾಖೆ ಬೇಡಿಕೆ ಮೇಲೆ ಸುಮಾರು ೧೬ ರಿಂದ ೧೭ ಜನ ಸದಸ್ಯರು ಭಾಷಣ ಮಾಡಿದ್ದಾರೆ. ಎಷ್ಟೋ ಸದಸ್ಯರು ಟೀಕೆಯನ್ನು ಮಾಡಿದ್ದಾರೆ ಹಾಗು ಕೆಲವು ಉಪಯುಕ್ತವಾದ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ

ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನ್ನ ಅಧೀನದಲ್ಲಿ ಇರುವಂತಹ ಡಿಪಾರ್ಟ್‌ಮೆಂಟ್ ಅಂದರೆ, ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್, ಎಸ್.ಸಿ. ಮತ್ತು ಎಸ್.ಟಿ. ವೆಲ್‌ಫೇರ್ ಹಾಗೂ ಬ್ಯಾಕ್‌ವರ್ಡ್ ಕ್ಲಾಸಸ್ ವೆಲ್‌ಫೇರ್‌ಗಳು ಈ ಇಲಾಖೆಯ ವ್ಯಾಪ್ತಿಯೊಳಗೆ ಬರುತ್ತವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ೧೯೮೧ರ ಸೆನ್ಸಸ್ ಪ್ರಕಾರ ಸುಮಾರು ೩ ಲಕ್ಷದ ೭೧ ಸಾವಿರದ ೩೧೫ ಜನಸಂಖ್ಯೆ ಇದೆ. ಈ ಜನ-ಸಂಖ್ಯೆಯಲ್ಲಿ ಚಿಕ್ಕ ಮಕ್ಕಳನ್ನು ಲೆಕ್ಕಕ್ಕೆ ತೆಗೆದು ಕೊಂಡಿರುವುದಿಲ್ಲ. ಇದರಲ್ಲಿ ಹೆಂಗಸರು ೫೦ ಪರ್ಸೆಂಟ್ ಇದ್ದಾರೆ. ಶೆಡ್ಯೂಲ್ ಕ್ಯಾಸ್ಟ್ ಮತ್ತು ದುರ್ಬಲ ವರ್ಗದವರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ ನನ್ನ ಇಲಾಖೆ ಬಹಳ ಕೆಲಸ ಮಾಡುತ್ತಿದೆ. ನಮ್ಮ ರಾಜ್ಯದಲ್ಲಿ ಶೆಡ್ಯೂಲ್ ಕ್ಯಾಸ್ಟ್‌ನವರು ೧೫ ಪರ್ಸೆಂಟ್ ಇದ್ದಾರೆ. ಶೆಡ್ಯೂಲ್ ಟ್ರೈಬ್ಸ್‌ನವರು ೫ ಪರ್ಸೆಂಟ್ ಇದ್ದಾರೆ. ಯಾರಿಗೆ ಸಹಾಯದ ಅವಶ್ಯಕತೆ ಇದೆಯೋ ಯಾರು ಅಸಹಾಯಕ ಪರಿಸ್ಥಿತಿಯಲ್ಲಿ ಇದ್ದಾರೋ ಅಂತಹವರಿಗೆ ನಮ್ಮ ಇಲಾಖೆಯ ವತಿಯಿಂದ ಸಹಾಯವನ್ನು ಕೊಡುತ್ತೇವೆ. ನಮ್ಮ ಇಲಾಖೆಯಲ್ಲಿ ಇರುವ ಮಹತ್ವದ ಪ್ರೋಗ್ರಾಮ್ ಎಂದರೆ ಅಂಗನವಾಡಿ ಸಂಸ್ಥೆಗಳು ಅಂಗನವಾಡಿ ಕೇಂದ್ರಗಳಲ್ಲಿ ೬ ವರ್ಷಕ್ಕಿಂತ ಕಡಿಮೆ ವಯಸ್ಸು ಇರುವ ಮಕ್ಕಳನ್ನು ಸೇರಿಸಿಕೊಳ್ಳಲಾಗುತ್ತದೆ. ಈ ಮಕ್ಕಳಿಗೆ ಪೌಷ್ಟಿಕ ಆಹಾರ, ಶಿಕ್ಷಣವನ್ನು ಕೊಡಲಾಗುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಶುಶ್ರೂಷೆಯನ್ನು ಮಾಡಲಾಗುತ್ತದೆ. ಮಕ್ಕಳಿಗೆ ಚುಚ್ಚು ಮದ್ದುಗಳನ್ನು ಹಾಕಿಸಲಾಗುತ್ತದೆ. ಅವಶ್ಯ ಬಿದ್ದರೆ ರೋಗಿಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗುವುದಕ್ಕೆ ಸಹಾಯವನ್ನು ಈ ಅಂಗನವಾಡಿ ಸದಸ್ಯರುಗಳು ಮಾಡುತ್ತಾರೆ. ೧೯೮೫-೮೬ರಲ್ಲಿ ೮ ಹೊಸ ಅಂಗನವಾಡಿ ಬ್ಲಾಕ್‌ಗಳನ್ನು ಮಂಜೂರು ಮಾಡಲಾಗಿದೆ. ಕರ್ನಾಟಕದಲ್ಲಿ ಒಟ್ಟು ೮೬ ಅಂಗನವಾಡಿ ಕೇಂದ್ರಗಳು ಈಗ ಕೆಲಸ ಮಾಡುತ್ತಿವೆ, ಅವುಗಳಲ್ಲಿ ೩೦ ಅಂಗನವಾಡಿ ಕೇಂದ್ರಗಳನ್ನು ರಾಜ್ಯ ಸರ್ಕಾರ ನಡೆಸುತ್ತಿದೆ, ೫೬ ಅಂಗನವಾಡಿ ಕೇಂದ್ರಗಳನ್ನು ಕೇಂದ್ರ ಸರ್ಕಾರದವರು ನಡೆಸುತ್ತಿದ್ದಾರೆ, ಇಷ್ಟೊಂದು ಅಂಗನವಾಡಿ ಕೇಂದ್ರಗಳು ಯಾವ ರಾಜ್ಯದಲ್ಲೂ ಇಲ್ಲವೆಂದು ಸದನಕ್ಕೆ ತಿಳಿಸುವುದಕ್ಕೆ ಸಂತೋಷವಾಗುತ್ತದೆ. ನಾನು ಮಾನ್ಯ ಮುಖ್ಯ ಮಂತ್ರಿಯವರಿಗೆ ಬಹಳ ಅಭಾರಿಯಾಗಿದ್ದೇನೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಮೊದಲು ಒಂದು ಮಗುವಿಗೆ ೨೫ ಪೈಸೆಯನ್ನು ಖರ್ಚು ಮಾಡಲಾಗುತ್ತಿತ್ತು. ಈಗ ಸರಾಸರಿ ೫೦ ಪೈಸೆಗೆ ಮಾನ್ಯ ಮುಖ್ಯ ಮಂತ್ರಿಯವರು ಏರಿಸಿದ್ದಾರೆ ನಮಗೆ ಸಬ್ಸಿಡಿಯಲ್ಲಿ ಗೋಧಿಯೂ ಬರುತ್ತಿರುವುದರಿಂದ ಬಹಳ ಅನುಕೂಲ ವಾಗುತ್ತದೆ, ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಎಲ್ಲಾ ಅನುಕೂಲಗಳನ್ನು ಒದಗಿಸುತ್ತಿದ್ದೇವೆ. ೧೯೮೬-೮೭ರಲ್ಲಿ ಇನ್ನೂ ೧೨ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಿಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಪತ್ರವನ್ನು ಬರೆದಿದ್ದೇವೆ. ಈಗಾಗಲೇ ೮ ಅಂಗನವಾಡಿ ಕೇಂದ್ರಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ.

ಶ್ರೀ ಬಿ. ಎಲ್. ಪಾಟೀಲ್.— ಅಂಗನವಾಡಿಯವರು ನಮಗೆ ಈಗಾಗಲೇ ರಿಪ್ರೆಸೆಂಟೇಶನ್ ಕೊಟ್ಟಿದ್ದಾರೆ. ಹೋದ ಸಾರಿ ಕೊಟ್ಟಿದ್ದರು, ನಮಗೆ ಪೇಮೆಂಟ್‌ಗೆ ತೊಂದರೆಯಾಗುತ್ತಿದೆ. ಆಹಾರ ಸಾಗಾಣಿಕೆಯಲ್ಲಿ ತೊಂದರೆಯಾಗುತ್ತಿದೆ, ಎಂದು ಅದರಲ್ಲಿ ಹೇಳಿದ್ದಾರೆ. ಆದುದರಿಂದ ಅವರಿಗೆ ನಾವು ಆನರೇರಿಯಮ್ ಕೊಡುತ್ತೇವೆ ಅದನ್ನು ಚೆಕ್ ಮೂಲಕ ಕೊಡುವಂತಹ ವ್ಯವಸ್ಥೆಯನ್ನು ಈಗಾಗಲೇ ಮಾಡಿದ್ದೇವೆ. ಆಹಾರ ವಸ್ತುಗಳ ಸೂಕ್ತ ಸಾಗಾಣಿಕೆ ಮಾಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಅಷ್ಟೆ ಅಲ್ಲ, ಅವರಿಗೆ ಕೊಡುವಂತಹ ಗೌರವಧನವನ್ನು ಕೂಡಾ ಜನತಾ ಸರಕಾರವು ಬಂದಮೇಲೆ ಹೆಚ್ಚು ಮಾಡಿದ್ದೇವೆ, ಆದರೂ ಕೂಡ ಅವರು ಸಾಕುವುದಿಲ್ಲ ಎಂದು ಹೇಳಿದ್ದಾರೆ, ಅದಕ್ಕಾಗಿ ನಾವು ಕೇಂದ್ರ ಸರಕಾರಕ್ಕೆ ರೆಕಮೆಂಡ್ ಮಾಡಿದ್ದೇವೆ. ನಮ್ಮಲ್ಲಿ ಟೋಟಲ್ ಬ್ಲಾಕ್ಸ್ ೯೪ ಆಗುತ್ತವೆ. ಅಂಗನವಾಡಿಗಳು, ೧೩,೨೦೦ ಆಗುತ್ತವೆ. ೧೦,೩೨,೦೦೦ ಮಕ್ಕಳು ಕರ್ನಾಟಕ ರಾಜ್ಯದಲ್ಲಿ ಇದರ ಸೌಲಭ್ಯವನ್ನು ಪಡೆಯುತ್ತಾ ಇದ್ದಾರೆ. ಇನ್ನೂ ಕೆಲವು ಬ್ಲಾಕ್ಸ್ ಬರುತ್ತಾ ಇವೆ, ಅವಲ್ಲದೆ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದ ತುಂಬ ಅಂಗನವಾಡಿಗಳನ್ನು ನಡೆಸಬೇಕೆಂದು ಸರಕಾರ ಯೋಜನೆ ಇಟ್ಟುಕೊಂಡಿದೆ.

ಇನ್ನು ಭಗಿನಿಯವರ ಸಲುವಾಗಿ ಹೇಳುವುದಾದರೆ, ಕಷ್ಟದಲ್ಲಿರುವಂತಹ ಮಹಿಳೆಯರಿಗಾಗಿ ೧೮ ರಿಸೆಪ್ಶನ್ ಸೆಂಟರ್‌ಗಳನ್ನು ಮಾಡುತ್ತಾ ಇದ್ದೇವೆ. ೮ ಸ್ಟೇಟ್ ಹೋಮ್‌ಗಳು, ಇವರ ರಕ್ಷಣೆಗೆ ವಸತಿ ಹಾಗೂ ಜೀವನಕ್ಕೆ ಉಪಯೋಗವಾಗುವಂತಹ ಉದ್ದೇಶ ಇಟ್ಟುಕೊಂಡು ಇವರಿಗೆ, ಹೊಲಿಗೆ, ಕೈಮಗ್ಗ, ಚಪ್ಪಲಿ ತಯಾರಿ, ಮುಂತಾದ ಕೆಲಸವನ್ನು ಮಾಡಲು ಸಹಕಾರಿಯಾಗುವಂತೆ ಇವರಿಗೆ ಟ್ರೈನಿಂಗ್ ಕೊಡುತ್ತಾ ಇದ್ದೇವೆ. ಅದಲ್ಲದೆ ಸಬ್ಸಿಡಿಯನ್ನು ಕೂಡ ಕೊಡುತ್ತಾ ಇದ್ದೇವೆ. ೧೯೮೫-೮೬

ತಲ್ಲಿ ೧,೩೦೦ ಜನ ಮಹಿಳೆಯರು ಇದರ ಲಾಭವನ್ನು ಪಡೆದುಕೊಂಡಿದ್ದಾರೆ. ೧೯೮೬-೮೭ರಲ್ಲಿ ರಾಜ್ಯದಲ್ಲಿರುವ ಭಗಿನಿಯರಿಗೆ ಹೆಚ್ಚು ಸಹಾಯ ಮಾಡಬೇಕೆಂದು ಬ್ಯಾಕ್‌ವರ್ಡ್‌ಕ್ಲಾಸ್ ಕಾರ್ಪೋರೇಶನ್ ಇದೆ, ಮೈನಾರಿಟಿ ಕಾರ್ಪೋರೇಷನ್ ಇದೆ, ಹಾಗೆಯೇ ಹೆಣ್ಣುಮಕ್ಕಳಿಗೆ ವುಮನ್ಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಒಂದನ್ನು ಈ ವರ್ಷವೇ ಮಾಡಬೇಕೆಂದು ಇದ್ದೇವೆ. ಅದಕ್ಕೋಸ್ಕರವಾಗಿ ಸುಮಾರು ೩೧ ಲಕ್ಷ ರೂ.ಗಳ ಪ್ರೊವಿಷನ್ ಇವೊತ್ತು ಇಟ್ಟಿದ್ದೇವೆ. ಆದರಿಂದ ಮಹಿಳೆಯರು ಸೂಕ್ತ ಸಾಲವನ್ನು ಪಡೆಯ ಬಹುದು.

ಇನ್ನು ನಿರ್ಗತಿಕ ಮಕ್ಕಳಿಗೆ—

ಶ್ರೀ ಬಿ. ಬಸವಲಿಂಗಪ್ಪ.—ಹೆಣ್ಣುಮಕ್ಕಳ ಬಗ್ಗೆ ಇವರು ಬಹಳ ಸ್ವಾರಸ್ಯಕರವಾಗಿ ಮಾತನಾಡುತ್ತಾರೆ. ತಮ್ಮ ಮಾತನ್ನು ಪ್ರಾರಂಭ ಮಾಡುವಾಗ ರಿಸೆಪಶನ್ ಸೆಂಟರ್ ಬಗ್ಗೆ ಪ್ರಾರಂಭ ಮಾಡಿದ್ದಾರೆ.

(ಗೊಂದಲ)

ಶ್ರೀ ಪಿ. ಎಲ್. ಪಾಟೀಲ್.—ಹೆಣ್ಣುಮಕ್ಕಳಿಗೂ, ನಿರ್ಗತಿಕ ಮಕ್ಕಳಿಗೂ ಏನೇನು ಕಲ್ಯಾಣ ಯೋಜನೆಗಳನ್ನು ಹಾಕಿಕೊಂಡಿದ್ದೇವೆ ಅದನ್ನು ಹೇಳುತ್ತಾ ಇದ್ದೇನೆ.

ಛೇರ್‌ಮೆನ್.—ಸಚಿವರು ತಮ್ಮ ಉತ್ತರವನ್ನು ಹೇಳಿಮುಗಿಸಲಿ, ಅನಂತರ ತಾವುಗಳು ಮಾತನಾಡ ಬಹುದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಮಾಜ ಕಲ್ಯಾಣ ಸಚಿವೆಯರು ಇದ್ದಾರೆ, ಅವರು ಹೆಣ್ಣುಮಕ್ಕಳ ಬಗ್ಗೆ ಮಾತನಾಡಲಿ.

ಶ್ರೀ ಪಿ. ಎಲ್ ಪಾಟೀಲ್.—ಈ ನಿರ್ಗತಿಕ ಹುಡುಗರ ಸಲುವಾಗಿ ಪ್ರತಿಯೊಬ್ಬರಿಗೂ ೧೦೪ರೂ.ಗಳನ್ನು ಇದುವರೆಗೂ ನಾವು ಕೊಡುತ್ತಾ ಇದ್ದೇವೆ. ಅದನ್ನು ಈಗ ಹೆಚ್ಚು ಮಾಡಿ ೧೯೦ ರೂ.ಗಳನ್ನು ತಿಂಗಳಿಗೆ ಕೊಡಬೇಕೆಂದು ಮಾಡಿದ್ದೇವೆ. ಇಂತಹ ಸಂಸ್ಥೆಗಳು ನಮ್ಮಲ್ಲಿ ಹೆಚ್ಚು ಸ್ಥಾಪನೆ ಮಾಡಬೇಕೆಂದು, ಹಾಗೂ ಅಂತಹ ಸಂಸ್ಥೆಗಳಿಗೆ ಉತ್ತೇಜನ ಕೊಡಬೇಕೆಂದು ಮಾಡಿದ್ದೇವೆ, ಹಾಗೂ ಅವುಗಳಿಗೆ ಉತ್ತಮ ಆಹಾರ, ವಸತಿ ಮತ್ತಿತರ ಸೌಲಭ್ಯಗಳನ್ನು ಒದಗಿಸಬೇಕೆಂದು ಮಾಡಿದ್ದೇವೆ. ಅದಕ್ಕಾಗಿ ಹೆಚ್ಚು ಹಣವನ್ನು ಇಟ್ಟಿದ್ದೇವೆ. ಮತ್ತು ಇಂತಹ ಸಂಸ್ಥೆಗಳನ್ನೂ ಹೆಚ್ಚು ಹೆಚ್ಚಾಗಿ ಪ್ರಾರಂಭಿಸಬೇಕೆಂದು ನಮ್ಮ ಇಚ್ಛೆಯಾಗಿದೆ ಅವರಿಗೆಲ್ಲರಿಗೂ ಮಾರ್ಚ್ ೩೧ರೊಳಗಾಗಿ ಗ್ರಾಂಟ್ ಇನ್ ಏಡ್ ಕೊಡಬೇಕೆಂದು ಈಗಾಗಲೇ ಸೂಕ್ತ ಏರ್ಪಾಡನ್ನು ಮಾಡಿದ್ದೇವೆ. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ಅನೇಕ ಸಾಮಾಜಿಕ ಭದ್ರತೆಯನ್ನು ಮತ್ತು ಕಲ್ಯಾಣ ಯೋಜನೆಗಳನ್ನು ಜಾರಿಗೆ ತರಬೇಕೆಂದು ಹೇಳಿ, ಹೆಣ್ಣುಮಕ್ಕಳಿಗೆ, ನಿರ್ಗತಿಕ ಮಕ್ಕಳಿಗೆ, ವಿಧವೆಯರಿಗೆ, ಪೆನ್‌ಶನ್ ಕೊಡುತ್ತಾ ಇದ್ದೇವೆ. ಅಂತೆಯೇ ಅಂಗವಿಕಲರಿಗೂ ಪೆನ್‌ಶನ್ ಕೊಡುತ್ತಾ ಇದ್ದೇವೆ. ಹಾಗೆಯೇ ತಾಳಿಭಾಗ್ಯಯೋಜನೆ, ಇದು ತಮ್ಮೆಲ್ಲರಿಗೂ ಗೊತ್ತಿದೆ, ಇದರ ಬಗ್ಗೆ ತಾವುಗಳೆಲ್ಲರೂ ಮಾತನಾಡಿದ್ದೀರಿ. ಈ ಯೋಜನೆಯಂತೆ, ೧೯೮೪-೮೫ ರಲ್ಲಿ ೮,೪೪,೪೮೪ ಜನರಿಗೆ ಸಹಾಯವು ಲಭಿಸಿದೆ ೧೯೮೫-೮೬ ರಲ್ಲಿ ೯,೮೭,೨೦೦ ಜನರಿಗೆ ಲಾಭವು ಸಿಕ್ಕಿದೆ. ಇದು ಇನ್ನೂ ೧೦ ಲಕ್ಷಗಳ ಸಂಖ್ಯೆಯವರೆಗೆ ಲಭಿಸಬಹುದು. ಎಲ್ಲಾ ಅಂಕಿಅಂಶಗಳನ್ನು ತಮಗೆ ಕೊಟ್ಟಿದ್ದೇವೆ. ವಿವರಗಳು ಇದರಲ್ಲಿ ಸಿಗುತ್ತದೆ. ಮತ್ತು ಈ ಪೆನ್‌ಶನ್ ಹಣವನ್ನು ಪೋಸ್ಟ್ ಮೂಲಕ ಕಳುಹಿಸುವುದರಿಂದ ತಮಗೆ ತೊಂದರೆಯಾಗುತ್ತದೆ ಎಂದು ಹೇಳಿದ್ದರಿಂದ ಈಗ ಬ್ಯಾಂಕ್‌ಮೂಲಕ ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ ಕೃಷಿ ಕಾರ್ಮಿಕ ಮಹಿಳೆಯರಿಗೆ ಕೊಡುವ ಹೆರಿಗೆ ಭತ್ಯೆ ಹಳ್ಳಿಯ ಬಡ ಮಹಿಳೆಯರಿಗೆ ಹೆಚ್ಚು ಉಪಯುಕ್ತವಾಗಿರುತ್ತದೆ. ಅದನ್ನು ಮಾನ್ಯ ಸದಸ್ಯರು ೧೦೦ರಿಂದ ೨೫೦ಕ್ಕೆ ಏರಿಸಬೇಕೆಂದು ಹೇಳಿದ್ದಾರೆ. ೧೯೮೪-೮೫ರಲ್ಲಿ ೪೭,೪೧೪ ಜನರಿಗೆ ಇದರ ಉಪಯೋಗ ಲಭಿಸಿದೆ. ಅವರಿಗೆ ನಾವು ೩೦೦ ರೂಗಳನ್ನು ಭತ್ಯೆ ಎಂದು ಕೊಡುತ್ತಾ ಇದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ನೀವು ೧೦೦ ಎಂದರೂ ನಾವು ೩೦೦ ಕೊಡುತ್ತಾ ಇದ್ದೇವೆ ಅಲ್ಲದೆ ಆರ್ಥಿಕ ಸುಧಾರಣೆ ಅದರಲ್ಲಿ ಇನ್ನೂ ಹೆಚ್ಚಿಗೆ ಮಾಡುವ ಯೋಚನೆ ನಮ್ಮದು. ೧೯೮೫-೮೬ರ ಡಿಸೆಂಬರ್ ವರೆಗೆ ೧೪,೩೧೬ ಜನರಿಗೆ ಕೊಟ್ಟಿದ್ದು ಮಾರ್ಚ್ ಆಖೈರುವರೆಗೆ ಒಂದು ಲಕ್ಷಕ್ಕೆ ತಲುಪಬಹುದು. ಇಷ್ಟು ಮಹಿಳೆಯರಿಗೆ ಸೌಲಭ್ಯ ದೊರಕಿದೆ. ಈ ಯೋಜನೆಗಳೆಲ್ಲವೂ ಜನತಾ ಸರಕಾರ

ಅಧಿಕಾರಕ್ಕೆ ಬಂದಮೇಲೆ ಶುರು ಆದವುಗಳು. ಇನ್ನು ಅಂಗವಿಕಲರ ಸಲುವಾಗಿ ಮಾನ್ಯ ಶ್ರೀನಿವಾಸ್‌ರವರು ಕೆಲವು ಸಲಹೆ, ಸೂಚನೆಗಳನ್ನು ಕೊಟ್ಟಿದ್ದಾರೆ. ಇವರಿಗಾಗಿ ಈಗಾಗಲೇ ೮ ಶಾಲೆಗಳನ್ನು ನಡೆಸುತ್ತಾ ಇದ್ದೇವೆ. ಪ್ರಾಥಮಿಕ ಪೂರ್ವ ತರಗತಿಗಳನ್ನು ಮತ್ತು ಜೀವನೋಪಾಯಕ್ಕೆ ಅನುಕೂಲವಾಗುವ ಇತರ ವೃತ್ತಿ ತರಗತಿಗಳನ್ನು ಪ್ರಾರಂಭಿಸಿ ಅವರಿಗೆ ಅನುಕೂಲ ಮಾಡಿಕೊಡುವ ಉದ್ದೇಶ ನಮ್ಮದು. ಈ ದಿಶೆಯಲ್ಲಿ ಅಂಗವಿಕಲರಿಗೆ ಮೈಸೂರಿನಲ್ಲಿ ತಾಂತ್ರಿಕ ತರಬೇತಿ ಕೇಂದ್ರವನ್ನು ಈ ವರ್ಷ ಮಾಡಲಾಗಿದೆ. ಇಂತಹ ೩೮ ಸ್ವಯಂ ಸೇವ ಸಂಸ್ಥೆಗಳಿಗೆ ತರಬೇತಿ ಮತ್ತು ಪುನರ್‌ವಸತಿಗಾಗಿ ಕಾಲವನ್ನು ಇವೊತ್ತು ನಾವು ನೀಡುತ್ತಾ ಇದ್ದೇವೆ. ನಮ್ಮ ಮಾನ್ಯ ಮುಖ್ಯಮಂತ್ರಿಯವರು ಒಂದು ಘೋಷಣೆಯನ್ನು ಮಾಡಿದ್ದಾರೆ. ಅಂಗವಿಕಲರ ಕಲ್ಯಾಣಕ್ಕಾಗಿ ಒಂದು ಘಟಕವನ್ನು ಸ್ಥಾಪಿಸಬೇಕೆಂದು ಮಾಡಿದ್ದೇವೆ. ಈ ಕುರಿತು ಯಾವ ರೀತಿಯಲ್ಲಿ ಶಿಕ್ಷಣ, ಪುನರ್‌ವಸತಿ, ಇತ್ಯಾದಿಗಳನ್ನು ಮಾಡಬೇಕೆಂಬುದರ ಬಗ್ಗೆ ಸಲಹೆ, ಸೂಚನೆಗಳನ್ನು ಸರಕಾರ ಹೊಂದಲು ಪ್ರಯತ್ನ ಮಾಡುತ್ತಾ ಇದೆ. ಮಾನ್ಯ ಸದಸ್ಯರಾದ ಕಾನಡೆಯವರು ಈ ಇಲಾಖೆಯಲ್ಲಿ ಇಟ್ಟ ಹಣವನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿಲ್ಲ, ಖರ್ಚು ಮಾಡಿದ ಹಣದಲ್ಲಿ ದುರುಪಯೋಗ ಆಗಿದೆ. ಅಧಿಕಾರಿಗಳು ಕಮಿಶನ್ ಹೊಡೆಯುತ್ತಿದ್ದಾರೆ, ಸೋರಿಹೋಗುತ್ತಿದೆ, ಇತ್ಯಾದಿ ಆರೋಪಗಳನ್ನು ಮಾಡಿದ್ದಾರೆ. ಇಲಾಖೆಯಲ್ಲಿ ಹಣದ ದುರುಪಯೋಗ ಆಗಿಲ್ಲ ಎಂದು ನಾನು ಹೇಳುವುದಿಲ್ಲ. ನಮ್ಮ ಸರಕಾರ ಬಂದಮೇಲೆ ಬಹಳಷ್ಟು ನಿಗಾ ವಹಿಸಿ ಚೆಕಿಂಗ್ ಮಾಡುತ್ತಾ ಇದ್ದೇವೆ, ಹಾಗೆ ಹಣದ ಲೋಪವೂ ಆಗಬಾರದು ಎಂದು ಪ್ರಯತ್ನ ಮಾಡುತ್ತಾ ಇದ್ದೇವೆ. ಮೊನ್ನೆ ವಿಧಾನ ಪರಿಷತ್‌ನಲ್ಲಿ ಒಬ್ಬ ಸದಸ್ಯರು ಒಂದು ಪೆಟ್ಟಿಗೆ ತಂದು ತೋರಿಸಿದರು, ಇದರ ಬೆಲೆ ಎಷ್ಟಾಗುತ್ತದೆ ಎಂದು ಕೇಳಿದರು. ನಾನು ಹೇಳಿದೆ ಏನು ಮಾಡುವುದು ಎಂದು. ಅದರ ವಿಚಾರಣೆಗಾಗಿ ಪಿ.ಎ.ಸಿ.ಗೆ ಒಪ್ಪಿಸಿ ಎಂದು ಹೇಳಿದರು, ಅದಕ್ಕೆ ನಾನು ನನ್ನ ಒಪ್ಪಿಗೆಯನ್ನು ಕೊಟ್ಟಿದ್ದೇನೆ. ಯಾರೇ ಸದಸ್ಯರು ಏನಾದರೂ ಇಂತಹ ಲೋಪದೋಷಗಳ ಬಗ್ಗೆಯಾಗಲಿ, ಅಕ್ರಮ, ದುರುಪಯೋಗದ ಬಗೆಗಾಗಲಿ ಹೇಳಿದರೆ, ಸೂಕ್ತ ಕ್ರಮವನ್ನು ಸಂಬಂಧಪಟ್ಟವರ ಮೇಲೆ ತೆಗೆದುಕೊಳ್ಳುತ್ತೇನೆ. ಹಾಗೂ ಅವರು ಇಂತಹ ಕಮಿಟಿಗೆ ಕೊಡಿ ಎಂದರೆ ಅದು ಸೂಕ್ತವಾಗಿದ್ದಲ್ಲಿ ಅದನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ.

ಆಮೇಲೆ ೧೯೮೪-೮೫ನೇ ಸಾಲಿನಲ್ಲಿ ಹಣ ಪೂರ್ತಿಯಾಗಿ ಖರ್ಚು ಆಗಿಲ್ಲವೆಂದು ಮಾನ್ಯ ಸದಸ್ಯರು ಕೆಲವರು ಇಲ್ಲಿ ಪ್ರಸ್ತಾಪ ಮಾಡಿದರು. ಆದರೆ ನಾವು ಇಟ್ಟಿರತಕ್ಕಂಥ ಹಣದಲ್ಲಿ ಶೇಕಡ ೮೦ರಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಕೆಲವೊಂದು ಬಾಬುಗಳಲ್ಲಿ ಇಲ್ಲಿಟ್ಟಿರತಕ್ಕಂಥ ಹಣ ಖರ್ಚು ಆಗಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮುಂದಿನ ವರ್ಷಕ್ಕೆ ಬೇಕಾಗುವಂತಹ ಹಣವನ್ನು ನಾವು ಈ ವರ್ಷದ ಬಡ್ಜೆಟ್‌ನಲ್ಲಿ ಇಟ್ಟಿದ್ದೇವೆ. ಒಮ್ಮೊಮ್ಮೆ ಒಂದೊಂದು ಬಾಬುಗಳಲ್ಲಿ ಹಣ ಖರ್ಚಾಗದೆ ಉಳಿಯತಕ್ಕಂಥ ಸಾಧ್ಯತೆಗಳು ಇರುತ್ತವೆ. ಈಗ ಉದಾಹರಣೆಗೆ ಹೇಳುವುದಾದರೆ ೧೯೮೪-೮೫ನೇ ಸಾಲಿನಲ್ಲಿ ಸುಮಾರು ೧೬ ಅಂಗನವಾಡಿ ಕೇಂದ್ರಗಳನ್ನು ಕೇಂದ್ರ ಸರ್ಕಾರ ಮಂಜೂರು ಮಾಡಬಹುದೆಂದು ನಾವು ತಿಳಿದುಕೊಂಡು ಬಡ್ಜೆಟ್‌ನಲ್ಲಿ ಸುಮಾರು ೭.೩೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೆವು, ಆದರೆ ಕೇಂದ್ರ ಸರ್ಕಾರದವರು ಅಂಗನವಾಡಿ ಕೇಂದ್ರವನ್ನು ಸ್ಥಾಪನೆ ಮಾಡಲಿಲ್ಲ. ನಾವು ಒಂದು ಅಂದಾಜು ಮಾಡಿ ಆ ಪ್ರಕಾರ ಮುಂದಿನ ವರ್ಷಕ್ಕೆ ಎಷ್ಟು ಹಣ ಬೇಕಾಗುವುದೋ ಅಷ್ಟನ್ನು ಬಡ್ಜೆಟ್‌ನಲ್ಲಿ ಸೇರಿಸುತ್ತೇವೆ. ಒಂದು ವೇಳೆ ಇಟ್ಟಂತಹ ಹಣ ಖರ್ಚಾಗದಿದ್ದರೆ ಆ ಹಣವನ್ನು ನಾವು ದಾರಿಯಲ್ಲಿ ತೆಗೆದುಕೊಂಡು ಹೋಗಿ ಹಾಕುವುದಿಲ್ಲ...

ಶ್ರೀ ಬಿ. ಬಸವಲಿಂಗಪ್ಪ.—ಇಟ್ಟಂತಹ ಹಣ ಏತಕ್ಕೆ ಖರ್ಚು ಆಗಲಿಲ್ಲ ಎನ್ನುವುದು ಸರಿಯಾಗಿ ಹೇಳಿ.

(ಗೊಂದಲ)

ಶ್ರೀ ಬಿ. ಎಲ್. ಪಾಟೀಲ್.—ಹೇಳುತ್ತೇನೆ ಸ್ವಾಮಿ, ಸ್ವಲ್ಪ ದಯಮಾಡಿ ತಾಳ್ಮೆಯಿಂದ ಕೇಳಿ.

(ಗೊಂದಲ)

ಛೇರ್ಮನ್.—ನಾವು ಏನು ಕೇಳಬೇಕೆಂದಿದ್ದಿರೋ ಅದನ್ನು ಬರೆದಿಟ್ಟುಕೊಂಡು ಮಾನ್ಯ ಮಂತ್ರಿಗಳು ಉತ್ತರವಾದ ನಂತರ ಪ್ರಶ್ನೆ ಕೇಳಿ ಅದಕ್ಕೆ ಅವರು ಉತ್ತರ ಕೊಡುತ್ತಾರೆ.

(ಗೊಂದಲ)

ಶ್ರೀ ವಿ. ಎಲ್. ಪಾಟೀಲ್.—ಸ್ವಾಮಿ ಸ್ವಲ್ಪ ತಾಳ್ಮೆಯಿಂದ ಕೇಳಿ. ಈಗ ಸರ್ಕಾರದಿಂದ ಅನುದಾನ ಪಡೆಯುವಂತಹ ಕೆಲವು ಹಾಸ್ಟಲ್‌ಗಳು ಇವೆ. ಈ ಸಂಸ್ಥೆಗಳ ಮೇಲೆ ಸರ್ಕಾರದವರು ಆಗಾಗ ಚೆಕ್ಕಿಂಗ್ ಮಾಡಿದ್ದೇವೆ. ಎಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆಯೋ ಅಲ್ಲಿ ಜನತಾ ಸರ್ಕಾರ ಸರಿ ಮಾಡಿದೆ.

ಶ್ರೀ ಆರ್. ಎ. ನಾಯಕ.—ಸ್ವಾಮಿ ಚೆಕ್ಕಿಂಗ್ ಮಾಡಿದ್ದೇವೆಂದು ಹೇಳುತ್ತೀರಿ. ಎಲ್ಲೆಲ್ಲಿ ಯಾವಾಗ ಚೆಕ್ಕಿಂಗ್ ಮಾಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ?

ಶ್ರೀ ವಿ. ಎಲ್. ಪಾಟೀಲ್.—ಸ್ವಾಮಿ ನಾನು ಚೆಕ್ಕಿಂಗ್ ಮಾಡಿ ಎಲ್ಲಿ ತಪ್ಪು ನಡೆದಿದೆಯೋ ಅಲ್ಲಿ ಆಕ್ಷನ್ ಸಹ ತೆಗೆದುಕೊಂಡಿದ್ದೇವೆ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ಅಂಕಿ ಅಂಶಗಳನ್ನು ಕೊಡಿ. ಬರೀ ಸುಮ್ಮನೆ ಚೆಕ್ಕಿಂಗ್ ಮಾಡಿದ್ದೇವೆ ಎಂದು ಹೇಳಿದರೆ ಹೇಗೆ...?

ಶ್ರೀ ವಿ. ಎಲ್. ಪಾಟೀಲ್.—ಈಗ ನಾವು ಯಾವ ಯಾವ ಹಾಸ್ಟಲ್‌ಗಳಿಗೆ ಅನುದಾನ ಕೊಡುತ್ತೇವೆಯೋ ಆ ಎಲ್ಲಾ ಹಾಸ್ಟಲ್‌ಗಳಿಗೂ ಸಹ ಚೆಕ್ಕಿಂಗ್ ಹೋಗಿದ್ದೇವೆ. ಅಂಕಿಅಂಶಗಳನ್ನು ನಾನು ಕೊನೆಯಲ್ಲಿ ಕೊಡುತ್ತೇನೆ. ಕೆಲವು ಹಾಸ್ಟಲ್‌ಗಳಲ್ಲಿ ಆಡಿಟ್ ರಿಪೋರ್ಟ್ ಸರಿಯಾಗಿ ಬರುವುದಿಲ್ಲ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ತಾವು ಏನು ಮಾಡಿದ್ದೀರಿ ಎನ್ನುವುದನ್ನು ಮಾತ್ರ ಹೇಳಿ. ಅದು ಬಿಟ್ಟು ಇದು ಮಾಡಿದ್ದೇವೆ. ಅದು ಮಾಡುತ್ತೇವೆ. ಎಂದು ಹೇಳುವುದು ಬೇಡ.

ಶ್ರೀ ವಿ. ಎಲ್. ಪಾಟೀಲ್.—ತಾವು ನಿನ್ನೆಯ ದಿವಸ ಕೇಳಿರತಕ್ಕಂಥ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರ ಕೊಡುತ್ತೇನೆ. ತಾವು ದಯವಿಟ್ಟು ಸ್ವಲ್ಪ ತಾಳ್ಮೆಯಿಂದ ಕೇಳಬೇಕು. ಈ ಸಂಸ್ಥೆಗಳಲ್ಲಿ ಎಲ್ಲಿ ದುರ್ವ್ಯವಹಾರ ನಡೆಯುತ್ತಿತ್ತೋ ಅಲ್ಲಿ ಇಂತಹ ದುರವ್ಯವಹಾರವನ್ನು ನಾವು ಬಂದ ಮೇಲೆ ಸ್ವಲ್ಪ ಮಟ್ಟಿಗಾದರೂ ಬಂದ ಮಾಡಿದ್ದೇವೆ....

ಶ್ರೀ ಬಿ. ಬಸವಲಿಂಗಪ್ಪ.—ಎಷ್ಟು ಬಂದ್ ಮಾಡಿದ್ದೀರಿ. ಅದು ಹೇಳಿ...

(ಗೊಂದಲ)

ಶ್ರೀ ವಿ. ಎಲ್. ಪಾಟೀಲ್.—ಹೇಳುತ್ತೇನೆ ತಾವು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಂಡು ಕೇಳಿ.

ಛೇರ್ಮನ್.—ಮಾನ್ಯ ಸದಸ್ಯರು ಮಂತ್ರಿಗಳು ಉತ್ತರ ಕೊಡುವಾಗ ಸ್ವಲ್ಪ ಗಂಭೀರವಾಗಿ ಕೇಳಿ ಆ ನಂತರ ಬೇಕಾದರೆ ತಮಗೆ ಬೇಕಾದರೆ ಕ್ಲಾರಿಫಿಕೇಶನ್ಸ್ ಕೇಳಬಹುದು.

(ಗೊಂದಲ)

ಶ್ರೀ ವಿ.ಎಲ್. ಪಾಟೀಲ್.—ತಾವು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ನಾನು ಉತ್ತರ ಕೊಡುತ್ತೇನೆ. ನಾವು ಈ ವರ್ಷದಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ನೋಡಿಕೊಂಡು ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಹಣ ಇಟ್ಟಿರುತ್ತೇವೆ. ಉದಾಹರಣೆಗೆ ಹೇಳುವುದಾದರೆ ವಿಧವಾ ಮಾಸಾಶನವನ್ನು ಕೊಟ್ಟಿದ್ದೇವೆ. ಅಂಗನವಾಡಿಗಳಿಗೆ ಹಣವನ್ನು ಖರ್ಚು ಮಾಡಿದ್ದೇವೆ. ಹೆರಿಗೆ ಭತ್ಯವನ್ನು ಸ್ತ್ರೀಯರಿಗೆ ಕೊಡುತ್ತಿದ್ದೇವೆ. ಈ ಯೋಜನೆಗಳಿಗೆಲ್ಲಾ ಒಂದು ಅಂದಾಜು ಮಾಡಿ ಹಣ ಇಟ್ಟಿರುತ್ತೇವೆ. ಆ ಪ್ರಕಾರ ಖರ್ಚು ಮಾಡುತ್ತಿದ್ದೇವೆ. ಉಳಿದ ಹಣವನ್ನು ನಾವು ಗೌರ್ನಮೆಂಟ್‌ಗೆ ಸರೆಂಡರ್ ಮಾಡುತ್ತೇವೆ,

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಮಾನ್ಯ ಮಂತ್ರಿಗಳು ಅದನ್ನು ಮಾಡುತ್ತೇನೆ, ಇದನ್ನು ಮಾಡುತ್ತೇನೆ. ಎಂದೇ ಹೇಳುತ್ತಿದ್ದಾರೆ ವಿನಃ ಏನು ಮಾಡಿದ್ದಾರೆ ಅದನ್ನು ಹೇಳಲಿಲ್ಲ.

(ಗೊಂದಲ)

ಶ್ರೀ ವಿ ಎಲ್. ಪಾಟೀಲ್.—ಸ್ವಾಮಿ ಏನು ಮಾಡಿದ್ದೇವೆಂದು ಹೇಳುತ್ತಿದ್ದೇನೆ. ದಯಮಾಡಿ ಕೇಳಿ. ಸ್ವಲ್ಪ ಶಾಂತಿ ರೀತಿಯಲ್ಲಿ ಕೇಳಿ. ನನ್ನ ಇಲಾಖೆಯಲ್ಲಿ ಯಾವುದೇ ಕಾರಣದಿಂದ ದುರ್ವ್ಯವಹಾರವಾಗಲಿ ಅಲಕ್ಷ್ಯ ಮನೋಭಾವನೆಯಾಗಲಿ ಇದ್ದರೆ ಅದನ್ನು ಮಾನ್ಯ ಸದಸ್ಯರು ನನಗೆ ತೋರಿಸಿಕೊಟ್ಟರೆ ನಾನು ನಿಷ್ಪಕ್ಷಪಾತದ ಕ್ರಮ ತೆಗೆದುಕೊಳ್ಳುತ್ತೇನೆ. ನಮ್ಮ ಇಲಾಖೆ ವತಿಯಿಂದ ಹಾಸ್ಟೆಲ್‌ಗಳನು ನಡೆಸುತ್ತಿದ್ದೇವೆ, ಅನೇಕ ನರ್ಸರಿ ಶಾಲೆಗಳನ್ನು ನಡೆಸುತ್ತಿದ್ದೇವೆ. ಮತ್ತು ಅನೇಕ ಮಹಿಳಾ ಕಲ್ಯಾಣ ಕೇಂದ್ರಗಳನ್ನು ನಡೆಸುತ್ತಿದ್ದೇವೆ. ನಮ್ಮ ಇಲಾಖೆಯ ವತಿಯಿಂದ ಸುಮಾರು ೯೫ ಸಾವಿರ ಮಕ್ಕಳು ಲಾಭ ಪಡೆಯುತ್ತಿದ್ದಾರೆ. ಹಳ್ಳಿಗಳಲ್ಲಿ ಮಕ್ಕಳು ಮೆಟ್ರಿಕ್ಯುಲೇಶನ್ ಮುಗಿಸಿಕೊಂಡು ಕಾಲೇಜು ವಿದ್ಯಾಭ್ಯಾಸಕ್ಕೆ ಬರಬೇಕಾದರೆ ತೊಂದರೆಯಾಗುತ್ತದೆಂದು ಹೇಳಿ ಸುಮಾರು ೧೪೬ ಕಾಲೇಜು ಹಾಸ್ಟೆಲ್‌ಗಳನ್ನು ಪಟ್ಟಣಗಳಲ್ಲಿ ತೆರೆದಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ ಈ ಅಂಕಿಅಂಶಗಳೆಲ್ಲಾ ಅವರು ಕೊಟ್ಟಿರತಕ್ಕಂಥ ವರದಿಯಲ್ಲಿ ಇದೆ. ಅದು ಬಿಟ್ಟು ಏನು ಮಾಡಿದ್ದಾರೋ ಅದನ್ನು ಮಾತ್ರ ಹೇಳಿದರೆ ಸಾಕು.

(ಗೊಂದಲ)

ಶ್ರೀ ವಿ. ಎಲ್. ಪಾಟೀಲ್.—ನಮ್ಮ ಇಲಾಖೆಯ ವತಿಯಿಂದ ಸುಮಾರು ೧೪೬ ಕಾಲೇಜು ಹಾಸ್ಟೆಲ್‌ಗಳನ್ನು ಹಳ್ಳಿಗಳಿಂದ ಬರುವಂತಹ ವಿದ್ಯಾರ್ಥಿಗಳ ಸಲುವಾಗಿಯೇ ತೆರೆದಿದ್ದೇವೆ. ಇದರಿಂದ ಸುಮಾರು ೧೪ ಸಾವಿರ ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ, ಮತ್ತು ನಮ್ಮ ಇಲಾಖೆ ವತಿಯಿಂದ ಸುಮಾರು ಎರಡೂವರೆ ಲಕ್ಷ ಜನ ಸ್ಕಾಲರಶಿಪ್ ಸೌಲಭ್ಯವನ್ನು ಪಡೆದುಕೊಳ್ಳುತ್ತಿದ್ದಾರೆ.

ಸ್ವಾತಂತ್ರ್ಯ ಸಿಕ್ಕಿದ ೩೮ ವರ್ಷಗಳಿಂದ, ಇವತ್ತಿನವರೆಗೆ, ಎಸ್. ಸಿ. ಎಸ್. ಟಿ. ಅವರ ಶಿಕ್ಷಣದ ಸಲುವಾಗಿ ಸಾಕಷ್ಟು ಹಣ ಖರ್ಚು ಮಾಡುತ್ತಿದೆ. ಇಷ್ಟಾದರೂ ಕೂಡ ಇನ್ನೂ ಅವರ ಶಿಕ್ಷಣ ೨೦ ಪರ್ಸೆಂಟಿಗಿಂತ ಹೆಚ್ಚಾಗಿಲ್ಲ. ಬರುವ ವರ್ಷದಲ್ಲಿ ಇವರ ಪರ್ಸೆಂಟೇಜ್ ಹೆಚ್ಚುವ ನಿರೀಕ್ಷೆ ಇದೆ. ನಾವು ಇದಕ್ಕಾಗಿ ಒಂದು ಕಮಿಟಿಯನ್ನು ನೇಮಕ ಮಾಡುತ್ತೇವೆ. ಇವರಿಗೆ ಯಾವರೀತಿ ಉತ್ತಮ ಶಿಕ್ಷಣ ಕೊಡಬೇಕು, ಯಾವರೀತಿ ಇವರ ಪರ್ಸೆಂಟೇಜ್ ಜಾಸ್ತಿ ಮಾಡಬೇಕು ಎಂಬ ಬಗ್ಗೆ ಈ ಕಮಿಟಿಯಿಂದ ರಿಪೋರ್ಟ್ ತರಿಸಿಕೊಂಡು, ಮುಂದುವರಿಯಬೇಕೆಂದು ಯೋಚನೆ ಮಾಡಿದ್ದೇವೆ. ಇವರಿಗೆ ೬೦ ಟ್ರೈನಿಂಗ್ ಸೆಂಟರುಗಳನ್ನು ತೆಗೆದಿದ್ದೇವೆ. ಇದರಲ್ಲಿ ೧೨೦೦ ಹೆಣ್ಣುಮಕ್ಕಳು ಈ ತರಬೇತಿಯ ಲಾಭವನ್ನು ಪಡೆಯುತ್ತಿದ್ದಾರೆ. ಅವರು ಇನ್ನೂ ಮುಂದುವರಿಯಲಿ ಎಂಬ ಆಸೆಯನ್ನು ನಾವು ಇಟ್ಟುಕೊಂಡಿದ್ದೇವೆ. ಅಲ್ಲದೆ ಈ ತರಬೇತಿಯನ್ನು ಇನ್ನೂ ಹೆಚ್ಚು ಜನರಿಗೆ ಕೊಡಬೇಕೆಂದು ಯೋಜನೆ ಇಟ್ಟುಕೊಂಡಿದ್ದೇವೆ ಇನ್ನು ಬಿ.ಸಿ.ಎಂ. ಜನಾಂಗದವರಿಗಾಗಿ ಎಷ್ಟೋ ಸ್ಕೀಂಗಳನ್ನು ಜಾರಿಗೆ ತರುತ್ತಿದ್ದೇವೆ. ಮುಖ್ಯವಾಗಿ, ೬೧೦ ಪ್ರಿ ಮೆಟ್ರಿಕ್ ಹಾಸ್ಟಲುಗಳನ್ನು ಹಾಗೂ ೬೫ ಪೋಸ್ಟ್ ಮೆಟ್ರಿಕ್ ಹಾಸ್ಟಲುಗಳು ಮತ್ತು ೨೨೫ ಏಡೆಡ್ ಹಾಸ್ಟಲುಗಳನ್ನು ನಡೆಸುತ್ತಿದ್ದೇವೆ. ಇದರಲ್ಲಿ ಪ್ರತಿಯೊಬ್ಬ ಹುಡುಗರಿಗೆ ೬೫ ರೂಪಾಯಿಯಂತೆ ಕೊಡುತ್ತಿದ್ದದನ್ನು ಮಾನ್ಯ ಸ್ನೇಹಿತರು ಹೆಚ್ಚು ಮಾಡಬೇಕೆಂದು ಹೇಳಿದ್ದಕ್ಕೆ, ಅದನ್ನು ೧೦೦ ರೂಪಾಯಿಯವರೆಗೆ ಏರಿಸಿದ್ದೇವೆ. ಡೆಸ್ಟಿಟ್ಯೂಟ್ ಹೋಂಗಳಿಗೆ ೫೦ ರೂಪಾಯಿಯಂತೆ ಕೊಡುತ್ತಿದ್ದುದನ್ನು ೭೫ ರೂಪಾಯಿಗೆ ಏರಿಸುವ ತೀರ್ಮಾನ ಮಾಡುವವರಿದ್ದೇವೆ. ಒಬ್ಬ ಹುಡುಗನಿಗೆ ಒಂದು ರೂಪಾಯಿ ಸಾದಿಲ್ವಾರು ಕೊಡುತ್ತಿದ್ದುದನ್ನು ಮುಖ್ಯಮಂತ್ರಿಗಳು ೫ ರೂಪಾಯಿಯವರೆಗೆ ಏರಿಸಿದ್ದಾರೆ. ಇನ್ನು ಹಾಸ್ಟಲುಗಳಿಗೆ ಕಟ್ಟಡಗಳು ಇಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ಎಲ್ಲಾ ಕಡೆ ಎಸ್‌ಸಿ. ಎಸ್‌ಟಿ. ಮತ್ತು ಬಿ. ಸಿ. ಎಂ. ಬಿ.ಸಿ.ಟಿ. ಹಾಸ್ಟೆಲುಗಳು ಹಾಗೂ ಏಡೆಡ್ ಹಾಸ್ಟಲುಗಳಿಗೆ ಕಟ್ಟಡಗಳು ಇಲ್ಲ, ಕೆಲವು ಕಡೆ ಬಾಡಿಗೆ ತೆಗೆದುಕೊಂಡು ನಡೆಸುತ್ತಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಇದರ ಬಗ್ಗೆ ಎಲ್ಲಾ ಕಡೆ ಹಾಸ್ಟಲು ಕಟ್ಟಡಗಳನ್ನು ಕಟ್ಟಿಸಬೇಕೆಂದು ನಿರ್ಣಯ ತೆಗೆದುಕೊಂಡಿದ್ದೇವೆ. ಅನಂತರ ೩ ಕೋಟಿ ೨೧ ಲಕ್ಷ ರೂಪಾಯಿಗಳು ವಿದ್ಯಾರ್ಥಿವೇತನ ಕೊಡಬೇಕೆಂದು ಇದ್ದೇವೆ, ಇದರಿಂದ ೩ ಲಕ್ಷ ವಿದ್ಯಾರ್ಥಿಗಳಿಗೆ ಲಾಭ ಸಿಗುತ್ತದೆ. ಇನ್ನು ಎರಡನೆ ಬ್ಯಾಕ್‌ವರ್ಡ್‌ಕ್ಲಾಸ್ ಕಮಿಷನ್ ಅವರು ಈ ತಿಂಗಳಲ್ಲಿ ವರದಿ ಕೊಡುತ್ತಾರೆ. ಅವರು ಕೊಟ್ಟಂಥ ವರದಿಯನ್ನು ಸರ್ಕಾರ ತೀವ್ರವಾಗಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ಸ್ಪೆಷಲ್ ಕಾಂಪೊನೆಂಟ್ ಸ್ಕೀಂನಲ್ಲಿ, ಎಸ್.ಸಿ. ಮತ್ತು ಎಸ್.ಟಿ. ಜನರನ್ನು ಬಡತನ ರೇಖೆಗಿಂತ ಮೇಲೆತ್ತಬೇಕೆಂದು, ಬೇರೆ ಬೇರೆ ಬಾಬಿನಲ್ಲಿ ಹಣ ಖರ್ಚು ಮಾಡುತ್ತಿದ್ದೇವೆ ಎಲ್ಲಾ ಖಾತೆಗಳಿಂದ ಸ್ಪೆಷಲ್ ಕಾಂಪೊನೆಂಟ್ ಸ್ಕೀಂನ ಹಣ ಖರ್ಚಾಗಬೇಕುಮತ್ತು ಇದು ಹಳ್ಳಿ ಮಟ್ಟದ ಜನಗಳಿಗೆ ಸಹಾಯ ಆಗುವಂತೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—೧೯೮೫–೮೬ರಲ್ಲಿ ಅನುಸೂಚಿತ ಜಾತಿಯವರಿಗೆ ವಿಶೇಷ ಘಟಕ ಯೋಜನೆ ವೆಚ್ಚಕ್ಕಾಗಿ, ಕೇಂದ್ರಸರ್ಕಾರದವರು ೧೦ ಕೋಟಿ ೬೨ ಲಕ್ಷ ರೂಪಾಯಿಗಳನ್ನು ನೀಡಿದೆ. ನೀವು ಉತ್ತರದಲ್ಲಿ ೯ ಕೋಟಿ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆಂದು ಹೇಳುತ್ತೀರಿ. ಇದರಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಆ ಮೇಲೆ ಮತ್ತೊಂದು ಕೇಂದ್ರಸರ್ಕಾರದ ಹಣ ೪೧೫ ಲಕ್ಷ ಬಿಡುಗಡೆ ಮಾಡಿದ್ದಾರೆ, ಆದರಲ್ಲಿ ೨೮೪ ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿದ್ದೇವೆಂದು ಹೇಳಿದ್ದೀರಿ. ಇದರ ಬಗ್ಗೆ ಸರಿಯಾದ ಮಾಹಿತಿ ಹೇಳಬೇಕು.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಸದಸ್ಯರು ಎಷ್ಟೋ ಪ್ರಶ್ನೆಗಳನ್ನು ಕೇಳಿದ್ದಾರೆ. ಸ್ವಲ್ಪ ಸ್ವಲ್ಪ ಉತ್ತರವನ್ನು ಹೇಳುತ್ತಿದ್ದೇನೆ. ಆಮೇಲೆ ಮುಕ್ತರುನ್ನಿಸಾ ಬೇಗಂ ರವರೊಂದು ಪ್ರಶ್ನೆಯನ್ನು ಕೇಳಿದ್ದಾರೆ. There have been many vacancies in the Department which should be filled up soon. Largest number of vacancies are in the cadre of Supervisors 409 and Probationary Officers Grade-2, 160. Recruitment for these posts is over and postings are being made. It is also said that there should be more working women hostels. Voluntary organisations are being encouraged. ನನ್ನ ಭಾಷಣದಲ್ಲಿ ಇನ್ನು ಸುಮಾರು ಬಿಲ್ಡಿಂಗ್‌ಗಳನ್ನು ಕಟ್ಟಬೇಕೆಂದು ಹೇಳಿದ್ದೇನೆ. ಸಂಸ್ಥೆಯವರೂ ಸ್ವಲ್ಪ ಹಣ ಹಾಕಬೇಕಾಗುತ್ತದೆ. ನಮ್ಮ ಪಾಲಿನದನ್ನು ನಾವು ಕೊಡುತ್ತೇವೆ, ಕೇಂದ್ರಸರ್ಕಾರದವರು ಕೊಡುವುದನ್ನೂ ಕೇಳಬೇಕು. It is also said that maternity allowance at the rate of Rs. 100 p.m. is too low. ಇದನ್ನು ಜಾಸ್ತಿ ಮಾಡಿ ಎಂದು ಹೇಳಿದ್ದಾರೆ. ಅದರಂತೆ ಈಗಾಗಲೇ ೩೦೦ ರೂಪಾಯಿ ಕೊಟ್ಟಿದ್ದೇವೆ. ಸಫಿಷಿಯಂಟ್ ಪಬ್ಲಿಸಿಟಿ ಇಲ್ಲವೆಂದು ಹೇಳಿದ್ದಾರೆ, ಈಗಾಗಲೇ ಈ ಬಗ್ಗೆ ಸೆಮಿನಾರ್‌ಗಳನ್ನು ಮಾಡಿದ್ದೇವೆ, ಕರಪತ್ರಗಳನ್ನು ಹಂಚಿದ್ದೇವೆ. It is said that Construction grants for working women hostels shoueld be increased ಇದು ಗವರ್ನಮೆಂಟ್ ಆಫ್ ಇಂಡಿಯಾ ಸ್ಕೀಂ, ಇದನ್ನು ಅವರು ಮಾಡಬೇಕಾಗುತ್ತದೆ. They have said that there should be training centre for the physically handicapped in district. Even though it is not in all districts a new training centre for blind will be started inMysore with the help of National Institute for blind. A cell for physically handicapped is being set up in the department. This cell would make efforts to improve physically handicapped in every district. Sri Basavalingappa has said that there are only two balawadies, one in Bangalore and the other in Mysore. It is said that there should be Balawadies in Shimoga and Gulbarga. District Balabhavan Committees have been Constituted in all the districts under the Chairmanship of Deputy Commissioners There are 9 district Balabhavans besides one in Bangalore. There are Balabhavans in Gulbarga and Shimoga. ಸುಮಾರು ೨೩ ಲಕ್ಷ ರೂಪಾಯಿಗಳನ್ನು ಬಾಲಭವನಕ್ಕೆ ಕೊಟ್ಟಿದ್ದೇವೆ. ೮ ಲಕ್ಷ ರೂಪಾಯಿಗಳನ್ನು ಜಿಲ್ಲಾಮಟ್ಟದ ಬಾಲಭವನಗಳಿಗೆ ಕೊಟ್ಟಿದ್ದೇವೆ.

Sri Basavalingappa has said that all the money for the plan schemes come from the Government of India, not from the State Government. During 1984-85 plan budget was Rs. 12.62 crores of which Rs. 3.74 crores was from the Government of India.

ಇನ್ನು ನಾನ್‌ಪ್ಲಾನ್ ಬಗ್ಗೆ ಹೇಳಬೇಕಾದರೆ ಎಂಟೈರ್ ಸ್ಟೇಟ್ ಬಡ್ಜೆಟ್ಟಿನಲ್ಲಿ ನಾನ್ ಪ್ಲಾನ್‌ನಲ್ಲಿ ೨೪ ಕೋಟಿ ೬೧ ಲಕ್ಷ ಇದೆ...

ಶ್ರೀ ಆರ್. ವೆಂಕಟರಾಮಯ್ಯ.—ಅದು ಯಾವ ಹೆಡ್‌ನಲ್ಲಿದೆ ಸ್ವಾಮಿ ?

ಶ್ರೀ ವಿ.ಎಲ್. ಪಾಟೀಲ್.—ಮೊದಲು ನಾನು ಉತ್ತರ ಹೇಳುತ್ತೇನೆ, ಆಮೇಲೆ ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಅದೇನೆಂದರೆ...

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕ ಡಿರಿ. ಮೊದಲು ಮಾನ್ಯ ಮಂತ್ರಿಗಳು ಏನು ಹೇಳುತ್ತಾರೋ ಅದನ್ನು ಹೇಳಲಿ. ಆಮೇಲೆ ನಿಮಗೆ ಕೇಳುವುದಕ್ಕೆ ಛಾನ್ಸ್ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ನೀವು ಹೀಗೆ ಪದೇ ಪದೇ ಡಿಸ್ಟರ್ಬ್ ಮಾಡುವುದು ಸರಿಯಲ್ಲ.

ಶ್ರೀ ಬಿ ಬಸವಲಿಂಗಪ್ಪ.—ಅವರು ಈ ರೀತಿ ರಿಪ್ಲೈ ಕೊಡುವುದಾದರೆ ನಾವು ಕೇಳುವುದಕ್ಕೆ ತಯಾರಿಲ್ಲ. ಸರಿಯಾಗಿ ಉತ್ತರ ಹೇಳಲಿ.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಸದಸ್ಯರು...

(ಗೊಂದಲ)

ಅಧ್ಯಕ್ಷರು.—ಮತ್ತೆ ಮತ್ತೆ ನೀವು ಹೀಗೆ ಇಂಟರಪ್‌ಷನ್ ಮಾಡುವುದಾದರೆ ನಾನು ಡಿಮ್ಯಾಂಡ್ ಅನ್ನು ವೋಟ್‌ಗೆ ಹಾಕಬೇಕಾಗುತ್ತದೆ. ಮಾನ್ಯ ಮಂತ್ರಿಗಳು ಏನು ಉತ್ತರ ಹೇಳುತ್ತಾರೋ ಮೊದಲು ಹೇಳಲಿ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಸರಿಯಾಗಿ ರಿಪ್ಲೈ ಕೊಡುವುದಾದರೆ ಕೊಡಲಿ, ಅವರು ಸರಿಯಾಗಿ ರಿಪ್ಲೈ ಕೊಡದೇ ಹೋದರೆ ಬೇಕಾದರೆ ವೋಟ್‌ಗೆ ಹಾಕಿಕೊಳ್ಳಿ. ನಾವು ಅವರ ರಿಪ್ಲೈ ಅನ್ನು ಕೇಳುವುದಕ್ಕೂ ತಯಾರಿಲ್ಲ.

(ಗೊಂದಲ)

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಸದಸ್ಯರುಗಳು ಈ ಬಗ್ಗೆ ಏನೇನು ಹೇಳಿದ್ದಾರೆ ಸಾಮಾನ್ಯವಾಗಿ ಅವೆಲ್ಲದರ ಮೇಲೆ ಉತ್ತರ ಕೊಟ್ಟಿದ್ದೇನೆ. ಇನ್ನು ಮಾನ್ಯ ಸದಸ್ಯರೊಬ್ಬರು ಬೆತ್ತಲೆ ಮೆರವಣಿಗೆ ಬಗ್ಗೆ ಹೇಳಿ ಇದನ್ನು ತಡೆಹಿಡಿಯಬೇಕು ಎಂದು ಹೇಳಿದರು. ಅದಕ್ಕೆ ನಾನು ಆಗಲೇ ಉತ್ತರಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಕೈಯ್ಯಲ್ಲಿ ಸರಿಯಾಗಿ ಉತ್ತರ ಕೊಡುವುದಕ್ಕೆ ಆಗದೇ ಹೋದರೆ ಬಿಟ್ಟು ಬಿಡಿ.

ಶ್ರೀ ವಿ.ಎಲ್. ಪಾಟೀಲ್.—ಈ ಬೆತ್ತಲೆ ಮೆರವಣಿಗೆ ಬಗ್ಗೆ ಒಂದು ಆರ್ಡರ್ ಮಾಡಿ ಇದನ್ನು ನಿಲ್ಲಿಸಬೇಕು ಎಂದು ಹೇಳಿದ್ದಾರೆ ಅದು ಆಗುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ತರಹ ಉತ್ತರ ಹೇಳಿದರೆ ಹೇಗೆ ?

ಅಧ್ಯಕ್ಷರು.—ಮೊದಲು ಅವರು ಹೇಳುವುದನ್ನು ಕೇಳಿ.

ಶ್ರೀ ವಿ. ಎಲ್. ಪಾಟೀಲ್.—ಈ ಬಗ್ಗೆ ನಮ್ಮ ಇಲಾಖೆಯವರಿಗೆ ಹೇಳಿದ್ದೇನೆ. ಅಲ್ಲದೆ ಈ ಬಗ್ಗೆ ಲಾವಣಿ ಮುಖಾಂತರವಾಗಿ ಕನ್ನಡ ಅಂಡ್ ಕಲ್‌ಚರ್ ಡಿಪಾರ್ಟ್‌ಮೆಂಟಿನವರೂ ಕೂಡ ಪ್ರಚಾರ ಮಾಡಿದ್ದಾರೆ. ಇದರ ಬಗ್ಗೆ ಕರಪತ್ರ ಹಂಚಿದ್ದಾರೆ. ಇದನ್ನು ನಿಲ್ಲಿಸುವುದಕ್ಕೆ ಬೇಕಾದಷ್ಟು ಪ್ರಯತ್ನ ಮಾಡುತ್ತಿದ್ದಾರೆ. ಮೊನ್ನೆ ದಿವಸ ಶ್ರೀಮಾನ್ ಕೆ. ಹೆಚ್. ಶ್ರೀನಿವಾಸ್ ಅವರು ಮಾ[illegible]

ಶಿವಮೊಗ್ಗ ಜಿಲ್ಲೆಯಲ್ಲಿ ನಮ್ಮ ಇಲಾಖೆಯವರು ಸಾಕಷ್ಟು ಪ್ರಚಾರ ಮಾಡಿದ್ದಾರೆ, ಈ ಬೆತ್ತಲೆ ಮೆರವಣಿಗೆಯನ್ನು ನಿಲ್ಲಿಸುವುದಕ್ಕೆ ಆ ಊರಿನ ಜನರು ಸಹ ಒಂದು ಮೆರವಣಿಗೆ ಮಾಡಿ ಚೆನ್ನಾಗಿ ಪ್ರಚಾರ ಮಾಡಿದರು ಎಂದು ಹೇಳಿದರು. ಅಲ್ಲಿ ಇದರ ಬಗ್ಗೆ ಬಂದ್ ಕೂಡ ಆಗಿದೆ. ಆದುದರಿಂದ ಈ ಬಗ್ಗೆ ಸಾಕಷ್ಟು ಪ್ರಯತ್ನ ನಡೆದಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಿಮ್ಮ ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಸಾಕಷ್ಟು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಅಂತ ಹೇಳಿ ಆ ಕಾರ್ಯಕ್ರಮಕ್ಕೆ ತಣ್ಣೀರು ಎರಚುವಂಥ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ಜೈನ್ ದಿಗಂಬರ್‌ರಿಗೆ ಇದನ್ನು ಕಂಪೇರ್ ಮಾಡಬೇಡಿ. ನೀವು ನಿಮ್ಮ ಅಧಿಕಾರಿಗಳಿಗೆ ರಕ್ಷಣೆ ಕೊಡುವ ರೀತಿಯಲ್ಲಿ ಮಾತನಾಡಿದರೆ ಅವರಿಗೆ ಇನ್ನಷ್ಟು ಕೂಡ ಶೆಲ್ಟರ್ ಕೊಟ್ಟ ಹಾಗಾಗುತ್ತದೆ, ಆದುದರಿಂದ ಅವರ ಬಗ್ಗೆ ಉದಾಸೀನದಿಂದ ಮಾತನಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಬಿ. ಎಲ್. ಪಾಟೀಲ್.—ನಾನು ಆ ರೀತಿ ಏನೂ ಮಾತನಾಡುತ್ತಾ ಇಲ್ಲ. ಈ ವಿಚಾರದಲ್ಲಿ ಯಾವ ರೀತಿಯಾಗಿ ಕೆಲಸದ ಪ್ರಯತ್ನ ನಡೆಯುತ್ತಾ ಇದೆ ಎಂಬುದನ್ನು ಹೇಳಿದೆ. ಇನ್ನು ಅಂಗನವಾಡಿ ಐ.ಸಿ.ಡಿ. ಎಸ್. ಬಗ್ಗೆ ಮಾನ್ಯ ಬಸವಲಿಂಗಪ್ಪ ಹೇಳಿದ್ದಾರೆ. ಈ ವಿಚಾರದಲ್ಲಿ ನನ್ನ ಭಾಷಣದಲ್ಲಿ ಈಗಾಗಲೇ ಹೇಳಿದ್ದೇನೆ.

ಇನ್ನು ಬಿ.ಸಿ.ಎಂ. ಡಿಪಾರ್ಟ್‌ಮೆಂಟಿನಲ್ಲಿ, ಬ್ಯಾಕ್‌ವರ್ಡ್ ಕ್ಲಾಸ್‌ಗೆ ಈ ಫಂಡ್ಸ್ ಅಲೋಕೇಷನ್‌ನಲ್ಲಿ ತೋರಿಸಿಲ್ಲ ಅಂತ ಹೇಳಿದರು. ತಮಗೆ ಹೇಳಬೇಕಾದರೆ ೧೯೮೫–೮೬ರಲ್ಲಿ ಇದಕ್ಕೆ ಪ್ಲಾನ್‌ನಲ್ಲಿ ೮೬.೫೦ ಲಕ್ಷ ತೋರಿಸಿದೆ, ನಾನ್ ಪ್ಲಾನ್‌ನಲ್ಲಿ ೧೪೯೦.೨೬ ಲಕ್ಷ ತೋರಿಸಿದೆ. ಇನ್ನು ಕರ್ನಾಟಕ ರಾಜ್ಯದಲ್ಲಿ ಈ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಎರಡನೆಯ ಕಮೀಷನ್ ಏನು ನೇಮಕ ಮಾಡಿದ್ದೇವೆ ಅವರಿಂದ ಇನ್ನೂ ರಿಪೋರ್ಟ್ ಬಂದಿಲ್ಲ ಎಂದು ಹೇಳಿದ್ದಾರೆ. ಆ ಬಗ್ಗೆ ನಾನು ಈಗಾಗಲೇ ಉತ್ತರ ಹೇಳಿದ್ದೇನೆ.

ಇನ್ನು ಶ್ರೀ ಆರ್. ವೆಂಕಟರಾಮಯ್ಯನವರು ಈ ಹಾಸ್ಟಲ್‌ಗಳಲ್ಲಿರುವ ವಿದ್ಯಾರ್ಥಿಗಳಿಗೆ ಅವರಿಗೆ ಕೊಡುವ ಸ್ಟೈಫಂಡ್ ಏರಿಸಬೇಕು ಎಂದು ಹೇಳಿದ್ದಾರೆ. ಅವರಿಗೆ ನಾವು ಈಗ ೭೫ಕ್ಕೆ ಏರಿಸಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಅವರಿಗೆ ೧೦೦ಕ್ಕೆ ಏರಿಸಬೇಕು ಅಂತ ಹೇಳಿದ್ದೆ ಬೇರೆಯವರು ಎಷ್ಟು ಕೊಡುತ್ತಾರೋ ಅಷ್ಟು ಕೊಡಿ ಅಂತ ಹೇಳಿದ್ದೆ.

ಶ್ರೀ ಬಿ. ಎಲ್. ಪಾಟೀಲ್.—ಅವರಿಗೆ ನಾವು ೭೫ಕ್ಕೆ ಮಾತ್ರ ಏರಿಸಿದ್ದೇವೆ. ಇನ್ನು ಶ್ರೀ ಬಿ. ಎಸ್. ಯಡಿಯೂರಪ್ಪನವರು ಸರಿಯಾಗಿ ನಡೆಯದೇ ಇರತಕ್ಕಂಥಾ ಹಾಸ್ಟಲ್ಸ್ ಏನು ಇವೆ ಅವುಗಳ ಬಗ್ಗೆ ಎನ್‌ಕ್ವೈರಿ ಮಾಡಿಸಿ ಅಂತ ಹೇಳಿದರು; ಹಾಗೂ ಅವುಗಳನ್ನು ಚೆಕಿಂಗ್ ಕೂಡ ಮಾಡಬೇಕು ಅಂತ ಹೇಳಿದರು, ಅಂತಹ ಹಾಸ್ಟಲ್ಸ್‌ಗಳನ್ನು ಈಗಾಗಲೇ ಡಿಸ್ಟ್ರಿಕ್ಟ್ ಆಫೀಸರ ಅವರಿಂದ ಚೆಕ್ ಮಾಡಿಸಿದ್ದೇನೆ. ಗ್ರ್ಯಾಂಟ್ ಇನ್‌ಏಡ್ ಪ್ರೀಮೆಟ್ರಿಕ್ ಹಾಸ್ಟಲ್ಸ್ ಏನು ಇವೆ ಅದನ್ನು ಚೆಕ್ ಮಾಡಿಸಿ, ಈ ಬಗ್ಗೆ ೨೦ ಗ್ರ್ಯಾಂಟ್ ಇನ್‌ಏಡ್ ಪ್ರೀಮೆಟ್ರಿಕ್ ಹಾಸ್ಟಲ್ ಅನ್ನು ಡೀರೆಕಗ್ನೈಸ್ ಮಾಡಿದ್ದೇವೆ. ಎರಡು ಆರ್‌ಫನೇಜ್‌ನಲ್ಲಿ ಮಾಲ್ ಪ್ರಾಕ್ಟೀಸ್ ನಡೆಯುತ್ತಿತ್ತು. ಅದನ್ನು ಚೆಕ್ ಮಾಡಿಸಿದ್ದೇನೆ. ೧೯೮೫–೮೬ರಲ್ಲಿ ಯಾವ್ಯಾವ ಹಾಸ್ಟಲ್ಸ್‌ಗಳಲ್ಲಿ ಏನೇನು ದುರ್ವ್ಯವಹಾರ ನಡೆಯುತ್ತಿತ್ತು ಅವೆಲ್ಲದರ ಬಗ್ಗೆ ಚೆಕ್ ಮಾಡಿಸಿ ಕೆಲವು ಹಾಸ್ಟಲ್ಸನ್ನು ಬಂದ್ ಮಾಡಿಸಿದ್ದೇನೆ. ಈ ಬಗ್ಗೆ ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಅದೇನೆಂದರೆ ಡಿಸೆಂಬರ್ ನಂತರ ಬಿ.ಸಿ.ಎಂ. ಹಾಸ್ಟಲ್ಸನ್ನು ಹೊಸದಾಗಿ ೧೦೦ ಪ್ರಾರಂಭ ಮಾಡಿದೆವು, ಅದಕ್ಕೆ ಬೇಕಾಗುವ ಸಾಮಾನುಗಳಿಗೆ ಈಗಾಗಲೇ ದುಡ್ಡು ಖರ್ಚು ಮಾಡಿದ್ದೇವೆ. ಈ ಬಗ್ಗೆ ದುರ್ವ್ಯವಹಾರ ನಡೆದಿದೆ ಎಂದು ಕೌನ್ಸಿಲ್‌ನಲ್ಲಿ ಮಾನ್ಯ ಸದಸ್ಯರುಗಳು ಆಪಾದನೆ ಮಾಡಿದರು. ಆದುದರಿಂದ ಅದನ್ನು ಪಿ.ಎ.ಸಿ. ಕಮಿಟಿಗೆ ರೆಫರ್ ಮಾಡುವುದಕ್ಕೆ ಸಿದ್ಧನಿದ್ದೇನೆಂದು ಹೇಳಿದ್ದೇನೆ. ಅದಕ್ಕೆ ಮೇಲ್ಮನೆಯ ವಿರೋಧಿ ಪಕ್ಷದ ನಾಯಕರು ಒಪ್ಪಿದ್ದಾರೆ. ಈ ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟಲ್ಸ್ ಸ್ಯಾಂಕ್ಷನ್ ಆದದ್ದು ಹೋದ ವರ್ಷ. ಹೋದ ವರ್ಷ ಆಗಸ್ಟ್ ೧೫ ರೊಳಗೆ ಆ ಹಾಸ್ಟಲುಗಳನ್ನು ಪ್ರಾರಂಭ ಮಾಡುವುದಕ್ಕೆ ಮುನ್ನ ೧೦೦ ಹಾಸ್ಟಲ್‌ಗೂ ಬೇಕಾದ ಸಾಮಾನುಗಳನ್ನು ಖರೀದಿ ಮಾಡಬೇಕಾಯಿತು.

ಶ್ರೀ ಗೋಪಾಲ ಮುಕುಂದ ಕಾನಡೆ.—ಸಾಮಾನು ಎಂದರೆ ಯಾವ ಸಾಮಾನು ಅಂತ ಹೇಳಬೇಕಲ್ಲ. ಆ ಸಾಮಾನುಗಳಿಗೆ ಹೆಸರು ಇಲ್ಲವೇ ?

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಹೀಗೆ ಎದ್ದು ನಿಂತುಕೊಂಡು ಈ ರೀತಿ ಮಾತನಾಡುವುದು ಸರಿಯಲ್ಲ. ತಾವೆಲ್ಲಾ ಕೂಡಿರಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಮಂತ್ರಿಗಳು ಸಾಮಾನುಗಳನ್ನು ಖರೀದಿ ಮಾಡಿದೆವು ಅಂತ ಹೇಳಿದರಲ್ಲಾ ಅದಕ್ಕೆ ಹೆಸರು ಇಲ್ಲವೇ ?

ಶ್ರೀ ವಿ. ಎಲ್. ಪಾಟೀಲ್.—ಸಾಮಾನುಗಳು ಎಂದರೆ ಆ ಹಾಸ್ಟಲ್‌ಸ್‌ಗಳಿಗೆ ಬೇಕಾದ ಕುರ್ಚಿ ಆಲ್‌ಮೈರಾ, ಟೇಬಲ್, ಪೆಟ್ಟಿಗೆಗಳು, ಬಾಂಡ್ಲೆಗಳು ಇವೆಲ್ಲವನ್ನೂ ಖರೀದಿ ಮಾಡಿದ್ದೇವೆ. ಮತ್ತು ಆ ವಿದ್ಯಾರ್ಥಿಗಳಿಗೆ ಬೇಕಾದಂಥ ವಸ್ತುಗಳನ್ನು ನಾವು ಖರೀದಿ ಮಾಡಬೇಕಾಗುತ್ತದೆ. ಅವೆಲ್ಲವನ್ನೂ ನಾವು ಖರೀದಿ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಅವಕಾಶ ಕೊಡಿ. ತಾವೆಲ್ಲಾ ಕೂಡಿರಿ. ಅವರ ಉತ್ತರ ಮುಗಿಯಲಿ, ಆಮೇಲೆ ಕೇಳಿ. ರಾಜವರ್ಧನ್‌ರವರೆ ನಿಮಗೆ ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲವೆ ? ಯದ್ವಾತದ್ವಾ ಮಾತನಾಡುತ್ತಿದ್ದಾರಲ್ಲ... .

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ... ..

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಖರ್ಗೆಯವರು ನನ್ನ ಮೇಲೆ ಒಂದು...

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಉತ್ತರ ಕೊಡುತ್ತಾ ಇದ್ದಾರೆ. ಮಾನ್ಯ ವಿ. ಎಲ್ ಪಾಟೀಲರು ಉತ್ತರವನ್ನು ಕೊಡತಕ್ಕಂಥ ಸಂದರ್ಭದಲ್ಲಿ ಮಧ್ಯೆ ಮಧ್ಯೆ ಪ್ರಶ್ನೆ ಗಳನ್ನು ಕೇಳತಕ್ಕಂಥಾದ್ದು ಮಾನ್ಯ ಖರ್ಗೆಯವರಿಗೆ ಅದು ಶೋಭೆ ತರತಕ್ಕದ್ದಲ್ಲ ಎಂದು ನಾನು ಮನವಿ ಮಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಪ್ರಶ್ನೆ ಕೇಳಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಕುಳಿತುಕೊಂಡೇ ರನ್ನಿಂಗ್ ಕಾಮೆಂಟ್ರಿಯಾಗುತ್ತಿದೆ, ಸ್ವಲ್ಪ ದಯಮಾಡಿ ಕೇಳಿ.

ಶ್ರೀ ಬಿ. ಎ. ಉಮರಬ್ಬ.—ಉತ್ತರ ಹೇಳುವುದಕ್ಕಿಂತ ಕ್ರಿಕೆಟ್ ಆಡಿದರೆ ರನ್ನಿಂಗ್ ಕಾಮೆಂಟ್ರಿ ಬರುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಂತ್ರಿಗಳ ಉತ್ತರ ಸಮರ್ಪಕವಾಗಿ ಇರಬಹುದು ಅಥವಾ ಇಲ್ಲದೇ ಇರಬಹುದು. ಉತ್ತರ ಆದಮೇಲೆ ಕ್ಲಾರಿಫಿಕೇಷನ್ ಕೇಳತಕ್ಕ ಅವಕಾಶವನ್ನು ಮಾನ್ಯ ಅಧ್ಯಕ್ಷರು ಕೊಡುತ್ತಾ ಬಂದಿದ್ದೀರಿ. ಆ ರೀತಿ ತಾವು ಅವಕಾಶ ಕೊಡುತ್ತೀರಿ ಎಂದು ನಾನು ನಂಬಿದ್ದೇನೆ. ಆದರೂ ಕೂಡ ಅವರು ಒಂದು ವಾಕ್ಯ ಹೇಳುವುದರಲ್ಲೇ ಮಧ್ಯೆ ಮಧ್ಯೆ ಪ್ರವೇಶಮಾಡಿ ಒಬ್ಬೊಬ್ಬರೂ ಹೇಳತಕ್ಕಂಥಾದ್ದು ಸರಿಯಾದ್ದಲ್ಲ, ಸರಿಯಾದ ಅಭಿಪ್ರಾಯವಲ್ಲ, ಸರಿಯಾಗಿ ನಡೆದುಕೊಳ್ಳತಕ್ಕ ನೀತಿಯಲ್ಲ. ವಿರೋಧ ಪಕ್ಷದವರಿಗೆ ಮಂತ್ರಿಗಳ ಉತ್ತರ ಸರಿಯಾಗಿಲ್ಲದೇ ಇರಬಹುದು, ನಾನು ಏನು ಮಾಡುವುದಕ್ಕೂ ಬರೀವುದಿಲ್ಲ. ಆದರೆ ಇವರು ಉತ್ತರ ಕೊಡುವಾಗ ಸಮಾಧಾನವಾಗಿ ಕೇಳತಕ್ಕಂಥ ಸೌಜನ್ಯವನ್ನು ಅವರು ತೋರಿಸಬೇಕು ಎಂದು ನಾನು ಅವರಲ್ಲಿ ಬಹಳ ವಿನಮ್ರನಾಗಿ ಕೇಳಿಕೊಳ್ಳು ತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು.—ಈಗ ಬೇಡ ದಯುಮಾಡಿ ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಹೇಳಿದ ಮೇಲೆ ನಾನು ಹೇಳಲೇಬೇಕಾಗುತ್ತದೆ.

ಅಧ್ಯಕ್ಷರು.—ನೀವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಸವಲಿಂಗಪ್ಪ.—ಶ್ರೀಮಾನ್ ಲಕ್ಷ್ಮೀಸಾಗರ್‌ರವರು ನನಗೆ ಬುದ್ಧಿವಾದ ಹೇಳಿದ್ದಾರೆ. ಸೌಜನ್ಯ ನಿಮಗೂ ಇರಬೇಕು, ನಮಗೂ ಇರಬೇಕು. ಸೌಜನ್ಯ ಹೇಗಿರಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಮೊದಲು ಉತ್ತರ ಕೇಳಿ, ರನ್ನಿಂಗ್ ಕಾಮೆಂಟ್ರಿ ಮಾಡುವುದಕ್ಕೆ ಅವಕಾಶ ಇಲ್ಲ.

ಅಧ್ಯಕ್ಷರು.—ಮಂತ್ರಿಗಳ ಉತ್ತರ ನಿಮಗೆ ಸಮರ್ಪಕವಾಗಿ ಕಾಣದೇ ಇರಬಹುದು. ಅವರಿಗೆ ತಿಳಿದದ್ದನ್ನು ಅವರು ಹೇಳುತ್ತಾರೆ. ಆಮೇಲೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ನಿಮಗೆ ನಾನು ಅವಕಾಶ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಅವರು ಸಲಹೆ ಕೊಟ್ಟಿದ್ದಾರೆ. ಸೌಜನ್ಯತೆ ಅಲ್ಲೂ ಇರಬೇಕು, ಇಲ್ಲೂ ಇರಬೇಕು. ಸೌಜನ್ಯತೆ ಅಂದರೆ ಏನು ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಮನವಿ ಮಾಡಿದ್ದೇನೆ. ಕಳಕಳಿಯಿಂದ ಕೇಳುತ್ತೇನೆ, ದಯ ವಿಟ್ಟು ಸಹಕರಿಸಿ, ಅವರು ಉತ್ತರ ಹೇಳಿ ಮುಗಿಸಲಿ.

ಅಧ್ಯಕ್ಷರು.—ಮಂತ್ರಿಗಳ ಉತ್ತರ ಸಮರ್ಪಕವಾಗಿ ಇರಲಿ, ಇಲ್ಲದಿರಲಿ ಅವರಿಗೆ ಬಿಟ್ಟದ್ದು, ಅವರು ಹೇಳಲಿ ಆಮೇಲೆ ನೀವು ಕೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಬಹಳ ಶಾಂತಚಿತ್ತದಿಂದ ನಾವು ಕೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವುದಕ್ಕೆ ಸೌಜನ್ಯತೆ ಇರಬೇಡವೇ ಸದಸ್ಯರು ಏನು ಕೇಳಿದ್ದಾರೆ, ಅದಕ್ಕೆ ಸರಿಯಾಗಿ ಸಾಕ್ಷಿರೂಪದಲ್ಲಿ ಮನವರಿಕೆ ಮಾಡಿಕೊಡಬೇಕು. ನಮಗೆ ತಿಳುವಳಿಕೆ ಕೊಟ್ಟು ಸಂತೃಪ್ತರನ್ನಾಗಿ ಮಾಡಬೇಕು. ಹೆಣ್ಣುಮಕ್ಕಳ ವಿಷಯು ಬಂದಾಗ ರಿಸೆಪ್ಷನ್ ಸೆಂಟರ್ ಓಪನ್ ಮಾಡಿದ್ದೇವೆ ಎಂದು ಶುರುಮಾಡಿದರು. ರಿಸೆಪ್ಷನ್ ಸೆಂಟರ್ ಏಕೆ ಮಾಡಿದರು, ಎಷ್ಟು ಜನ ಒಳಕ್ಕೆ ಬಂದರು ?

ಅಧ್ಯಕ್ಷರು.—ಮಂತ್ರಿಗಳು ಏನು ಹೇಳುತ್ತಾರೋ ಹೇಳಲಿ, ಆಮೇಲೆ ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಸರಿಯಾಗಿ ಹೇಳಲಿ

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ವೇದಾಂತ ಹೆಮ್ಮಿಗೆಯುವರು boarding charges in Ashram Schools should be raised ಎಂದು ಹೇಳಿದ್ದಾರೆ. ಅದನ್ನು ಎಗ್ಸಾಮಿನ್ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಹೇಳುವುದು ನೋಡಿ.

ಅಧ್ಯಕ್ಷರು.—ಲೇಬರ್ ಮಿನಿಸ್ಟರ್‌ರವರು ಯಾವ ರೀತಿ ಅಡೆತಡೆ ಇಲ್ಲದೆ ಹೇಳಿದರೋ ನೀವೂ ಹಾಗೆ ಹೇಳಬೇಕು,

ಶ್ರೀ ವಿ. ಎಲ್. ಪಾಟೀಲ್.—ಗ್ರಾಂಟ್ ಇನ್ ಏಯ್ಡ್ ಹಾಸ್ಟೆಲ್ಸ್‌ನಲ್ಲಿ ದುರ್ವ್ಯವಹಾರಗಳು ನಡೆದಾಗ ಅವೆಲ್ಲವನ್ನೂ ಸರ್ಕಾರ ತೆಗೆದುಕೊಳ್ಳಬೇಕು ಎಂದು ಮಾನ್ಯ ವೇದಾಂತ ಹೆಮ್ಮಿಗೆಯವರು ಸೂಚನೆ ಮಾಡಿದರು.

ಶ್ರೀ ಎ ಲಕ್ಷ್ಮೀಸಾಗರ್.—ನೋಡಿ ರನ್ನಿಂಗ್ ಕಾಮೆಂಟ್ರಿಯಾಗುತ್ತಿದೆ.

ಶ್ರೀ ವಿ. ಎಲ್. ಪಾಟೀಲ್.—ಸರ್ಕಾರ ಇದಕ್ಕಿಂತ ಮುಂಚೆ ಯೋಚನೆ ಮಾಡಿ......

(ಗೊಂದಲ)

ಅಧ್ಯಕ್ಷರು.—ಹೀಗೆ ಮಾಡಿದರೆ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ, ಬಸವಲಿಂಗಪ್ಪ.—ನೀವು ಏಕೆ ಹೀಗೆ ಮಾತನಾಡುತ್ತೀರಿ,

ಶ್ರೀ ವಿ. ಎಲ್. ಪಾಟೀಲ್.—ಇವನ್ನು ತೆಗೆದುಕೊಂಡರೆ ೧ ಕೋಟಿ ೨೦ ಲಕ್ಷ ರೂಪಾಯಿ ಖರ್ಚಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದಕ್ಕೆ ಹಣದ ವ್ಯವಸ್ಥೆಯಾದರೆ ಆ ಹಾಸ್ಟೆಲುಗಳನ್ನು ತೆಗೆದುಕೊಳ್ಳಬಹುದು. ಆಮೇಲೆ ಮಾನ್ಯ ಸದಸ್ಯರು ಇಂಟರ್‌ಕ್ಯಾಸ್ಟ್ ಮ್ಯಾರೇಜಸ್ ಸಲುವಾಗಿ ಸೂಚನೆಗಳನ್ನು ಮಾಡಿದ್ದಾರೆ, ಸರ್ಕಾರ ಅದನ್ನು ಪರಿಶೀಲನೆ ಮಾಡುತ್ತದೆ. ಈಗಾಗಲೇ ಇಂಟರ್‌ಕ್ಯಾಸ್ಟ್ ಮ್ಯಾರೇಜಸ್ ಸಲುವಾಗಿ ಯಾರಿಗೆ......

ಶ್ರೀ ಬಿ. ಬಸವಲಿಂಗಪ್ಪ.—ಹೀಗಾದರೆ ಓಟ್‌ಗೆ ಹಾಕುವುದು ಒಳ್ಳೆಯದು,

ಶ್ರೀ ವಿ. ಎಲ್. ಪಾಟೀಲ್.—ನಾವು ೫೦೦೦ ಕೊಡುತ್ತಿದ್ದೇವೆ. ಅದರಲ್ಲಿ ೨೦೦೦ ಕ್ಯಾಷ್, ೩೦೦೦ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟನ್ನು ಕೊಡುತ್ತಾ ಇದ್ದೇವೆ,

ಶ್ರೀ ಗೋಪಾಲ ಮುಕುಂದ ಕಾನಡೆ.—ಅಲ್ಲ ಅಧ್ಯಕ್ಷರೆ,......

ಅಧ್ಯಕ್ಷರು.—ತಾವು ಏನು ಹೇಳಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇಂಟರ್‌ಕ್ಯಾಸ್ಟ್ ಮ್ಯಾರೇಜಸ್ ಎಷ್ಟು ಹಣವನ್ನು ಇಟ್ಟಿದ್ದಾರೆ ?

ಅಧ್ಯಕ್ಷರು.—ಅವರು ಏನು ಹೇಳುತ್ತಾರೋ ಹೇಳಲಿ, ಆಮೇಲೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ,......

ಅಧ್ಯಕ್ಷರು.—ಮಂತ್ರಿಗಳ ಉತ್ತರ ಸಮರ್ಪಕವಾಗಿಲ್ಲ ಅಂದರೆ ಅವರಿಂದ ಬಿಡಿಸಿ ಮತ್ತೊಬ್ಬರಿಂದ ಹೇಳಿಸುವುದಕ್ಕಾಗುತ್ತದೆಯೇ ತಾವು ಹೇಳಿ.

ಶ್ರೀ ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೆ, ೫೦ ಸಲ ಎದ್ದು ನಿಂತು ಹೇಳಿದ್ದಾರೆ. ಮಂತ್ರಿಗಳ ಉತ್ತರ ಮುಗಿಯಲಿ, ಆಮೇಲೆ ಪ್ರಶ್ನೆ ಕೇಳಿ ಎಂದು ತಾವೂ ಹೇಳಿದ್ದೀರಿ. ಮಂತ್ರಿಗಳ ಉತ್ತರ ಸರಿಯಾಗಿರಬಹುದು ಅಥವಾ ಸರಿಯಾಗಿಲ್ಲದೇ ಇರಬಹುದು, ಮೊದಲು ಉತ್ತರ ಮುಗಿಯಲಿ, ಆಮೇಲೆ ಪ್ರಶ್ನೆ ಕೇಳಲಿ. ಮಾತೆತ್ತಿದರೆ ಎದ್ದು ನಿಂತು ಕೇಳುವುದು ಸರಿಯಲ್ಲ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ.

ಶ್ರೀ ಪುಟ್ಟಸ್ವಾಮಿಗೌಡ.—ನಾನು ಕುಳಿತುಕೊಳ್ಳುತ್ತೇನೆ. ಮಂತ್ರಿಗಳು ಉತ್ತರ ಪೂರ್ತಿ ಮಾಡಲಿ. ಹೀಗೆ ಅವರು ಮಧ್ಯೆ ಮಧ್ಯೆ ಎದ್ದು ನಿಂತರೆ ಮಾನ್ಯ ವಿರೋಧಪಕ್ಷದ ನಾಯಕರು ಮಾತ ನಾಡುವಾಗ ಒಂದೊಂದು ಮಾತಿಗೂ ನಾವು ಸಹ ಎದ್ದು ನಿಂತು ಕೇಳಬೇಕಾಗುತ್ತದೆ. ಆಗ ಸಭೆ ನಡೆಸು ವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಕೆಲವು ವಿಚಾರಗಳು ದಾಖಲೆಯಲ್ಲಿ ಹೋಗಬಾರದು ಮತ್ತು ಆ ಪದ್ಧತಿ ಕೂಡ ಆಗಬಾರದು. ಮಾನ್ಯ ಸಂಸದೀಯ ಸಚಿವರು ಎದ್ದು ನಿಂತು ಮಾತನಾಡಿದರು. ಏನೆಂದರೆ, ಉತ್ತರ ಸಮರ್ಪಕವಾಗಿರಲಿ, ಅಸಮರ್ಪಕವಾಗಿರಲಿ ನೀವು ಕೇಳಬೇಕು, ಸೌಜನ್ಯತೆಯಿಂದ ಕೇಳಬೇಕು ಎಂದು. ಆ ಮಾತು ಸರಿಯಿಲ್ಲ. ದಯಮಾಡಿ ಆಲಿಸ ಬೇಕು. ಯಾವಾಗಲೂ ಕೂಡ ಉತ್ತರ ತೃಪ್ತಿಕರವಾಗಿರಲಿ ಇಲ್ಲದಿರಲಿ, ಆದರೆ ಸಾಧ್ಯವಾದಷ್ಟು ಉತ್ತರ ಕೊಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಅಷ್ಟನ್ನು ತಾವು ಮಂತ್ರಿಗಳಿಗೆ ದಯಮಾಡಿ ಅಪ್ಪಣೆ ಕೊಡಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ದಯವಿಟ್ಟು ಕ್ಷಮಿಸಿ, ತಾವು ಸ್ವಲ್ಪ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾನು ಏನು ಹೇಳುತ್ತೇನೆ ಎನ್ನುವುದನ್ನು ದಯಮಾಡಿ ಕೇಳ ಬೇಕು. ಏನು ಹೇಳಿದರೂ ದಕ್ಕುತ್ತದೆ ಎನ್ನುವ ಭಾವನೆ ಮಾಡಿಕೊಳ್ಳಲಿಕ್ಕೆ ಹೋಗಬಾರದು. ತಾವು ನೋಡಿದ್ದೀರಿ, ಅನೇಕ ದಿವಸಗಳಿಂದ ನಾವು ಕೋಆಪರೇಟ್ ಮಾಡುತ್ತಾ ಇದ್ದೇವೆ. ಇವತ್ತಿನ ದಿವಸ ಬೆಳಿಗ್ಗೆ ಕೋರಂ ಇರಲಿಲ್ಲ, ವಿರೋಧಪಕ್ಷದವರು ಬಂದಮೇಲೆ ಕೋರಂ ಆಯಿತು, ಸಭೆ ನಡೆಯಿತು. ಅನೇಕ ವರ್ಷಗಳಿಂದ ವಿರೋಧ ಪಕ್ಷಗಳು ಸಹಕಾರ ಕೊಡುತ್ತಾ ಬಂದಿವೆ. ಬೆಳಿಗ್ಗೆ ವಿರೋಧಪಕ್ಷದ ಕೋರಮ್ ಇರಲಿಲ್ಲ. ವಿರೋಧಪಕ್ಷದವರು ಬಂದರು, ಕೋರಮ್ ಆಯಿತು. ಸಭೆ ನಡೆಯಿತು.

ತಾವು ಆಲೋಚನೆ ಮಾಡಬೇಕು. We are here to co-operate. ಸಚಿವರು ಉತ್ತರ ಕೊಡುವಾಗ ಮಧ್ಯೆ ಮಧ್ಯೆ ಗೊಂದಲ ಹೇಗಾಯಿತು. ತಾವು ಹೇಳುತ್ತೀರಿ ಸ್ಪಷ್ಟೀಕರಣ ಕೇಳಿಯೆಂದು ಉತ್ತರವೇ ಇಲ್ಲದಿರುವಾಗ ಸ್ಪಷ್ಟೀಕರಣ ಏನು ಬಂತು? ಈ ಪ್ರಶ್ನೆಯನ್ನು ತಾವು ಹೇಳಬೇಕು. ತಾವು ಹೇಳಿದ ಹಾಗೆ ಅದು ಆಪಾದನೆಯಾಗುವುದಿಲ್ಲ. ಉತ್ತರವನ್ನು ಅವರು ಕೇಳಿದಾಗ ಸಮಯೋಚಿತ ವಾಗಿಹೇಳಬೇಕಾಗುತ್ತದೆ. ಸಮರ್ಪಕವಾದ ಉತ್ತರವನ್ನು ಹೇಳುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು, ಆ ತರಹ ತಾವು ಅಪ್ಪಣೆ ಕೊಡಿಸಬೇಕು ಮತ್ತು ಸಂಸದೀಯ ಸಚಿವರಿಗೂ ಇದನ್ನು ತಾವು ಹೇಳದೆ ಇದ್ದರೆ ಇಲ್ಲಿ ಸದನದ ಕಾರ್ಯಕಲಾಪಗಳು ನಡೆಯುವುದು ಬಹಳ ಕಷ್ಟವಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಅವರು ಉತ್ತರ ಪ್ರಾರಂಭ ಮಾಡುವ ಸಮಯದಿಂದ ಇಲ್ಲಿಯ ವರೆವಿಗೂ ವೀಕ್ಷಣೆ ಮಾಡುತ್ತಾ ಇದ್ದೇನೆ. ಅವರು ಉತ್ತರವನ್ನು ಹೇಳಲು ಶುರುಮಾಡಿದಾಗಿನಿಂದ ನಾನು ನೋಡುತ್ತಾ ಇದ್ದೇನೆ. ಬೇರೆ ಮಂತ್ರಿಗಳು ಉತ್ತರ ಹೇಳುವಾಗ ಈ ರೀತಿ ಮಾಡಲಿಲ್ಲ. ನಾನೂ ನೋಡಿದ್ದೇನೆ. ಸಾಕ್ಷಿಭೂತವಾಗಿ ಜೀವಂತವಾಗಿ ಅಲ್ಲಿ ಕುಳಿತಿರತಕ್ಕ ಸನ್ಮಾನ್ಯ ಸದಸ್ಯರು ಮಂತ್ರಿಗಳಾಗಿದ್ದಾಗ ಏನು ಮಾಡಿದರು ಎಂಬುದು ನನಗೂ ಗೊತ್ತಿದೆ. ಈ ರೀತಿ ರನ್ನಿಂಗ್ ಕಾಮೆಂಟರಿಯನ್ನು ನಾವು ಕೊಡುತ್ತಾ ಇರಲಿಲ್ಲ. ಇದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದೆ. ಉತ್ತರ ಸಮರ್ಪಕವಾಗಿ ಇರಲಿ ಇಲ್ಲದಿರಲಿ ನಮ್ಮ ಉತ್ತರವನ್ನು ದಯವಿಟ್ಟು ಕೇಳಿ. ಆದಾದಮೇಲೆ ಬೇಕಾದರೆ ಕ್ಲಾರಿಫಿಕೇಷನ್ ಕೇಳಿ ಯೆಂದು ಹೇಳಿದ್ದಾರೆಯೇ ಹೊರತು ತಮ್ಮ ಸಹಕಾರ ಬೇಡ ಎನ್ನುವ ಅರ್ಥದಲ್ಲಿ ಹೇಳಲಿಲ್ಲ. ಅವರು ಹೇಳುವುದನ್ನು ಕೇಳಿಯೆಂದು ಅಧ್ಯಕ್ಷರು ಸಹಾ ಎರಡುಮೂರು ಸಲ ಹೇಳಿದ್ದಾರೆ, ಸೀನಿಯರ್ ಮಂತ್ರಿಯಾಗಿದ್ದ ಸನ್ಮಾನ್ಯ ಬಂಗಾರಪ್ಪನವರಿಗೆ ಇವತ್ತು ಏನು ರೋಷ ಬಂದಿದೆ. ಅವರು ರುದ್ರಾವತಾರವಾಗಿ ಮಾತನಾಡಿದರೆ ನಾವು ಏನು ಮಾಡೋಣ? ದಯವಿಟ್ಟು ಮತ್ತೊಮ್ಮೆ ತಮ್ಮಲ್ಲಿ ವಿನಯದಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಅವರ ಉತ್ತರವನ್ನು ಕೇಳುವುದಕ್ಕೆ ತಯಾರಿಲ್ಲ. ಸಮಾಜ ಕಲ್ಯಾಣ ಇಲಾಖೆಯ ಬಗ್ಗೆ ಉತ್ತರ ಕೊಡುತ್ತಿದ್ದಾರೆ. ಜನರನ್ನು ಪರಿವರ್ತನೆ ಮಾಡತಕ್ಕ ಇಲಾಖೆ ಇದು. ನೀವು ಏನು ಬೇಕಾದರೂ ಹೇಳಿ. This is very bad. You cannot take action.

(ಗೊಂದಲ)

SRI. A. LAKSHMISAGAR—I can also call you by name. Please don't do it. You give him a chance to answer all the points. As I said earlier, it may not be palatable to you but you have remedies open to you viz., you can seek clarification but don't interrupt for heaven's sake. It has been my request. Why don't you kindly allow him to give answer?

SRI B. BASAVALINGAPPA.—He talks everything *i.e*, whatever comes to his mind. Let him give a reasonable and responsible reply.

SRI A. LAKSHMISAGAR.—It is neither you nor me the house will decide.

MR. SPEAKER.—"The Chair cannot dictate to him. He has heard the Hon'ble Members. It is left to the Hon'ble Minister to reply in his own way. It is not correct, for Mr Basavalingappa to intervene without the permission of the Chairman and make a speech"

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಅವರಿಗೆ ತೊಂದರೆ ಕೊಡಬೇಕು ಎನ್ನುವ ಉದ್ದೇಶವಿಲ್ಲ. ಗಲಾಟೆ ಮಾಡಬೇಕು ಎನ್ನುವ ಇಚ್ಛೆಯೂ ಇಲ್ಲ. ಸಮಾಜ ಕಲ್ಯಾಣ ಇಲಾಖೆ ಬಹಳ ಮಹತ್ವವಾದ ಇಲಾಖೆ. ಈ ಬೇಡಿಕೆ ಬಹಳ ಮುಖ್ಯವಾದುದು. ಸಮಾಜ ಕಲ್ಯಾಣ, ಹಿಂದುಳಿದ ವರ್ಗ, ಮತ್ತು ಅಲ್ಪ ಸಂಖ್ಯಾತರಿಗೆ ಸಂಬಂಧಪಟ್ಟಂತಹ ಇಲಾಖೆ. ಇದರಲ್ಲಿ ಯಾವ ಯಾವ ಬದಲಾವಣೆಗಳನ್ನು ಮಾಡುತ್ತೀರ ಎಂಬುದಾಗಿ ಅನೇಕ ಸದಸ್ಯರು ಕೇಳಿದ್ದಾರೆ. ಮಾನ್ಯ ಬಸವಲಿಂಗಪ್ಪನವರೇನೂ ಈ ಸದನಕ್ಕೆ ಹೊಸಬರಲ್ಲ. ಈ ಸದನದಲ್ಲಿ ಎಲ್ಲರಿಗಿಂತಲೂ ಹಿರಿಯ ಸದಸ್ಯರು ಅವರು. ಅವರು ಮತ್ತು ಮಾನ್ಯ ನಾಗರತ್ನಮ್ಮನವರು ಸುಮಾರು ೧೯೫೭ನೇ ಇಸ್ವಿಯಿಂದ ಗೈಡ್ ಮಾಡುವುದಕ್ಕೆ ಹೊಸಬರಲ್ಲ. ಮಂತ್ರಿಗಳಲ್ಲೂ ಕೂಡ ಅವರು ಎಲ್ಲರಿಗಿಂತಲ್ಲೂ ಹಿರಿಯ ಮಂತ್ರಿಗಳಾಗಿದ್ದರು. ೧೯೭೮ನೇ ಇಸವಿಯೊಂದನ್ನು ಬಿಟ್ಟರೆ ಇಲ್ಲಿಯವರೆವಿಗೂ ಮುಂದುವರಿದುಕೊಂಡು ಬಂದಿದ್ದಾರೆ. ಇವರಿಗೆ ದಾರಿ ತೋರಿಸತಕ್ಕ ಅವಶ್ಯಕತೆ ಇಲ್ಲ. ಅವರಿಂದ ಬೇಕಾದರೆ ಗೈಡೆನ್ಸ್ ತೆಗೆದುಕೊಳ್ಳಬಹುದು. ಇಂತಹ ದೊಡ್ಡ ಡಿಪಾರ್ಟ್‌ಮೆಂಟ್ ಬಗ್ಗೆ ಕೂಲಂಕುಷವಾಗಿ ಮಾತನಾಡುವಾಗ ಅನೇಕ ಸದಸ್ಯರು ತಮ್ಮ ಮುಂದೆ ಪ್ರಶ್ನೆ ಹಾಕಿದ್ದಾರೆ, ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಅದಕ್ಕೆ ಸಮರ್ಪಕವಾದ ಉತ್ತರ ಕೊಡಬೇಕೇ ಹೊರತು ಬರೆದುಕೊಂಡು ಬಂದು ಸುಮ್ಮನೆ ಯಾವುದೂ ಒಂದನ್ನು ಓದಿಕೊಂಡು ಹೋದರೆ ಆಗುವುದಿಲ್ಲ, ಈ ಇಲಾಖೆಯಲ್ಲಿ ಈ ಜನಾಂಗಕ್ಕೆ ಏನು ಮಾಡುತ್ತೀರಿ ಎಂಬುದನ್ನು ಹೇಳಿದರೆ ಸರಿಯಾಗುತ್ತದೆ

ಶ್ರೀ ವಿ ಎಲ್. ಪಾಟೀಲ್.—ನಾನು ಭಾಷಣ ಮಾಡುವಾಗ ಯಾವುದನ್ನು ಬರೆದುಕೊಂಡು ಬಂದು ಓದಿಲ್ಲ. ಈಗ ತಾವು ಏನೇನು ಪ್ರಶ್ನೆ ಕೇಳಿದ್ದೀರಿ ಅದರ ಬಗ್ಗೆ ಮಾತ್ರ ಬರೆದುಕೊಂಡು ಬಂದಿದ್ದೇನೆ. ಅದರಲ್ಲಿ ನೀವು ಕೇಳುವ ಪ್ರಶ್ನೆಗಳಿಗೆ ಉತ್ತರಗಳು ಇವೆ. ಈ ಗ್ರ್ಯಾಂಟ್ ಇನ್ ಏಡ್ ಸ್ಕೂಲ್‌ಗಳು ಏನು ಇವೆ ಅವಕ್ಕೆ ಒಂದು ಕೋಟಿ ಇಪ್ಪತ್ತು ಲಕ್ಷ ರೂಪಾಯಿಗಳು ಸರ್ಕಾರದಿಂದ ಖರ್ಚಾಗುತ್ತದೆ. ಅದನ್ನು ಈಗಾಗಲೇ ಸರ್ಕಾರ ಪರಿಶೀಲನೆ ಮಾಡಿದೆ. ಏಡೆಡ್ ಹಾಸ್ಟೆಲ್‌ನ್ನು ಬಂದ್ ಮಾಡಬೇಕೆಂದು ಹೇಳಿದಿರಿ. ಅದು ಸಾಧ್ಯವಿಲ್ಲ ಕಷ್ಟವೆಂದು ನಾನು ಹೇಳುತ್ತೇನೆ. ಹೆಚ್ಚು ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡುತ್ತೇನೆ. ಈಗಾಗಲೇ ಅಂತರ್ ಜಾತಿ ವಿವಾಹಕ್ಕೆ ಸಲಹೆ ಕೊಟ್ಟಿದ್ದಾರೆ. ಆ ರೀತಿ ವಿವಾಹ ಆದರೆ ಐದು ಸಾವಿರ ರೂಪಾಯಿಗಳ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟ್‌ನ್ನು ಮತ್ತು ಎರಡು ಸಾವಿರ ರೂಪಾಯಿಗಳನ್ನು ನಗದಾಗಿಯೂ ಕೊಡುತ್ತೇವೆ. ಇದರ ಬಗ್ಗೆ ಇನ್ನೂ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಒಬ್ಬೊಬ್ಬರಿಗಾದರೂ ಉದ್ಯೋಗ ಕೊಡಬೇಕೆಂದು ಹೇಳಿದ್ದಾರೆ. ಅದನ್ನು ಕೂಡ ಪರಿಶೀಲನೆ ಮಾಡುತ್ತೇವೆ. ಆಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಹಣ should not be lapsed ಎಂದು ಹೇಳಿದ್ದಾರೆ. ನಾನು ಹೇಳುತ್ತೇನೆ, ಎರಡು ವರ್ಷಗಳ ಹಿಂದೆ ಅಂದರೆ ೧೯೭೬-೭೭ ರಲ್ಲಿ ೯೬.೧೨ ಪರ್ಸೆಂಟ್ ಖರ್ಚಾಗಿದೆ. ೧೯೭೭-೭೮ರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಫಲವಾಗಿ ೯೯.೮೦ ಪರ್ಸೆಂಟ್ ಖರ್ಚಾಗಿದೆ. ಆಮೇಲೆ ಮಾನ್ಯ ಕುಮಾರ ಸ್ವಾಮಿಯವರು ವರಮಾನದ ಲಿಮಿಟ್ ಇರಬಾರದು ಎಂದು ಹೇಳಿದರು. ೧೨,೦೦೦ ರೂಪಾಯಿಯೊಳಗೆ ಇರುವ ಪ್ರೀಮೆಟ್ರಿಕ್ ವಿದ್ಯಾರ್ಥಿಗಳಿಗೆ ಇನ್‌ಕಮ್ ಲಿಮಿಟ್ ಇಲ್ಲ. ಪೋಸ್ಟ್ ಮೆಟ್ರಿಕ್ ವಿದ್ಯಾರ್ಥಿಗಳಿಗೆ ಇನ್‌ಕಮ್ ಲಿಮಿಟ್ ಇದೆ. ಪೋಸ್ಟ್ ಮೆಟ್ರಿಕ್‌ನವರಿಗೆ ಇನ್‌ಕಮ್ ಲಿಮಿಟ್‌ನ್ನು ೨೦ ಸಾವಿರ ರೂಪಾಯಿಗೆ ಏರಿಸಬೇಕೆಂದು ಈಗಗಾಲೇ ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಅಲ್ಲಿಂದ ರೆಕಮೆಂಡೇಷನ್ ಬಂದ ನಂತರ ನಾವು ಅದನ್ನು ಜಾರಿಗೆ ತರಬಹುದು. ಈಗ ಎಸ್ ಸಿ. ಮತ್ತು ಎಸ್. ಟಿ. ವೆಲ್‌ಫೇರ್‌ನ್ನು ರೀಆರ್ಗನೈಜೇಷನ್ ಮಾಡಬೇಕೆಂದು ಸೂಚನೆ ಕೊಟ್ಟಿದ್ದಾರೆ, ಯಾವ ತರಹ ಮಾಡಬೇಕು ಎಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. A l the money under the plan scheme comes form the Central Government. ಬಸವಲಿಂಗಪ್ಪನವರು ಇದರ ಬಗ್ಗೆ ಹೇಳಿದ್ದಾರೆ. ಈಗ ಎಸ್‌ಸಿ ಎಸ್‌ಟಿ ವೆಲ್‌ಫೇರ್ ಇಲಾಖೆಗೆ ಸಾಧಾರಣವಾಗಿ Rs. 459.91 laksh comes from the State plan funds and Rs. 2,262 21 laksh comes from the State Government under non-plan. Only Rs. 252.75 laksh comes from the Centre. ಇನ್ನು sponsored scheme ಬಗ್ಗೆ In addition to the above, 1269 lakhs is expected from the the Goveinment of India as special central assistance of which only 822 lakshs.

ಇನ್ನು ಮಾಲೂರಿನಲ್ಲಿ ಗ್ರ್ಯಾಂಟ್ ಇನ್ ಏಡ್ ಹಾಸ್ಟೆಲ್‌ಗಳು ಚೆನ್ನಾಗಿ ನಡೆಯುತ್ತಿಲ್ಲವೆಂದು ಮಾನ್ಯ ವೆಂಕಟರಾಮಯ್ಯನವರು ಹೇಳಿದರು. The Government have wirhdrawn the recognition. ೧೯೮೫–೮೬ರಲ್ಲಿ ಗ್ರ್ಯಾಂಟ್ಸ್ ಕೊಟ್ಟಿದೆ. ಮಾನ್ಯ ಯಡಿಯೂರಪ್ಪನವರು ಇಂಟರ್ ಕ್ಯಾಸ್ಟ್ ಮ್ಯಾರೇಜ್ ಬಗ್ಗೆ ಪ್ರಶ್ನೆ ಕೇಳಿದರು. ೧೨,೦೦೦ ಇನ್‌ಕಮ್ ಇದ್ದುದನ್ನು ೨೪,೦೦೦ಕ್ಕೆ ಏರಿಸುವ ಪ್ರಪೋಸಲ್ ಅನ್ನು ಕನ್ಸಿಡರ್ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ಕಾನಡೆಯವರು ಇಂಟರ್ ಕ್ಯಾಸ್ಟ್ ಮ್ಯಾರೇಜಸ್‌ಗೆ ಅಮೌಂಟ್ ಅನ್ನೇ ಇಟ್ಟಿಲ್ಲವೆಂದು ಹೇಳಿದರು. ಬಜೆಟ್ಟಿನಲ್ಲಿ ಮೂರು ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದರಲ್ಲಿ ಎಷ್ಟು ಇಂಟರ್ ಕ್ಯಾಸ್ಟ್ ಮ್ಯಾರೇಜಸ್ ಆಗುತ್ತದೆಯೋ ಅಷ್ಟು ದುಡ್ಡು ಖರ್ಚಾಗುತ್ತದೆ. ಎಷ್ಟು ಖರ್ಚಾಗುತ್ತದೆಂದು ಹೇಗೆ ಹೇಳುವುದಕ್ಕೆ ಆಗುತ್ತದೆ? ಇಂಟರ್ ಕ್ಯಾಸ್ಟ್ ಮ್ಯಾರೇಜ್ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಪ್ರಶ್ನೆ ಕೇಳಿದರು. ಸರ್ಕಾರ ಈ ಬಗ್ಗೆ ಬೇಗನೆ ಡಿಸಿಷನ್ ತೆಗೆದುಕೊಳ್ಳುತ್ತದೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. Sri Mallappa in his speech has stated that the caste certificate should not be insisted upon at every stage ಎಂದು ಹೇಳಿದ್ದಾರೆ. ಎಸ್.ಸಿ. ಎಸ್.ಟಿ. ಯವರಿಂದ ಕ್ಯಾಸ್ಟ್ ಸರ್ಟಿಫಿಕೇಟ್ ತೆಗೆದುಕೊಂಡ ನಂತರ ಮುಂದೆ ಅವರು ಡ್ಯೂಪ್ಲಿಕೇಟ್ ಸರ್ಟಿಫಿಕೇಟನ್ನು ಪ್ರೊಡ್ಯೂಸ್ ಮಾಡಿದರೆ ಸಾಕು, ಪುನಃ ಮತ್ತೆ ಒರಿಜಿನಲ್ ಸರ್ಟಿಫಿಕೇಟ್‌ನ್ನು ಕೊಡುವ ಅವಶ್ಯಕತೆ ಇಲ್ಲ. ಈ ಬಗ್ಗೆ ಅಮಲ್ದಾರರಿಗೆ ನಾವು ಸೂಚನೆಗಳನ್ನು ಕಳಿಸಿದ್ದೇವೆ. ಇನ್ನು ಎಸ್.ಸಿ. ಎಸ್.ಟಿ. ಯವರಿಗೆ ಗುದ್ದಲಿ ಸನಿಕೆ ಮುಂತಾದ ಉಪಕರಣಗಳನ್ನು ಕೊಡುವ ಒಂದು ಹೊಸ ಸ್ಕೀಮನ್ನು ನಮ್ಮ ಜನತಾ ಸರ್ಕಾರ ಮಾಡಿದೆ. ಸಾಧಾರಣವಾಗಿ ಈ ಸ್ಕೀಮ್ ಅನ್ನು ರಿಸರ್ವೇಷನ್ ಕಾನ್ಸಿಟ್ಯುಯೆನ್ಸಿ ಎಲ್ಲೆಲ್ಲಿ ಇದೆ, ಅಲ್ಲಲ್ಲಿ ಕೊಡುತ್ತೇವೆ. ಸರ್ಕಾರದ ವತಿಯಿಂದ ಇದನ್ನು ಪರ್ಚೇಸ್ ಮಾಡುತ್ತೇವೆ. ೧೯೮೫–೮೬ರಲ್ಲಿ ೧೨.೫ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇದನ್ನು ಆದಷ್ಟೂ ರಿಸರ್ವ್ ಕಾನ್ಸಿಟ್ಯುಯೆನ್ಸಿಯಲ್ಲಿ ಕೊಡುತ್ತೇವೆ. ನಾಯಕ್, ಬೇಡ, ಕುರುಬರು ಹಾಗೂ ಮಾಲೂರಿನಲ್ಲಿರುವ ಮುಸಲ್ಮಾನ ಜನಾಂಗದಲ್ಲಿರುವ ದರ್ವೇಸಿಗಳು, ಒಂದೇ ಕೋಮಿನವರಾಗಿದ್ದು, ಒಂದೇ ಪದ್ಧತಿಯಿರುವವರಿಗೆ ಈ ಸವಲತ್ತು ಸಿಗಬೇಕು. ಇದನ್ನು ಕ್ಯಾಬಿನೆಟ್ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕು, ಹಾಗೂ ಅಭ್ಯಾಸ ಆಗಬೇಕಾಗಿದೆ ಎಂದು ವಿಧಾನ ಸಭೆಯಿಂದ ಒಂದು ಕಮಿಟಿಯನ್ನು ಮಾಡಿದ್ದೇವೆ. ಆ ಕಮಿಟಿಯವರು ಇದನ್ನು ಅಭ್ಯಾಸ ಮಾಡಿ ಕ್ಯಾಬಿನೆಟ್‌ಗೆ ರೆಕಮಂಡೇಷನ್ ಮಾಡುತ್ತಾರೆ. ಕ್ಯಾಬಿನೆಟ್ ಸೆಂಟ್ರಲ್ ಗವರ್ನ್‌ಮೆಂಟ್‌ಗೆ ಬರೆದು ತಿಳಿಸುತ್ತದೆ ಇದಕ್ಕೆ ಮಾನ್ಯ ಬಸವಲಿಂಗಪ್ಪನವರೇ ವಿರೋಧವಿದ್ದಾರೆಂದರೆ ನನಗೆ ಆಶ್ಚರ್ಯ.

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.— ನಾನೇಕೆ ವಿರೋಧ ಮಾಡಲಿ? ರಾಜ್ಯಾಂಗದಲ್ಲಿ ಏನು ಹೇಳಿದ್ದಾರೋ ಅದಕ್ಕೆ ತಕ್ಕ ಹಾಗೆ ಮಾಡಿ. ನಾನು ಯಾರಿಗೂ ವಿರೋಧವಿಲ್ಲ. ರಾಜ್ಯಾಂಗಕ್ಕೆ ವಿರೋಧವಾಗಿ ನಡೆದುಕೊಳ್ಳಬೇಡಿ. ನಿನ್ನೆ ದಿವಸ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಹೇಳಿದ್ದೇನೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಮೇಲೆ ಮಾಡಿ. ಅದರ ಮೇಲೆ ಏನು ನಿಮ್ಮ ತರ್ಕ? ನೀವು ಯಾರು ಬೇರೆ ಯಾವರನ್ನು ಅದರಲ್ಲಿ ಸೇರಿಸಲಿಕ್ಕೆ? ಎಸ್.ಸಿ. ಎಸ್.ಟಿ. ಯವರದ್ದು ಒಂದು ಪಟ್ಟಿ ಮಾಡಿದ್ದಾರೆ. ಯಾರ್‍ಯಾರು ಈ ಟ್ರೈಬ್ಸ್ ಆಗಿರುತ್ತಾರೆ ಅಂತಹವರು ಈ ಪಟ್ಟಿಯಲ್ಲಿ ಬರಲೇ ಬೇಕು. ಸೀರಿಯಲ್ ನಂಬರ್ ಆಗಿ ಬರುತ್ತಾರೆ. ಯಾವುದೋ ಒಂದು ಜಾತಿಯಲ್ಲಿ, ಯಾವುದೋ ಒಂದು ಸಬ್ ಕ್ಯಾಸ್ಟ್ ಇದ್ದರೆ ಅದನ್ನು ಷೆಡ್ಯೂಲ್ ಟ್ರೈಬ್ಸ್ ಎಂದು ಹೇಳತಕ್ಕಂಥಾದ್ದು ಇದಕ್ಕಿಂತ ಅಪಚಾರದ ಮಾತು ಯಾವುದೂ ಇಲ್ಲ. ಕುರುಬರು ಕಾಡಿನಲ್ಲಿ ಇರುತ್ತಾರೆಯೋ?

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಬಸವಲಿಂಗಪ್ಪನವರು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಇಂತಹ ಜನರಿಗೆ ಸವಲತ್ತುಗಳನ್ನು ಕೊಡಬೇಕು, ಇಷ್ಟೇ ಅಲ್ಲ, ಆ ಫೈಲ್ ಅನ್ನು ತರಿಸಿ ಅದನ್ನು ಕ್ಲೋಸ್ ಮಾಡಿ ಎಂದು ಇದೆ. "I request you kindly to send for the file and close the enquiry" ಎಂದಿದೆ.

(ಗೊಂದಲ)

SRI V. L. PATIL.— The letter says thus, "There are employees of public sector industries and they have joined service few years ago. This enquiry according to them has embrassed them in the factories. There is no rule for conducting enquiries, regarding employees who have already entered service in factories.

SRI B. BASAVALINGAPPA.— It is not my letter.

ಶ್ರೀ ವಿ. ಎಲ್. ಪಾಟೀಲ್.— ಯಾರು ಸರ್ಟಿಫಿಕೇಟ್‌ಗಳನ್ನು ತೆಗೆದುಕೊಂಡು ಸರ್ವೀಸ್‌ನಲ್ಲಿ ಎಂಟ್ರೈರ್ ಆಗಿದ್ದಾರೆ, ಅವರಿಗೆ ತೊಂದರೆ ಕೊಡಬಾರದೆಂದು ಪತ್ರ ಬಂತು.

".I request you kindly to send for the file and close the enquiry" ಎಂದು ಅವರು ಬರೆದಿದ್ದಾರೆ.

SRI B. BASAVALINGAPPA.— What is the date of that letter ?

SRI V. L. PATIL.— It was dated 30-6-82.

SRI B. BASAVALINGAPPA.— You read the latest letter.

ಶ್ರೀ ವಿ. ಎಲ್. ಪಾಟೀಲ್.— ಮಾನ್ಯ ಮುಖ್ಯ ಮಂತ್ರಿಯವರು ಇದನ್ನು ಮಾಡಿದ್ದಾರೆಂದು ಹೇಳಿದರು, ಇದು ನನ್ನ ಇಲಾಖೆ, ಇದು ನನಗೆ ಕನ್‌ವಿನ್ಸ್ ಆದುದರಿಂದ ಇದನ್ನು ಎಕ್ಸಾಮಿನ್ ಮಾಡ ಬೇಕೆನ್ನುವ ದೃಷ್ಟಿಯಿಂದ ಕಮಿಟಿಯನ್ನು ಮಾಡಿದ್ದೇವೆ. ಕ್ಯಾಬಿನೆಟ್‌ನಲ್ಲೂ ಹೇಳಿದ್ದೇನೆ, ಕಮಿಟಿ ರಿಪೋರ್ಟ್ ಬರುವವರೆಗೂ ತಡೆಯಬೇಕು ಹಾಗೂ ಯೋಗ್ಯವಿದ್ದರೆ ಸೆಂಟ್ರಲ್ ಗವರ್ನ್‌ಮೆಂಟಿಗೂ ಪತ್ರ ಬರೆಯಬೇಕೆಂದು ಹೇಳಿದ್ದೇನೆ ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೂ ಇದಕ್ಕೂ ಯಾವ ಸಂಬಂಧವಿಲ್ಲ.

ಶ್ರೀ ಯು. ಭೂಪತಿ.— ನಾವ್ಯಾರು ಓಟು ಹಾಕುವುದು ಬೇಡವೇ ಬೇಡ.

ಶ್ರೀ ವಿ. ಎಲ್. ಪಾಟೀಲ್.— ನಮ್ಮ ಸನ್ಮಾನ್ಯ ಸ್ನೇಹಿತರೆಲ್ಲಾ ಚರ್ಚೆ ಮಾಡಿ ಅವರ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಅದನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಇನ್ನು ಕೆಲವರಿಗೆ ಅಸಮಾಧಾನವಾಗಿರಬಹುದು, ಆದರೂ ಕೂಡ ಅವರ ಜೊತೆಗೆ ಚರ್ಚೆ ಮಾಡಿ, ಇದನ್ನು ಯಾವ ತರಹ ಸುಧಾರಣೆ ಮಾಡಬೇಕೋ ಹಾಗೆ ಮಾಡಲು ಪ್ರಯತ್ನ ಮಾಡುತ್ತೇನೆ. ನಾನು ಮಂಡಿಸಿದಂತಹ ಈ ಮಸೂದೆಗೆ ತಾವೆಲ್ಲರೂ ಅನುಮತಿ ಕೊಟ್ಟು ಇದನ್ನು ಪಾಸ್ ಮಾಡಿಕೊಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಸ್ವಾಮಿ, ಇವತ್ತು ಮಾನ್ಯ ಮಂತ್ರಿಯವರು ಚುಕ್ಕೆ ಗುರುತಿಲ್ಲದ ೫೬೧ನೇ ನಂಬರಿನ ಪ್ರಶ್ನೆಗೆ ಉತ್ತರ ಕೊಡುತ್ತಾ ಸ್ಪೆಷಲ್ ಕಾಂಪೋನೆಂಟ್ ಸ್ಕೀಮಿನ ಪ್ರಕಾರ ಎಷ್ಟು ಹಣಕೊಟ್ಟಿದ್ದೀರಿ ಎಂದು ಕೇಳಿದ್ದಕ್ಕೆ, ೯.೦೨ ಲಕ್ಷ ಕೊಟ್ಟಿದ್ದೇವೆಂದು ಹೇಳಿದ್ದಾರೆ ಈಗಿನವರೆಗೆ ಎಷ್ಟು ಖರ್ಚು ಮಾಡಿದ್ದಾರೆಂದರೆ, ೨.೪೪ ಲಕ್ಷ ಖರ್ಚು ಮಾಡಿದ್ದಾರೆ. ಇನ್ನು ೭ ಕೋಟಿ ರೂಪಾಯಿ ಗಳಿಗೆ ಲೆಕ್ಕ ಕೊಟ್ಟಿಲ್ಲ ಇನ್ನು ೧೫ ದಿವಸಕ್ಕೆ ಈ ವರ್ಷ ಮುಗಿದು ಹೋಗುತ್ತೆ, ೭ ಕೋಟಿ ರೂಪಾಯಿಗಳನ್ನು ಯಾವರೀತಿ ಖರ್ಚು ಮಾಡುತ್ತೀರಿ ? ಇನ್ನು ಕುರುಬರನ್ನು ಎಸ್.ಟಿ. ಮಾಡ ಬೇಕೆಂದು ಹೊರಟಿದ್ದೀರಿ. ಸಮಾಜಕ್ಕೆ ಅಪಚಾರ ಮಾಡತಕ್ಕ ಪ್ರಯತ್ನ ಮಾಡಿದ್ದೀರಿ. ಇವತ್ತು ಸುಪ್ರೀಂಕೋರ್ಟ್, ಮತ್ತು ಹೈಕೋರ್ಟುಗಳು ಜಡ್ಜ್‌ಮೆಂಟ್ ಕೊಟ್ಟಿವೆ. ನೀವು ಯಾರನ್ನೂ ಕೂಡ ಎಸ್.ಟಿ ಮಾಡುವುದಕ್ಕಾಗುವುದಿಲ್ಲ. ನಾಯಕ ಜನಾಂಗದಲ್ಲಿ ೭–೮ ಪಂಗಡಗಳು ಇವೆ. ನಾವೇ ಎಸ್.ಟಿ. ಎಂದು ಅವರು ಹೇಳುವುದು ಸರಿಯಲ್ಲ. ಜಡ್ಜ್‌ಮೆಂಟ್ ಪ್ರಕಾರ ಸೀರಿಯಲ್ ನಂಬರ ಇರಬೇಕು, ಆ ಜಾತಿ ಇಂಡಿಪೆಂಡೆಂಟಾಗಿ ಇರಬೇಕು. ಕಾಡು ಕುರುಬರು ಕೂರ್ಗ್ ಜಿಲ್ಲೆಯಲ್ಲಿ ಮಾತ್ರ ಇದ್ದಾರೆ ಇವರನ್ನು ಟ್ರೈಬ್‌ಗೆ ಸೇರಿಸತಕ್ಕ ಪ್ರಯತ್ನ ಮಾಡಿ, ಬೇರೆ ಬಡವರಿಗೆ ಅನುಕೂಲ ವಾಗುವುದನ್ನು ಏತಕ್ಕೆ ತಪ್ಪಿಸುತ್ತೀರಿ ? ರಾಜ್ಯಾಂಗದ ೩೪೧–೩೪೨ನೇ ವಿಧಿ ಪ್ರಕಾರ ಯಾವುದೇ ಜಾತಿಗಳ ವಿಷಯದಲ್ಲಿ ಒಂದು ತೀರ್ಮಾನ ಮಾಡಬೇಕಾದ್ದು, ಪಾರ್ಲಿಮೆಂಟ್ ಮಾತ್ರ, ಅವರ್‍

ಅದನ್ನು ಬೇಕಾದರೆ ಸೇರಿಸಬಹುದು, ಅಥವಾ ಕಿತ್ತು ಹಾಕಬಹುದು, ಇಂಥ ಸಮಿತಿಗಳನ್ನು ಕೂಡ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಸುಪ್ರೀಂಕೋರ್ಟು ಏನು ಹೇಳಿದೆ ಅದರಂತೆ ಮಾಡಿಕೊಂಡು ಹೋಗಿ.

ಶ್ರೀ ಪಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಮಗೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಹಣ ಬರಬೇಕಾಗಿದೆ. ನವೆಂಬರ್‌ನಲ್ಲಿ ಮೊದಲನೇ ಕಂತು ಬಂದಿದೆ, ಫೆಬ್ರುವರಿಯಲ್ಲಿ ಎರಡನೇ ಕಂತು ಬಂದಿದೆ ಹಣ ಬರುವುದರಲ್ಲಿ ತಡವಾಗಿದೆ, ಇದರಲ್ಲಿ ಸಮಾಜಕಲ್ಯಾಣ ಇಲಾಖೆಯ ಅಧಿಕಾರಿಗಳ ತಪ್ಪು ಏನೂ ಇಲ್ಲ ಹಣ ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಲಾಗುವುದು.

ಶ್ರೀ ಆರ್. ವೆಂಕಟರಾಮಯ್ಯ.—ಸ್ವಾಮಿ, ಪ್ರತಿ ಹೋಬಳಿ ಮಟ್ಟದಲ್ಲಿ ಹಿಂದುಳಿದ ವರ್ಗದವರಿಗೆ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡಬೇಕೆಂದು ಹೇಳಿದ್ದೆ, ಅದರ ಬಗ್ಗೆ ಮಾನ್ಯ ಮಂತ್ರಿಯವರು ಏನೂ ಹೇಳಿದಂತೆ ಕಾಣಲಿಲ್ಲ. ಹಾಸ್ಟೆಲ್‌ಗಳಲ್ಲಿ ಇರತಕ್ಕ ವಿದ್ಯಾರ್ಥಿಗಳಿಗೆ ೧೦೦ ರೂಪಾಯಿ ಕೊಡುವಂತೆ, ಹಾಗೂ ವ್ಯವಸ್ಥೆ ಮಾಡಬೇಕೆಂದು ಅನಾಥ ಆಶ್ರಮದಲ್ಲಿರುವಂಥ ಅನಾಥ ಹೆಣ್ಣು ಮಕ್ಕಳಿಗೆ ೧೦೦ ರೂಪಾಯಿ ಕೊಡುವ ಬಗ್ಗೆ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ವರ್ಷ ೧೦೦ ಹಾಸ್ಟೆಲುಗಳನ್ನು ಕೊಡುವ ಬಗ್ಗೆ ಸರ್ಕಾರ ಒಪ್ಪಿಕೊಂಡಿದೆ, ಅವಶ್ಯಕತೆ ಎಲ್ಲೆಲ್ಲಿ ಇದೆ, ಅಂಥಾ ಕಡೆಗಳಿಗೆ ಹಾಸ್ಟೆಲುಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ವೇದಾಂತ ಹೆಮ್ಮಿಗೆ.—ಸ್ವಾಮಿ, ಅಂಗವಿಕಲರಿಗೆ ಭತ್ಯ ಕೊಡುವಂಥ ಒಂದು ಯೋಜನೆ ಇದೆ. ಅನೇಕ ಜನ ಅಗವಿಕಲ ಹೆಣ್ಣು ಮಕ್ಕಳು, ಮಕ್ಕಳೂ ಪ್ರತಿ ತಿಂಗಳು ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಸಂಬಂಧಪಟ್ಟ ಅಧಿಕಾರಿಯ ಬಾಗಿಲನ್ನು ತಟ್ಟತಕ್ಕ ಪರಿಸ್ಥಿತಿ ಇದೆ. ನೂರೆಂಟು ಕಾರಣಗಳನ್ನು ಕೊಟ್ಟು, ಅವರನ್ನು ವಾಪಸ್ಸು ಕಳುಹಿಸಿಕೊಡುತ್ತಾರೆ. ಗ್ರಾಂಟು ಬಂದಿಲ್ಲವೆಂದು ಹೇಳಿಕಳುಹಿಸಿಕೊಡುತ್ತಾರೆ. ಯಾರು ಯಾರಿಗೆ ಭತ್ಯ ಮಂಜೂರಾಗಿದೆ, ಅಂಥವರಿಗೆ ನೇರವಾಗಿ ಎಂ.ಓ. ಮೂಲಕ ಹಣ ತಲುಪಿಸುವ ವ್ಯವಸ್ಥೆ ಮಾಡಬೇಕು. ರಾಜ್ಯದ ಮೂಲೆ ಮೂಲೆಗಳಿಂದ ಅಂಗವಿಕಲ ಮಹಿಳೆಯರು, ಮಕ್ಕಳು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ, ಇವರ ಬಗ್ಗೆ ಗ್ರಾಮ ಲೆಕ್ಕಿಗರ ಮೂಲಕ ಸರ್ವೆ ಮಾಡಿಸಿ, ಭತ್ಯ ಮಂಜೂರು ಮಾಡತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ ? ಇನ್ನು ಅಂತರ್‌ಜಾತಿ ವಿವಾಹ ಮಾಡಿಕೊಂಡವರಿಗೆ ಕೇವಲ ೫೦೦೦ ರೂಪಾಯಿಗಳನ್ನು ಕೊಡುವುದರಿಂದ ಯಾವ ಅನುಕೂಲವೂ ಆಗುವುದಿಲ್ಲ, ಒಂದು ಕೆಲಸ ಕೊಡಿಸುವಂಥ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಅಂತರ್‌ಜಾತಿ ವಿವಾಹವಾದವರಿಗೆ ಶಾಶ್ವತವಾಗಿ ಕೆಲಸ ಕೊಡಿಸುವುದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಈಗಾಗಲೇ ಅಂಗವಿಕಲರಿಗೆ ಕೊಡುವ ಭತ್ಯವನ್ನು ಬ್ಯಾಂಕುಗಳ ಮೂಲಕ ಕೊಡುವಂಥ ವ್ಯವಸ್ಥೆ ಮಾಡಿದ್ದೇವೆ. ಭತ್ಯೆ ಮಂಜೂರು ಮಾಡುವ ವಿಚಾರದಲ್ಲಿಯೂ ಕೆಳಗಿನ ಅಧಿಕಾರಿಗಳಿಗೆ ಸೂಕ್ತವಾದ ಸೂಚನೆ ಕೊಡಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಜನತಾ ಸರ್ಕಾರದಲ್ಲಿ ತಾವು ಈ ಖಾತೆಯನ್ನು ವಹಿಸಿಕೊಂಡಮೇಲೆ ಎಷ್ಟು ಹಾಸ್ಟೆಲುಗಳಿಗೆ ಭೇಟಿ ಕೊಟ್ಟಿದ್ದೀರಿ ? ಯಾವ ಯಾವ ಜಿಲ್ಲೆಗೆ, ಯಾವ ಯಾವ ತಾಲ್ಲೂಕಿಗೆ ಭೇಟಿ ಕೊಡುವಂಥ ಪ್ರೊಗ್ರಾಂ ಹಾಕಿದ್ದೀರಿ ಎನ್ನುವುದನ್ನು ಹೇಳುತ್ತೀರಾ ? ಇನ್ನು ಹಾಸ್ಟೆಲುಗಳಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಆಯಾಯಾ ಕ್ಷೇತ್ರದ ಶಾಸಕರನ್ನು ಮತ್ತು ಮುಖಂಡರುಗಳನ್ನು ಕೇಳದೆ, ಅವರ ಇಚ್ಛೆಗೆ ಅನುಸಾರವಾಗಿ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಪಿ. ಎಲ್. ಪಾಟೀಲ್.—ವಿದ್ಯಾರ್ಥಿಗಳನ್ನು ಹಾಸ್ಟೆಲುಗಳಿಗೆ ಆಯ್ಕೆ ಮಾಡುವುದಕ್ಕೆ ಒಂದು ಸಮಿತಿ ಇದೆ. ಆ ಸಮಿತಿಯ ಮೂಲಕ ಇದು ನಡೆಯುತ್ತಿದೆ. ದೂರುಗಳು ಬಂದಂಥ ಸಂದರ್ಭದಲ್ಲಿ ಅಧಿಕಾರಿಗಳನ್ನು ಕಳುಹಿಸಿ, ಸೂಕ್ತ ಚೆಕಿಂಗ್ ಮಾಡಿರುವುದಲ್ಲದೆ, ಹಿಂದೆ ಯಾವಾಗಲೂ ಮಾಡದೇ ಇರತಕ್ಕ ರೀತಿಯಲ್ಲಿ ಚೆಕಿಂಗ್ ಮಾಡಿ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಬಿ. ಗುರುಪ್ರಸಾದ್.—ಸ್ವಾಮಿ, ಅಂತರ್‌ಜಾತೀಯ ವಿವಾಹದ ಬಗ್ಗೆ ಇಲ್ಲಿ ಬಹಳ ಚರ್ಚೆ ನಡೆದಿದೆ, ಇದಕ್ಕೆ ಇನ್‌ಕಂ ಲಿಮಿಟ್ ಹಾಕಿದ್ದಾರೆ. ಬರೀ ಬಡವರಲ್ಲಿ ಮಾತ್ರ ಈ ವಿವಾಹ

ನಡೆಯಬೇಕು, ಸಾಹುಕಾರರಲ್ಲಿ ನಡೆಯಬಾರದೆಂದು ಇದೆಯೇ ? ಇವತ್ತು ಎಸ್.ಸಿ. ಮತ್ತು ಎಸ್.ಟಿ. ಬಗ್ಗೆ ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಡ್ರಾಯಿಂಗ್ ಆಫೀಸ್ ಕ್ಲಾಸ್ (೧) ಜೂನಿಯರ್ ಸ್ಕೇಲಿನವರು ಇದ್ದಾರೆ, ತಾಲ್ಲೂಕು ಮಟ್ಟದಲ್ಲಿ ಇಂಪ್ಲಿಮೆಂಟ್ ಆಫೀಸರ್ ಅಂದರೆ ಇನ್ಸ್‌ಪೆಕ್ಟರ್ ಇದ್ದಾರೆ. ಆದ್ದರಿಂದ ಈಗ ಈ ಇಲಾಖೆಯನ್ನು ಪುನರ್‌ವಿಂಗಡಣೆ ಮಾಡುವಂಥದ್ದು ಬಹಳಷ್ಟು ಅವಶ್ಯಕತೆ ಇದೆ. ಈ ಇಲಾಖೆಯನ್ನು ಪುನರ್‌ವಿಂಗಡಣೆ ಮಾಡಬೇಕಾದರೆ, ಜಿಲ್ಲಾ ಮಟ್ಟದಲ್ಲಿರತಕ್ಕಂತಹ ಕ್ಲಾಸ್ (೧) ಜ್ಯೂನಿಯರ್ ಸ್ಕೇಲ್ ಅಧಿಕಾರಿಗಳು ಏನು ಇದ್ದಾರೆ, ಅವರನ್ನು ಕ್ಲಾಸ್ (೧) ಸೀನಿಯರ್ ಸ್ಕೇಲ್ ಎಂಬುದಾಗಿ ಮಾಡಿ, ಕ್ಲಾಸ್ (೨) ಅಧಿಕಾರಿಗಳನ್ನು ತಾಲ್ಲೂಕು ಮಟ್ಟದಲ್ಲಿ ನೇಮಕ ಮಾಡಬೇಕು. ಆ ರೀತಿ ಮಾಡಿದ್ದೇ ಆದರೆ, ಈಗ ಏನು ಎಲ್ಲ ಹಣವನ್ನು ಈ ಇಲಾಖೆಯ ಮುಖಾಂತರವೇ ಖರ್ಚು ಮಾಡಬೇಕೆಂದು ನಿರ್ಧಾರ ಮಾಡಿದ್ದಾರೆ, ಅದಕ್ಕೆ ಒಂದು ರೂಪ ಕೊಟ್ಟ ಹಾಗೆ ಆಗುತ್ತದೆ. ಹಾಗೂ ಶೇಕಡಾ ೧೦೦ ರಷ್ಟು ಅಭಿವೃದ್ಧಿಯಾಗುವುದಕ್ಕೆ ಸಹಾಯಕವಾಗುತ್ತದೆ. ಮೂರನೆಯದಾಗಿ ಲಾ ಕಾಲೇಜ್ ಹಾಸ್ಟೆಲ್ ಇಲ್ಲ. ಆದರಿಂದಾಗಿ ಹರಿಜನ-ಗಿರಿಜನ ವಕೀಲರುಗಳ ಶೇಕಡವಾರು ಬಹಳ ಕಡಿಮೆ ಇದೆ. ಆದ್ದರಿಂದ ಲಾ ಕಾಲೇಜ್ ಹಾಸ್ಟೆಲ್‌ನ್ನು ತೆರೆಯುವ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂಬುದನ್ನು ತಿಳಿಸಬೇಕು. ಅದರಲ್ಲಿ ಶೇಕಡಾ ೧೮ ರಷ್ಟು ಮೀಸಲಾತಿಯನ್ನು ಕಡ್ಡಾಯವಾಗಿ ಮೈನ್‌ಟೇನ್ ಮಾಡಬೇಕು. ಇದಕ್ಕಿಂತ ಜಾಸ್ತಿಯಾಗಿದ್ದರೂ ಇನ್ನೂ ಒಳ್ಳೆಯದು. ಮತ್ತೆ ಈಗ ಇರತಕ್ಕಂತಹ ಮೆಟ್ರಿಕ್ ಪೂರ್ವ ಹಾಸ್ಟೆಲ್ ಹಾಗೂ ಪದವಿ ಪೂರ್ವ ಹಾಸ್ಟೆಲ್‌ಗಳಲ್ಲಿ ಇರುವಂತಹ ವಿದ್ಯಾರ್ಥಿಗಳಿಗೆ ಕ್ರಮವಾಗಿ ೧೦೦ ಹಾಗೂ ೧೫೦ ರೂಪಾಯಿಗಳು ಸಿಕುತ್ತಾ ಇದೆ. ಈಗಿನ ಬೆಲೆ ಏರಿಕೆಯಲ್ಲಿ ಈ ಹಣದಿಂದ ಅವರಿಗೆ ಸರಿಯಾದ ಊಟವನ್ನು ಸಹ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಈ ಹಣವನ್ನು ಕನಿಷ್ಟ ೨೦೦ ರೂಪಾಯಿಗಳಿಗಾದರೂ ಹೆಚ್ಚು ಮಾಡಬೇಕು. ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದಿರುವ ನಮ್ಮ ಸರ್ಕಾರ, ಪರಿಶಿಷ್ಟ ವರ್ಗ ಹಾಗೂ ಪರಿಶಿಷ್ಟ ಜಾತಿಗಳವರೇ ಹೆಚ್ಚು ಸಂಖ್ಯೆಯಲ್ಲಿರತಕ್ಕಂತಹ ಕಾಲೋನಿಗಳಲ್ಲಿ ವಸತಿ ಶಾಲೆಗಳನ್ನು ಕಡ್ಡಾಯವಾಗಿ ತೆರೆಯಬೇಕು. ಈಗ ಸಾಮಾನ್ಯವಾಗಿ ಈ ಒಂದು ಕಾಲೋನಿಗಳಲ್ಲಿರುವ ಮಕ್ಕಳ ಹಾಜರಾತಿ ಬಹಳ ಕಡಿಮೆಯಾಗುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಆ ರೀತಿ ಕಡ್ಡಾಯವಾಗಿ ವಸತಿ ಶಾಲೆಗಳನ್ನು ತೆರೆದದ್ದೇ ಆದರೆ, ಇವರಲ್ಲೂ ಬ್ರೈಟ್ ಸ್ಟೂಡೆಂಟ್‌ಗಳು ಬರುವುದಕ್ಕೆ ಅನುಕೂಲವಾಗುತ್ತದೆ. ಈ ಎಲ್ಲಾ ವಿಷಯಗಳ ಬಗ್ಗೆ ಮಾನ್ಯ ಮಂತ್ರಿಗಳು ವಿವರಣೆಯನ್ನು ಕೊಡಬೇಕು.

ಶ್ರೀ ಬಿ. ಎಲ್. ಪಾಟೀಲ್.—ಮೊದಲನೆಯದಾಗಿ ಅಂತರ್‌ಜಾತಿ ವಿವಾಹ ಮಾಡಿಕೊಳ್ಳುವಂತಹವರಿಗೆ ಅವರು ಶ್ರೀಮಂತರಾಗಿದ್ದರೂ ಅವರಿಗೂ ಅನ್ವಯವಾಗಬೇಕು ಎನ್ನುವ ಉದ್ದೇಶದಿಂದ ವರಮಾನ ಮಿತಿಯನ್ನು ಹೆಚ್ಚು ಮಾಡಿದ್ದೇವೆ. ಜೊತೆಗೆ ಇಂತಹವರಿಗೆ ಶಾಶ್ವತವಾಗಿ ಅನುಕೂಲವಾಗುವ ರೀತಿಯಲ್ಲಿ ಅವರಿಗೆ ಕೆಲಸವನ್ನು ಕೊಡಿಸುವ ದೃಷ್ಟಿಯಿಂದಲೂ ನಾವು ಯೋಚನೆ ಮಾಡುತ್ತಿದ್ದೇವೆ. ಲಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರತಕ್ಕಂತಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕೊಡುತ್ತಿದ್ದೇವೆ. ಮತ್ತೆ ಮಾನ್ಯ ಸದಸ್ಯರು ಕಡ್ಡಾಯ ಶಿಕ್ಷಣ ನೀತಿಗನುಗುಣವಾಗಿ ಹರಿಜನ-ಗಿರಿಜನರು ಇರುವಂತಹ ಕಾಲೋನಿಗಳಲ್ಲಿ ಆಶ್ರಮ ಶಾಲೆಯನ್ನು ತೆರೆಯಬೇಕೆಂಬ ಸಲಹೆಯನು ಏನು ಕೊಟ್ಟಿದ್ದಾರೆ, ಅದು ಉತ್ತಮವಾದ ಸಲಹೆ, ಆದರೂ ಇದರ ಬಗ್ಗೆ ವಿದ್ಯಾ ಇಲಾಖೆ ಹಾಗೂ ಹರಿಜನ-ಗಿರಿಜನ ಕಲ್ಯಾಣ ಇಲಾಖೆ ಕೂಡಿ ಯೋಚನೆ ಮಾಡಬೇಕಾಗುತ್ತದೆ. ಇದರಲ್ಲಿ ಆದಂತಹ ತೀರ್ಮಾನವನ್ನು ಮುಂದೆ ಸಚಿವ ಸಂಪುಟದ ಮುಂದೆ ತರುವುದಕ್ಕೆ ಪ್ರಯತ್ನ ಮಾಡುತ್ತೇನೆ. ಮತ್ತೆ ಈ ಇಲಾಖೆಯನ್ನು ಪುನರ್‌ವಿಂಗಡಣೆ ಮಾಡಬೇಕೆಂದು ಹೇಳಿದ್ದಾರೆ. ಈ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಅಧಿಕಾರಿಗಳೇ ಇಲ್ಲ. ಆದ್ದರಿಂದ ಈ ಬಗ್ಗೆ ಕಂದಾಯ ಇಲಾಖೆ ಯಾವ ರೀತಿ ಇದೆ, ಅದೇ ರೀತಿ ಈ ಇಲಾಖೆಯನ್ನೂ ಮಾಡುವುದು ಬಹಳ ಅವಶ್ಯಕತೆ ಇದೆ ಎಂದು ನನಗೂ ಅನ್ನಿಸಿದೆ. ಜೊತೆಗೆ ಬರೀ ಇಲಾಖೆಯನ್ನೇ ಹೆಚ್ಚು ಮಾಡುವುದರ ಜೊತೆಗೆ ಹಣವನ್ನೂ ಹೆಚ್ಚು ಕೊಡಬೇಕಾಗುತ್ತದೆ. ಆ ಬಗ್ಗೆ ಪರಿಶೀಲನೆ ಮಾಡುತ್ತೇನೆ. ರಾಜ್ಯದಲ್ಲಿ ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗದವರ ಸಂಖ್ಯೆ ಶೇಕಡ ೭೦ರಷ್ಟು ಇದೆ. ಮೊದಲಿನಿಂದಲೂ ಈ ಇಲಾಖೆಯ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕಾಗಿತ್ತು. ಆದರೆ ಹಿಂದೆ ಯಾರೂ ಆಸಕ್ತಿ ವಹಿಸಲಿಲ್ಲ. ಈ ಇಲಾಖೆಗೆ ಬೇರೆ ಇಲಾಖೆಗಳಿಗೆ ಎಷ್ಟು ಹಣವನ್ನು ಕೊಡುತ್ತೇವೆಯೋ ಅದಕ್ಕಿಂತ ಹೆಚ್ಚು ಹಣವನ್ನು ಕೊಡಬೇಕಾಗುತ್ತದೆ. ಜಿಲ್ಲಾ

ಮಟ್ಟದಿಂದ ಹಿಡಿದು ಹಳ್ಳಿ ಮಟ್ಟದವರೆಗೂ ಇಲಾಖೆಯ ಅಧಿಕಾರಿಗಳನ್ನು ಇಡಬೇಕಾಗುತ್ತದೆ. ಆ ದಿಸೆಯಲ್ಲಿ ಜನತಾ ಸರ್ಕಾರ ಹೋಗುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ನಿನ್ನೆ ನಾನು ಬೇಕಾದಷ್ಟು ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅಂತರ್‌ಜಾತಿ ವಿವಾಹ ಮಾಡಿಕೊಂಡವರಿಗೆ ಸಹಾಯ ಮಾಡುವ ಸಲುವಾಗಿ ಇವರ ಇಲಾಖೆಯಲ್ಲಿ ಕೇವಲ ೫,೦೦೦ ರೂ.ಗಳನ್ನು ಮಾತ್ರ ಇಟ್ಟಿದ್ದಾರೆ.

ಶ್ರೀ ವಿ. ಎಲ್. ಪಾಟೀಲ್.—೩ ಲಕ್ಷ ಹಣವನ್ನು ಇಟ್ಟಿದ್ದೇವೆಂದು ನನ್ನ ಉತ್ತರದಲ್ಲಿ ಹೇಳಿದ್ದೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಂತರ್‌ಜಾತಿ ವಿವಾಹ ಮಾಡಿಕೊಂಡವರಿಗೆ ಪರಿಹಾರವನ್ನು ಕೊಡುವ ಸಲುವಾಗಿ ವರಮಾನವನ್ನು ಏನು ನಿಗದಿ ಮಾಡಿದ್ದೀರಿ, ಅದು ಅವರ ತಂದೆಯದೋ ಅಥವಾ ಯಾರು ಮದುವೆಯನ್ನು ಮಾಡಿಕೊಳ್ಳುತ್ತಾರೋ ಆ ಹುಡುಗನದೋ ? ಬೆಂಕಿ ಅನಾಹುತವಾದರೆ ಅಂಥವರಿಗೆ ೬೦೦ ರೂ.ಗಳ ಪರಿಹಾರವನ್ನು ಕೊಡಬೇಕೆಂದು ನಿಗದಿ ಮಾಡಿದ್ದೀರಿ ! ಇದಕ್ಕಾಗಿ ಈ ಇಲಾಖೆಯಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂಬುದನ್ನು ಹೇಳುವುದಕ್ಕೆ ಸಾಧ್ಯವೇ ? ಈ ಇಲಾಖೆಯಲ್ಲಿ ಕಟ್ಟಡಕ್ಕೆ ಮಾತ್ರ ಹೆಚ್ಚು ಹಣವನ್ನು ಇಟ್ಟಿದ್ದಾರೆ. ಉಳಿದ ಬಾಬುಗಳಿಗೆ ಹಣವನ್ನೇ ಇಟ್ಟಿಲ್ಲ. ಹಿಂದೆ ಮಾನ್ಯ ರಾಜವರ್ಧನ್‌ರವರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ, ಪ್ರತಿಯೊಂದು ಹರಿಜನ-ಗಿರಿಜನರ ಕುಟುಂಬಗಳಿಗೆ ಗುರುತಿನ ಕಾರ್ಡನ್ನು ಕೊಟ್ಟು, ಆ ಕಾರ್ಡಿನ ಆಧಾರದ ಮೇಲೆ ಅವರ ಜಾತಿಯ ಪ್ರಮಾಣಪತ್ರವನ್ನು ತಹಸೀಲ್ದಾರ್‌ರವರಿಂದತೆಗೆದುಕೊಳ್ಳಬೇಕು ಎಂದು ಮಾಡಿದ್ದರು. ಹಾಗೆ ಒಮ್ಮೆ ತೆಗೆದುಕೊಂಡಂತಹ ಜಾತಿ ಪ್ರಮಾಣ ಪತ್ರದ ಅಸಲು ಪ್ರತಿಯನ್ನು ಇಟ್ಟುಕೊಂಡು ಅದರ ಫೋಟೋ ಸ್ಟ್ಯಾಟ್ ಕಾಪಿಯನ್ನು ಉಪಯೋಗಿಸಿಕೊಳ್ಳಬಹುದೆಂದು ಮಾಡಿದ್ದರು. ಹಾಗೂ ಇದನ್ನು ೫ ವರ್ಷಕ್ಕೊಮ್ಮೆ ಬದಲಾವಣೆ ಮಾಡಿದರೆ ಸಾಕು ಎಂಬುದಾಗಿ ಹೇಳಿದ್ದರು. ಅದರ ಬಗ್ಗೆ ತಾವು ತೆಗೆದುಕೊಂಡಿರುವಂತಹ ಕ್ರಮವಾದರೂ ಏನು ? ಇದರ ಬಗ್ಗೆ ನಂತರ ಬಂದಿರುವಂತಹ ಸಚಿವರು ಹಾಗೂ ಇಲಾಖೆ ಕ್ರಮ ಕೈಗೊಳ್ಳದಿದ್ದರೆ, ಹರಿಜನರ ಪರಿಸ್ಥಿತಿ ಏನಾಗಬೇಕು ? ದಾವಣಗೆರೆಯಲ್ಲಿ ಅಸಕ್ತ ಪೋಷಕರ ಸಂಘ ಎಂಬುದೊಂದು ಇದೆ. ಆ ಸಂಘದ ಹೆಸರಿಗೆ ಅಲ್ಲಿಯ ಬಸ್ ನಿಲ್ದಾಣದ ಎದುರಿಗೇ ಒಂದು ಎಕರೆ ಜಮೀನನ್ನು ಮಂಜೂರು ಮಾಡಿಕೊಡಲಾಗಿದೆ ಆದರೆ ಅಲ್ಲಿ ಯಾವ ಹರಿಜನರು ಇಲ್ಲಾ, ಹರಿಜನರ ಹುಡುಗರೂ ಇಲ್ಲ. ಅಲ್ಲಿ ಬ್ರಾಂದಿ ಶಾಪ್‌ನ್ನು ಪ್ರಾರಂಭ ಮಾಡಿದ್ದಾರೆ. ಇದನ್ನು ತನಿಖೆ ಮಾಡುವ ಸಲುವಾಗಿ ಸಿ.ಒ.ಡಿ.ಗೆ ಹಾಕಿ. ನಿಮ್ಮ ಇಲಾಖೆಯಲ್ಲಿರತಕ್ಕಂತಹ ಅಧಿಕಾರಿಗಳೂ ಹಾಸ್ಟೆಲ್‌ಗಳಿಗೆ ಬೆಡ್ಡಿಂಗ್ಸ್ ಕೊಡುವುದರಲ್ಲಿ ಮೋಸಮಾಡಿದ್ದಾರೆ. ಅವರ ಬಗ್ಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ? ಆ ಬಗ್ಗೆ ನಿರ್ದಿಷ್ಟವಾದ ಉತ್ತರ ಬೇಕೇ ಹೊರತು, ಪರಿಶೀಲನೆ ಮಾಡುತ್ತೇನೆಂದು ಮಾತ್ರ ಹೇಳಬೇಡಿ.

ಶ್ರೀ ವಿ. ಎಲ್. ಪಾಟೀಲ್.—ಪರಿಶೀಲನೆ ಮಾಡುವ ಪ್ರಶ್ನೆಯಿಲ್ಲ. ಅಂತರ್‌ಜಾತಿ ವಿವಾಹ ಮಾಡಿಕೊಂಡಂತಹವರು ಎಷ್ಟೇ ಜನರು ಬರಲಿ ಅವರೆಲ್ಲರಿಗೂ ಸಹಾಯಧನವನ್ನು ಕೊಡುವ ಜವಾಬ್ದಾರಿಯನ್ನು ಸರ್ಕಾರ ಹೊರುತ್ತದೆ. ಒಂದು ವೇಳೆ ಯಾರಿಗಾದರೂ ಸಿಕ್ಕಿಲ್ಲದಿದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಅವರಿಗೂ ಈ ಒಂದು ಅನುಕೂಲವನ್ನು ಒದಗಿಸಿಕೊಡುವ ಭರವಸೆಯನ್ನು ಕೊಡು ತ್ತೇನೆ. ವರಮಾನದ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ಇದರಲ್ಲಿ ಸ್ಪಷ್ಟವಾಗಿ ಹೇಳಬೇಕು. ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಆದಂತಹ ಹುಡುಗ-ಹುಡುಗಿ ಇಬ್ಬರಿಗೂ ಅವರವರ ಮನೆಯವರು ಮನೆಯಿಂದ ಹೊರಗೆ ಹಾಕುತ್ತಾರೆ. ಇಂಟರ್‌ಕ್ಯಾಸ್ಟ್ ಮ್ಯಾರೇಜನ್ನು ಒಪ್ಪಿಕೊಳ್ಳತಕ್ಕಂಥಹ ಕುಟುಂಬಗಳು ಬಹಳ ಕಡಿಮೆ. ಆದ್ದರಿಂದ ಕುಟುಂಬಗಳ ಇನ್‌ಕಂ ಅನ್ನು ಹಿಡಿದುಕೊಂಡು ಬಿಟ್ಟರೆ ಅವರಿಗೆ ನೀವು ಕೊಡತಕ್ಕ ಬೆನಿಫಿಟ್ ಸಿಗುವುದಿಲ್ಲ. ಶ್ರೀಮಂತರ ಮನೆಯ ಹುಡುಗ-ಹುಡುಗಿ ಇದ್ದರೂ ಕೂಡ ಮನೆಯಿಂದ ಹೊರಗೆ ಹಾಕುತ್ತಾರೆ ಇಂತಹ ಸಂದರ್ಭಗಳಲ್ಲಿ ತಾವು ಸಪೋರ್ಟ್ ಕೊಡಬೇಕು. ಅವರಿಗೆ ಸ್ವತಃ ಕೆಲಸ ಇದ್ದರೆ ಕೆಲಸ ಕೊಡುವುದು ಬೇಡ. ಇಲ್ಲದಿದ್ದರೆ ನೀವು ಅಂಥವರಿಗೆ ಪ್ರೋತ್ಸಾಹ ವಾಗಿ ಕೆಲಸವನ್ನು ನೀಡಬೇಕು.

ಶ್ರೀ ವಿ. ಎಲ್. ಪಾಟೀಲ್.—ನಮ್ಮ ಮಂಗ ಹೊರಗಡೆ ಹೋದರೆ ನಿಯಮದ ಪ್ರಕಾರ ಕಾಯಿಂದೆ ಪ್ರಕಾರ ಭಾಗ ಸಿಕ್ಕೇ ಸಿಗುತ್ತದೆ ಆದ್ದರಿಂದ ಅವರಿಗೆ ಇನ್‌ಕಂ ಇದ್ದೇ ಇರುತ್ತದೆ. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಸಿ.ಒ.ಡಿ. ಗೆ ಹಾಕಬೇಕೆಂದು ಹೇಳಿದ್ದಾರೆ. ಅದನ್ನು ಕೇಳಿ ನನಗೆ ಆಶ್ಚರ್ಯವಾಗುತ್ತದೆ. ಯಾವುದೇ ಒಂದು ನಿರ್ಧಿಷ್ಟವಾದ ಪ್ರಕರಣ ಇದ್ದರೆ ಅದನ್ನು ಬರೆದು ಕೊಡಿ ಸಿ.ಒ.ಡಿ. ಆಗಲಿ ಪಿ.ಎ.ಸಿ ಕಮಿಟಿಗಾಗಲಿ ಅಥವಾ ಇನ್ಯಾವುದೇ ಕಮಿಟಿಗಾಗಲಿ ಹಾಕೋಣ ತಾವು ಬರೆದುಕೊಡಿ ನಾನು ಅದನ್ನು ಎನ್‌ಕ್ವಾಯರಿ ಮಾಡಿಸಲಿಕ್ಕೆ ಸಿದ್ಧನಿದ್ದೇನೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ದಾವಣಗೆರೆಯ ಪ್ರಕರಣ ಹೇಳಿದ್ದೇನೆ, ಅದು ಒಂದನ್ನು ಮಾಡಿ ಬೇರೆ ಯಾವುದೂ ಬೇಡ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ನನ್ನ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ಎನ್‌ಕ್ವಾಯರಿ ಮಾಡಿಸಲಿಕ್ಕೆ ಸಿದ್ಧನಿದ್ದೇನೆ. ದಯಮಾಡಿ ಈ ಬೇಡಿಕೆಯನ್ನು ಓಟಿಗೆ ಹಾಕಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ಸಿ. ಮುನಿಸ್ವಾಮಯ್ಯ.—ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ರಾಜ್ಯದಲ್ಲಿರುವ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಹಾಸ್ಟಲ್‌ಗಳಿಗೆ ಭೇಟಿ ಕೊಟ್ಟು ಆಗಿಂದಾಗ್ಗೆ ವರದಿಯನ್ನು ಕೊಡುತ್ತಿದ್ದಾರೆಂದು ಹೇಳಿದರು. ಎಷ್ಟು ಹಾಸ್ಟಲ್‌ಗಳಿಗೆ ಅಧಿಕಾರಿಗಳು ಭೇಟಿ ಕೊಟ್ಟು ವರದಿಯನ್ನು ಕೊಟ್ಟಿದ್ದಾರೆ ? ಆ ವರದಿಯ ಆಧಾರದ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ನನ್ನ ಕ್ಷೇತ್ರವಾದ ದೇವನಹಳ್ಳಿಯ ವಿಜಯಪುರದಲ್ಲಿ ಒಂದು ಷೆಡ್ಯೂಲ್ಡ್ ಕ್ಯಾಸ್ಟ್ ಹಾಸ್ಟಲ್ ಇದೆ ಅದು ಸಮರ್ಪಕವಾಗಿ ನಡೆಯುತ್ತಿಲ್ಲ. ಇದನ್ನು ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಆ ಹಾಸ್ಟಲ್ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದೀರಾ ? ಅದರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವಿ. ಎಲ್. ಪಾಟೀಲ್.—ಸಾರ್ವಜನಿಕರಿಂದ ಹಾಸ್ಟಲ್‌ಗಳ ಬಗ್ಗೆ ದೂರುಗಳು ಬರುತ್ತವೆ. ಆ ತಕ್ಷಣ ಡಿಪಾರ್ಟ್‌ಮೆಂಟ್‌ನ ಅಧಿಕಾರಿಗಳನ್ನು ಕಳುಹಿಸಿ ಅದರ ಬಗ್ಗೆ ಎನ್‌ಕ್ವಾಯರಿ ಮಾಡಿಸಿ ವರದಿ ತರಿಸಿಕೊಳ್ಳುತ್ತೇವೆ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಆ ಹಾಸ್ಟಲ್ ಬಗ್ಗೆ ಏನಾದರೂ ದೂರು ಇದ್ದರೆ ಬರೆದು ಕೊಡಲಿ ಅದರ ಬಗ್ಗೆ ಎನ್‌ಕ್ವಾಯರಿ ಮಾಡಿಸಿ ಅವರಿಗೆ ತಿಳಿಸುತ್ತೇನೆ.

ಶ್ರೀಮತಿ ಮುಕ್ತರುನ್ನೀಸಾ ಬೇಗಂ.—ಮಾನ್ಯ ಅಧ್ಯಕ್ಷರೆ, With due respect I would like to submit to the Hon'Minister that, they are going to open 15 hostels this year, ಸಂತೋಷ ಮಾಡಲಿ ಆದರೆ ಹಾಸ್ಟಲ್‌ಗಳಿಗಾಗಿ ಸಾಮಾನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಏನು ಸಾಮಾನು ತೆಗೆದುಕೊಂಡಿರುವುದು ? ಅನಂತರ I learn that so many people complain about morning Uppittu and afternoon Wheat-hittu. ಮಾರ್ನಿಂಗ್ ಉಪ್ಪಿಟ್ಟು ಗೋಧಿದು ಹಿಟ್ಟು ಅದರ ಜೊತೆಗೆ ಸೈಡ್ ಡಿಸ್ ಇದ್ದರೆ ಚೆನ್ನಾಗಿರುತ್ತದೆ ಎಂದು ಹೇಳುತ್ತೇನೆ. ಈ ಪುಸ್ತಕದಲ್ಲಿ ಕರ್ನಾಟಕದಲ್ಲಿ ಎರಡು ಬಾಲಭವನ ಇದೆ ಎಂಬುದನ್ನು ತಾವೇ ಇದರಲ್ಲಿ ಮೆನ್‌ಷನ್ ಮಾಡಿದ್ದೀರಿ. ಅವುಗಳನ್ನು ಇಂಪ್ಲಿಮೆಂಟ್ ಮಾಡಬೇಕು. ತಾವು ಕೋಪ ಮಾಡಿಕೊಳ್ಳಬಾರದು. ಗುಲ್ಬರ್ಗದಲ್ಲಿ ಇದೆಯೆಂದು ಹೇಳುತ್ತೀರಿ. ಶಿವಮೊಗ್ಗ ಡಿವಿಜನ್‌ನಿಂದ ತಕ್ಷಣ ಗುಲ್ಬರ್ಗಕ್ಕೆ ಹೋಗುತ್ತಾರೆ. ತಮ್ಮ ಹತ್ತಿರ ಕಳಕಳಿಯಿಂದ ಕೇಳಿಕೊಂಡಿದ್ದೇನೆ ತಾವು ಗುಲ್ಬರ್ಗದಲ್ಲಿ ಇದೆಯೆಂದು ಹೇಳುತ್ತಿದ್ದೀರಿ ಗುಲ್ಬರ್ಗದಲ್ಲಿ ಇಲ್ಲ. ಬಾಲವಾಡಿ ಮತ್ತು ಬಾಲಭವನ ಅಂತಾ ಇದೆ. ನಮಗೆ ಏನು ಗೊತ್ತು, ನಾವು ಹೊಸಬರು ಅದಕ್ಕೋಸ್ಕರ ನಾನು ಬಾಲವಾಡಿದ್ದು ಕೇಳಲಿಲ್ಲ. ಬಾಲಭವನಗಳು ರಾಜ್ಯದ ಎಲ್ಲಾ ಡಿವಿಜನ್‌ಗಳಲ್ಲೂ ಇರಬೇಕೆಂದು ಕೇಳಿಕೊಂಡಿದ್ದೇನೆ. ನನ್ನ ಮತ್ತೊಂದು ಪ್ರಶ್ನೆಗೆ ಮಂತ್ರಿಗಳು ಉತ್ತರ ಹೇಳಲಿಲ್ಲ. ಷೆಡ್ಯೂಲ್ಡ್ ಟ್ರೈಬ್ಸ್ ಡೈರೆಕ್ಟರೇಟ್ ಓಪನ್ ಮಾಡಬೇಕೆಂದು ಕೇಳಿದ್ದೇನೆ ಅದಕ್ಕೆ ಮಂತ್ರಿಗಳು ಉತ್ತರ ಹೇಳಲಿಲ್ಲ. ಟಿ. ನರಸೀಪುರ ಮತ್ತು ಹೆಗ್ಗಡದೇವನ ಕೋಟೆಯಲ್ಲಿ ಎಸ್.ಟಿ. ಪೀಪಲ್ ಜಾಸ್ತಿ ಇದ್ದಾರೆ ಅವರಿಗೆ ಸಹಾಯ ಮಾಡಬೇಕೆಂದು ನಾನು ಸಲಹೆ ಕೊಟ್ಟಿದ್ದೇನೆ. ನಮ್ಮೆಲ್ಲರ ಒಪ್ಪಿಗೆ ತೆಗೆದುಕೊಂಡು ಡಿಮ್ಯಾಂಡ್ ಪಾಸ್ ಮಾಡಿಕೊಳ್ಳುತ್ತೀರಿ, ತಾವು ಮಂತ್ರಿಗಳಾಗಿ ಇದ್ದೀರಿ ತಮಗೆ ಅನುಭವವಿದೆ ಅದಕ್ಕೋಸ್ಕರ ತಮಗೆ ಕೇಳಿದ್ದೇನೆ. ನಮಗೆ ಬಹಳ ಬೇಜಾರು ಆಯಿತು, ರಿಸಿಪ್ಷನ್ ಸೆಂಟರ್ಸ್ ಅಂತ ಇದೆ ಅಲ್ಲಿ ಏನು ಮಾಡುತ್ತಿದ್ದಾರೆಂದು ಕೇಳುತ್ತಿದ್ದೇನೆ ? ಏಕೆಂದರೆ ತಾವು ಇನ್ಸ್‌ಪೆಕ್ಷನ್

ಮಾಡಿದ್ದೇವೆಂದು ಹೇಳಿದಿರಿ. ನಾನು ಒಂದು ಸಲ ಕೂಡ ಮೈಸೂರು ಜಿಲ್ಲೆಯಲ್ಲಿ ತಮ್ಮ ಟೂರ್ ನೋಡಲೇ ಇಲ್ಲ. ತಮ್ಮ ಟೂರ್ ಲೆಟರ್ ಸಿಕ್ಕಲೇ ಇಲ್ಲ. ತಾವು ಯಾವುದೇ ಹಾಸ್ಟಲ್‌ಗೆ ವಿಸಿಟ್ ಕೊಟ್ಟಿಲ್ಲ. ತಾವು ಎಷ್ಟು ಹಾಸ್ಟಲ್‌ಗೆ ವಿಸಿಟ್ ಮಾಡಿದ್ದೀರಿ ? ತಾವು ಎಷ್ಟು ಹಾಸ್ಟಲ್‌ಗೆ ವಿಸಿಟ್ ಅಂಡ್ ಇನ್ಸ್‌ಪೆಕ್ಷನ್ ಮಾಡಿದ್ದೀರಿ ? Visit is different and inspection is different. ಇದರ ಬಗ್ಗೆ ತಾವು ಉತ್ತರ ಕೊಡಬೇಕು.

ಅಧ್ಯಕ್ಷರು.—ತಾವು ಹೀಗೆ ಮಾಡಿದರೆ ಇನ್ನೊಮ್ಮೆ ತಮಗೆ ಅವಕಾಶ ಕೊಡುವುದಿಲ್ಲ.

ಶ್ರೀ ವಿ. ಎಲ್. ಪಾಟೀಲ್.—ಮಾನ್ಯ ಸದಸ್ಯಣೀಯವರು ಕೇಳಿದ್ದು ಬಾಲವಾಡಿ ಮತ್ತು ಅಂಗನವಾಡಿಯಲ್ಲಿರುವ ಮಕ್ಕಳೆಲ್ಲರಿಗೂ ನೀವು ಹೇಳಿದಷ್ಟು ಆಹಾರ ಸಿಗುವುದಿಲ್ಲವೆಂದು ಹೇಳಿದ್ದಾರೆ. ನಾನು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಅವರಿಗೆ ಕನ್ನಡ ಚೆನ್ನಾಗಿ ಬರುವುದಿಲ್ಲ. ನಾನು ಭಾಷಣ ಮಾಡುವಾಗ ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಈ ವರ್ಷ ಬಜೆಟ್‌ನಲ್ಲಿ ೧೧ ಕೋಟಿ ೩೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ. ೨೫ ಪೈಸೆ ಇದ್ದದನ್ನು ೫೦ ಪೈಸೆಗೆ ಏರಿಸಿದ್ದಾರೆ. ಅದರ ಜೊತೆಗೆ ಕೇಂದ್ರಸರ್ಕಾರದಿಂದ ಸಬ್ಸಿಡಿ ರೂಪದಲ್ಲಿ ಗೋಧಿ ಸಿಗುತ್ತಾ ಇದೆ. ಪೌಷ್ಟಿಕ ಆಹಾರ ಮಕ್ಕಳಿಗೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಸಿಗಬೇಕೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಇಟ್ಟಂತಹ ಹಣವನ್ನು ಹೇಳಿದ್ದೇನೆ. ಇದು ಆದನಂತರ ಸಬ್‌ಸ್ಟ್ಯಾನ್ಸಿಯಲ್ ಫಂಡ್ ಸಿಗುತ್ತದೆಂದು ಹೇಳುತ್ತೇನೆ.

ಶ್ರೀ ಬಿ. ಜಿ. ಜಮಖಂಡಿ.—ಮಾನ್ಯ ಅಧ್ಯಕ್ಷರೆ, ಈಗಾಗಲೇ ಹರಿಜನ-ಗಿರಿಜನ ವಿದ್ಯಾರ್ಥಿಗಳ ಸಲುವಾಗಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಕೋಚಿಂಗ್ ಸೆಂಟರ್‌ಗಳನ್ನು ರಾಜ್ಯದ ಹಲವಾರು ಕಡೆಗಳಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದಾರೆ. ಆ ಸೆಂಟರ್‌ಗಳಲ್ಲಿ ಎಷ್ಟು ಜನ ಐ.ಎ.ಎಸ್. ಮತ್ತು ಐ.ಪಿ.ಎಸ್. ತರಬೇತಿಯನ್ನು ಪಡೆದಿದ್ದಾರೆ ? ನನಗೆ ಗೊತ್ತಿರುವ ಹಾಗೆ ಜಮುನಗರದಲ್ಲಿರುವ ತರಬೇತಿ ಕೇಂದ್ರದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಟ್ರೈನಿಂಗ್‌ಗೆ ಪ್ರಾವಿಜನ್ ಬರುವುದಿಲ್ಲವೆಂದು ಹೇಳುತ್ತಿದ್ದಾರೆ ಇದರ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ?

ಶ್ರೀ ವಿ.ಎಲ್. ಪಾಟೀಲ್.—ಆಯ್ಕೆಯಾದ ಸಂಸ್ಥೆಗಳು ಏನಿವೆ, ಅಲ್ಲಿ ಅವರದು ಎಷ್ಟು ಕೋಟಾ ಇದೆ ಅಷ್ಟನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಉಡುಪಿ ಬಾಲಭವನದಡಿಯಲ್ಲಿರುವ ಮಕ್ಕಳಿಗೆ ಕೊಡಮಾಡಿದಂಥ ವಿಹಾರ ದೋಣಿಯ ಅವಸ್ಥೆ ಏನಾಗಿದೆ ? ಅದು ಕಾರ್ಯ ನಿರ್ವಹಣೆ ಮಾಡುತ್ತಿದೆಯೆ ? ಇಲ್ಲದಿದ್ದರೆ ಅದನ್ನು ರಿಪೇರಿ ಮಾಡಿಸುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಆ ದೋಣಿ ಚೆನ್ನಾಗಿ ನಡೆಯುತ್ತಿಲ್ಲ. ಅದನ್ನು ರಿಪೇರಿ ಮಾಡಿಸುತ್ತೇವೆ.

ಶ್ರೀ ಯು. ಭೂಪತಿ.—ಬಳ್ಳಾರಿ ಜಿಲ್ಲೆಯಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿಗೆ ಸಂಬಂಧಪಟ್ಟ ಹಾಗೆ ದಾಸರು ಎಂಬ ಕಮ್ಯುನಿಟಿ ಇದೆ. ಅದೇ ರೀತಿ ಬೇರೆ ಕಡೆಯೂ ಇದೆ ಎಂದು ಭಾವಿಸುತ್ತೇನೆ. ಆ ಕಮ್ಯೂನಿಟಿಯವರು ತಮ್ಮ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಸೇರಿಸುವಾಗ ಬರೀ ದಾಸರು ಎಂದು ಬರೆಸುತ್ತಾರೆ. ಅವರಿಗೆ ನೌಕರಿಗೆ ಸೇರಲು ಷೆಡ್ಯೂಲ್ಡ್ ಕ್ಯಾಸ್ಟ್ ಸರ್ಟಿಫಿಕೇಟ್ ಬೇಕೆಂದರೆ ತಹಶೀಲ್ದಾರರು ಕೊಡುತ್ತಿಲ್ಲ. ಚನ್ನ ದಾಸರು, ದೊಂಬಿ ದಾಸರು, ಮಾಲೆ ದಾಸರು ಎಂದು ಇದ್ದರೆ ಮಾತ್ರ ಕೊಡುತ್ತೇವೆ ಇಲ್ಲದಿದ್ದರೆ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳುತ್ತಾರೆ. ಇದಕ್ಕೆ ಪರಿಹಾರ ಕ್ರಮ ಏನು ? ಸಂಡೂರು ತಾಲ್ಲೂಕಿನಲ್ಲಿ ಪಿ.ಜಿ. ಸೆಂಟರ್ ಇದೆ ಜೂನಿಯರ್ ಕಾಲೇಜ್ ಇದೆ, ಐ.ಟಿ.ಐ. ಸೆಂಟರ್ ಇದೆ, ಅಲ್ಲಿ ಒಂದು ಪೋಸ್ಟ್ ಮೆಟ್ರಿಕ್ ಹಾಸ್ಟೆಲನ್ನು ಕೊಡಬೇಕೆಂದು ಕಳೆದ ವರ್ಷವೇ ಕೇಳಿದ್ದೆ. ಮುಂದಿನ ವರ್ಷ ಕೊಡುತ್ತೇವೆಂದು ಹೇಳಿದ್ದರು. ಅದನ್ನು ಕೊಡುವುದಕ್ಕೆ ಪ್ರಯತ್ನಿಸುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಮುಖ್ಯವಾಗಿ ಕ್ಯಾಸ್ಟ್ ಸರ್ಟಿಫಿಕೇಟ್ ಬಗ್ಗೆ ಕೇಳಿದ್ದಾರೆ. ಕ್ಯಾಸ್ಟ್ ಸರ್ಟಿಫಿಕೇಟ್ ಹಗರಣಗಳು ಆಗಿವೆ. ಆ ಬಗ್ಗೆ ಮುಖ್ಯ ಮಂತ್ರಿಗಳು ಮತ್ತು ಸರ್ಕಾರದ ಮೇಲೂ ಆರೋಪ ಮಾಡಿದ್ದಾರೆ. ಅದಕ್ಕೋಸ್ಕರ ಅದನ್ನೆಲ್ಲ ಸರಿಪಡಿಸುವ ಸಲುವಾಗಿ ಅಸೆಂಬ್ಲಿಯಿಂದ ಒಂದು

ಕಮಿಟಿಯನ್ನು ನೇಮಿಸಿದ್ದೇವೆ. ಆ ವಿಚಾರಗಳು ಕಮಿಟಿ ಮುಂದೆ ಬಂದಾಗ ಯಾವ ರೀತಿ ಸರಿಪಡಿಸಬೇಕೋ ಆ ರೀತಿ ಮಾಡುತ್ತಾರೆ.

ಶ್ರೀ ಯು. ಭೂಪತಿ.—ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಇದೆ. ಆದರೆ ಇವತ್ತಿಗೂ ಅವರು ಅಸ್ಪೃಶ್ಯರು. ಅದು ಮೊದಲಿನಿಂದ ನಡೆಯುತ್ತಿದೆ. ಅವರಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಸರ್ಟಿಫಿಕೇಟ್ ಕೊಡುವುದಕ್ಕೆ ಚನ್ನ ದಾಸರು, ದೊಂಬಿ ದಾಸರು ಎಂದು ಇದ್ದರೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ಟಿ.ಸಿ.ಯಲ್ಲಿ ಬರೀ ದಾಸರು ಎಂದು ಎಂಟ್ರಿ ಮಾಡಿರುತ್ತಾರೆ. ಇದರಿಂದ ಅವರಿಗೆ ನೌಕರಿಗೆ ಸೇರಲು ತುಂಬಾ ತೊಂದರೆಯಾಗಿದೆ. ದಯವಿಟ್ಟು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ವಿ. ಎಲ್. ಪಾಟೀಲ್.—ಆ ಬಗ್ಗೆ ಕೆಲವು ಆದೇಶಗಳು ಇವೆ. ನಾವು ಸಂವಿಧಾನದ ಪ್ರಕಾರ ನೋಡಬೇಕಾಗುತ್ತದೆ. ಅವರಿಗೆ ನಾವು ವಿದ್ಯಾ ಸೌಲಭ್ಯ ಕೊಡುತ್ತೇವೆ. ಅದಕ್ಕೇನು ಕ್ಯಾಸ್ಟ್ ಸರ್ಟಿಫಿಕೇಟ್ ಪ್ರಶ್ನೆ ಬರುವುದಿಲ್ಲ. ಅದಕ್ಕೋಸ್ಕರ ಒಂದು ಕಮಿಟಿ ಮಾಡಿದ್ದೇವೆ. ನಾಯಕ, ಬೇಡ ಎಂದು ಇದ್ದರೆ ಹೇಗೆ ಆಗುವುದಿಲ್ಲವೋ ಹಾಗೆ ಅದು ಆದರೆ ಆದೇಶ ಕೊಡುವುದು ಕಷ್ಟವಾಗುತ್ತದೆ. ಈಗ ನಾವೇನು ಒಂದು ಕಮಿಟಿ ಮಾಡಿದ್ದೇವೆ ಅವರು ಸರ್ಕಾರಕ್ಕೆ ವರದಿಯನ್ನು ಕೊಡಬೇಕು, ಅಸೆಂಬ್ಲಿ ಆದನಂತರ ನಾವು ಆ ಕಮಿಟಿಯವರನ್ನು ಕರೆದು ಕೇಳುತ್ತೇವೆ.

ಶ್ರೀ ಯು. ಭೂಪತಿ.—ಇಷ್ಟು ಬೇರೆ ಹೇಳುತ್ತಿದ್ದಾರೆ. ನಾನು ಕೇಳುತ್ತಿರುವುದು ಆ ಒಂದು ಕಮ್ಯುನಿಟಿ ಬಗ್ಗೆ ಮಾತ್ರ. ದಾಸರು ಎಂಬ ಕಮ್ಯುನಿಟಿಗೆ ಷೆಡ್ಯೂಲ್ಡ್ ಕ್ಯಾಸ್ಟ್ ಎಂದು ಇದೆ. ಆದರೆ ಗೆಜೆಟ್ ನೋಟಿಫಿಕೇಷನ್ ಕ್ಲಾಸಿಫಿಕೇಷನ್ ಏನಿದೆ ಅದರ ಪ್ರಕಾರ ಸರ್ಟಿಫಿಕೇಟ್ ಕೊಡುವುದಕ್ಕೆ ಬರುವುದಿಲ್ಲವೆಂದು ತಹಶೀಲ್ದಾರರು ಹೇಳುತ್ತಿದ್ದಾರೆ. ಅದರ ಬಗ್ಗೆ ಆದೇಶ ಕಳುಹಿಸಿ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ವಿ. ಎಲ್. ಪಾಟೀಲ್.—ಆ ರೀತಿ ಇದ್ದರೆ ಅದನ್ನು ಪರಿಶೀಲಿಸಿ ಆದೇಶ ಕಳುಹಿಸಿಕೊಡುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ.—ನಮ್ಮ ಕೊಡಗಿನಲ್ಲಿ ಕಾಡು ಕುರುಬರು, ಕುರುಬರು, ಚನ್ನ ಕುರುಬರು ಎಂದು ಷೆಡ್ಯೂಲ್ಡ್ ಟ್ರೈಬ್ಸ್‌ನವರು ಇದ್ದಾರೆ! ಅವರು ಹೆಚ್ಚಿಗೆ ಅರಣ್ಯದ ಮಧ್ಯದಲ್ಲಿ ವಾಸಿಸತಕ್ಕವರು. ಇವರ ಬಗ್ಗೆ ಸರ್ಕಾರ ಗಮನ ಹರಿಸಿಲ್ಲ. ಅವರಲ್ಲಿ ತಾರತಮ್ಯ ಮಾಡಿದ್ದಾರೆ, ಅದು ಅವರ ಗಮನಕ್ಕೆ ಬಂದಿಲ್ಲ. ರೆಸಿಡೆನ್ಷಿಯಲ್ ಶಾಲೆಗಳಿಗೆ ಅಲ್ಲಿ ಮಕ್ಕಳು ಬರುತ್ತಿಲ್ಲ. ಇದರ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲಿ ಒಂದು ಕಾಲೋನಿಯಲ್ಲಿ ೩೪ ಮನೆಗಳನ್ನು ಕಟ್ಟಿದ್ದಾರೆ. ಅವುಗಳನ್ನು ಕಟ್ಟಿ ೩ ವರ್ಷ ಕೂಡ ಆಗಿಲ್ಲ. ಆಗಲೇ ಆ ಮನೆಗಳೆಲ್ಲ ಬಿದ್ದು ಹೋಗಿವೆ, ಇದರ ಬಗ್ಗೆ ತನಿಖೆ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಅರಣ್ಯ ಇಲಾಖೆಯವರು ಅವರಿಗೆ ರಸ್ತೆ ಮಧ್ಯೆ ಚೈನ್ ಗೇಟ್ ಹಾಕಿದ್ದಾರೆ. ಅದನ್ನು ಹಾಕಿರುವುದರಿಂದ ಅವರೇನಾದರೂ ವೆಹಿಕಲ್ ತೆಗೆದುಕೊಂಡು ಹೋಗಬೇಕಾದರೆ ೩೦ ರೂಪಾಯಿನಂತೆ ಸರ್ಕಾರಕ್ಕೆ ಕೊಡಬೇಕೆಂದು ಮಾಡಿದ್ದಾರೆ. ಇದನ್ನು ತೆಗೆಯಬೇಕು.

ಶ್ರೀ ವಿ. ಎಲ್. ಪಾಟೀಲ್.—ಸದಸ್ಯರು ಸೂಚಿಸಿದ ಹಾಗೆ ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಯಾವ ತರಹದ ಸೌಲಭ್ಯವನ್ನು ಕೊಡಬೇಕೆಂದು ಹೇಳುತ್ತಿದ್ದಾರೊ ಅದನ್ನು ಕೊಡುತ್ತೇವೆ. ಮನೆ ಬಿದ್ದಿರುವ ಬಗ್ಗೆ ಯಾವ ಊರಿನಲ್ಲಿ ಎಂಬ ವಿವರಗಳನ್ನು ಬರೆದು ಕೊಟ್ಟರೆ ಅದನ್ನು ತನಿಖೆ ಮಾಡಿಸುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಎಲ್ಲಾ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ರಾಜವರ್ಧನ್‌ರವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಐಡೆಂಟಿಫಿಕೇಷನ್ ಕೊಟ್ಟು ತಹಶೀಲ್ದಾರರಿಂದ ಸೈನ್ ಮಾಡಿಸಿಕೊಳ್ಳತಕ್ಕ ವ್ಯವಸ್ಥೆಯನ್ನು ಜಾರಿಗೆ ತಂದಿದ್ದರು. ಈಗ ಆ ವ್ಯವಸ್ಥೆ ಇಲ್ಲದಿರುವುದರಿಂದ ಕ್ಯಾಸ್ಟ್ ಸರ್ಟಿಫಿಕೇಟ್ ತೊಗೆದುಕೊಳ್ಳಲು ತೊಂದರೆಯಾಗುತ್ತಿದೆ. ಮತ್ತೆ ಅದೇ ರೀತಿ ಐಡೆಂಟಿಫಿಕೇಷನ್ ಕಾರ್ಡ್ ಮೂಲಕ ಕ್ಯಾಸ್ಟ್ ಸರ್ಟಿಫಿಕೇಟ್ ಕೊಡುವಂಥ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ರಾಜವರ್ಧನ್‌ರವರ ಕಾಲದಲ್ಲಿ ಟಿಕೆಟ್ ಸವಲತ್ತುಗಳನ್ನು ಹಂಚುತ್ತಿದ್ದರು. ಈಗಲೂ ಅದೇರೀತಿ ಮಾಡಬೇಕೆಂದು ಹೇಳುತ್ತಿದ್ದೇನೆ.

ಶ್ರೀ ವಿ. ಎಲ್. ಪಾಟೀಲ್.—ಕ್ಯಾಸ್ಟ್ ಸರ್ಟಿಫಿಕೇಟ್ ಕೊಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಎಲ್ಲಾ ಕಡೆ ಸುಲಭವಾಗಿ ಕ್ಯಾಸ್ಟ್ ಸರ್ಟಿಫಿಕೇಟ್ ಪಡೆಯುವಂತೆ ಮಾಡುತ್ತೇವೆ. ರಾಜ್ಯದಲ್ಲಿ ಎಲ್ಲಾ ಕಡೆ ಸಮವಸ್ತ್ರ ಹಂಚತಕ್ಕ ವ್ಯವಸ್ಥೆಯನ್ನು ಜನತಾ ಸರ್ಕಾರ ಬಂದಮೇಲೆ ಜಾರಿಗೆ ತಂದಿದ್ದೇವೆ. ಅದರ ಪ್ರಕಾರ ಹಂಚಬೇಕಾಗುತ್ತದೆ. ಆದರೆ ಟೆರಿಕಾಟ್ ಬಟ್ಟೆಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಂತ್ರಿಗಳು ಈಗಾಗಲೇ ಉತ್ತರಿಸಿದ್ದಾರೆ. ಆದರೆ ಅವರ ಉತ್ತರ ಸಮರ್ಪಕವಾಗಿ ಇರಲಿಲ್ಲ. ನೂರು ಹೊಸ ಹಾಸ್ಟೆಲುಗಳನ್ನು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಮಾಡಬೇಕೆಂದು ಮಾಡಿದ್ದೀರಿ. ಈ ಬಗ್ಗೆ ಮಲ್ಲಪ್ಪನವರು ಪ್ರಶ್ನೆ ಕೇಳಿದ್ದರು. ಈಗ ಷೆಡ್ಯೂಲ್ಡ್ ಕ್ಯಾಸ್ಟ್, ಷೆಡ್ಯೂಲ್ಡ್ ಟ್ರೈಬ್ಸ್ ಮತ್ತು ಬ್ಯಾಕ್‌ವರ್ಡ್ ಕ್ಲಾಸ್ ಹಾಸ್ಟೆಲುಗಳು ೨೫ ಮಾತ್ರ ಇವೆ, ಅದನ್ನು ೫೦ ಮಾಡಬೇಕೆಂದು ಕೇಳಿದ್ದರು. ಅದಕ್ಕೆ ಉತ್ತರಿಸಿಲ್ಲ. ಇಗತಕ್ಕ ಹಾಸ್ಟೆಲುಗಳಿಗೆ ಕಟ್ಟಡ ಇಲ್ಲ. ಹೀಗಿರುವಾಗ ಹೊಸದಾಗಿ ನೂರು ಹಾಸ್ಟೆಲುಗಳನ್ನು ಪ್ರಾರಂಭಿಸುವುದು ಎಂದರೆ ಅವುಗಳ ಕಟ್ಟಡಕ್ಕೆ ಎಷ್ಟು ಹಣ ಒದಗಿಸುತ್ತೀರಿ ? ಅದರ ಬಗ್ಗೆ ಏನು ಕಾರ್ಯಕ್ರಮ ಇದೆ ? ಮಾನ್ಯ ಕಾನಡೆಯವರು ಮಾತನಾಡುತ್ತಾ ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ನೇರವಾಗಿ ೧೫೦ ರೂಪಾಯಿ ಚೆಕ್ ಅನ್ನು ಕೊಡಬೇಕು, ಮಧ್ಯವರ್ತಿ ಜನಗಳ ಕೈಗೆ ಹಣ ಹೋಗುವುದಕ್ಕೆ ಬಿಡಬಾರದು, ಬಿಟ್ಟರೆ ಅವರು ಖಾಸಗಿಯಾಗಿ ಹಾಸ್ಟೆಲುಗಳನ್ನು ಮಾಡಿಕೊಂಡು ಶೋಷಣೆ ಮಾಡತಕ್ಕದ್ದು ಇರುತ್ತದೆ. ಆದುದರಿಂದ ವಿದ್ಯಾರ್ಥಿಗಳು ಹಾಸ್ಟೆಲಿನಲ್ಲೇ ಇರಲಿ, ಎಲ್ಲೇ ಇರಲಿ ಅವರ ಹೆಸರಿನಲ್ಲಿ ೧೫೦ ರೂಪಾಯಿಗಳ ಚೆಕ್‌ನ್ನು ಕೊಟ್ಟರೆ ದುರುಪಯೋಗವಾಗುವುದು ನಿಲ್ಲುತ್ತದೆಂದು ಸಲಹೆ ಮಾಡಿದ್ದರು. ಅದಕ್ಕೆ ಸಹ ಉತ್ತರ ಬರಲಿಲ್ಲ. ತಾವು ಅಸ್ಪೃಶ್ಯತಾ ನಿವಾರಣೆಗೋಸ್ಕರ ಯಾವ ಹಣವನ್ನೂ ಒದಗಿಸಿಲ್ಲ. ನಾವು ಪರ್‌ಫಾರ್ಮೆನ್ಸ್ ಬಡ್ಜೆಟ್ಟನ್ನು ನೋಡಿದೆ. ಅದರಲ್ಲಿ ಏನೂ ಇಲ್ಲ. ಹಿಂದೆಲ್ಲ ರಿಮೂವಲ್ ಆಫ್ ಅನ್‌ಟಚಬಿಲಿಟಿಗೋಸ್ಕರ ೩-೪ ಲಕ್ಷ ರೂಪಾಯಿಗಳನ್ನು ಇಡುತ್ತಿದ್ದರು. ಆದರೆ ಈ ಸಾರಿ ಅದರ ಬಗ್ಗೆ ಯೋಚನೆಯನ್ನೇ ಮಾಡಿಲ್ಲ, ಹಣ ಒದಗಿಸಿಲ್ಲ ಸಿವಿಲ್ ರೈಟ್ ಎನ್‌ಫೋರ್ಸ್‌ಮೆಂಟ್ ಸೆಲ್ ಏನಿದೆ ಅದರಲ್ಲಿ ಹೆಚ್ಚಿನ ಅಪರಾಧಗಳನ್ನು ನೋಡಿದ್ದೇನೆ. ಈ ವರ್ಷದ ತಃಖ್ತೆಯನ್ನು ಹೋದಸಾರಿ ತಃಖ್ತೆಗೆ ಹೋಲಿಸಿದಾಗ ಹೆಚ್ಚಿನ ಅಪರಾಧಗಳು ಕಂಡುಬಂದಿವೆ,

ಅದನ್ನು ತಡೆಹಿಡಿಯುವುದಕ್ಕೆ ಅಥವಾ ಅಂಥ ಕೇಸನ್ನು ರಿಜಿಸ್ಟರ್ ಮಾಡಿದರೆ ಕನ್‌ವಿಕ್ಷನ್ ಆಗತಕ್ಕಂಥ ರೀತಿಯಲ್ಲಿ ತಮ್ಮ ಕೇಸನ್ನು ಬಿಲ್ಡ್ ಅಪ್ ಮಾಡಲಿಕ್ಕೆ ಏನೇನು ವ್ಯವಸ್ಥೆ ಮಾಡಿದ್ದೀರಿ ಎಂಬುದನ್ನು ಸ್ವಲ್ಪ ಸ್ಪಷ್ಟವಾಗಿ ಸವಿಸ್ತಾರವಾಗಿ ಹೇಳಬೇಕು ಮತ್ತು ಕೊನೆಯದು ಕಮಿಟಿಯ ಬಗ್ಗೆ ಹೇಳಿದ್ದೀರಿ. ನನಗಂತೂ ಕಮಿಟಿಯ ಬಗ್ಗೆ ಮಾಹಿತಿ ಬಂದಿಲ್ಲ. ಪೇಪರ್ ನೋಡಿದ್ದೇನೆ. ಅನೌನ್ಸ್ ಮಾಡಿದ್ದು ನೋಡಿದ್ದೇನೆ. ಗೆಜೆಟ್ ನೋಟಿಫಿಕೇಷನ್ ನೋಡಿಲ್ಲ. ನನ್ನ ಹೆಸರೂ ಕೂಡಾ ಇದೆ ಎಂದು ಗೊತ್ತಾಗಿದೆ. ಆದರೆ ಬಸವಲಿಂಗಪ್ಪನವರು ಹೇಳುವಂಥ ಒಂದು ಮಾತನ್ನು ತಾವು ತಿಳಿದುಕೊಳ್ಳಬೇಕು. ಸಮಾಜದಲ್ಲಿ ಬ್ಯಾಕ್‌ವರ್ಡ್ ಕ್ಲಾಸಸ್‌ಗೂ ಷೆಡ್ಯೂಲ್ಡ್ ಕ್ಯಾಸ್ಟ್‌ಗೂ ಘರ್ಷಣೆ ಆಗತಕ್ಕಂಥ ಸಂಭವ ಇದೆ. ಕೆಲವು ಜನರಲ್ಲಿ ಏನು ಅಭಿಪ್ರಾಯ ಬಂದಿದೆಯೆಂದರೆ ಕೆಲವು ಷೆಡ್ಯೂಲ್ಡ್ ಕ್ಯಾಸ್ಟ್ ಜನರಿಗೆ ಸಿಗತಕ್ಕಂಥ ಸವಲತ್ತುಗಳನ್ನು ಅವರಿಗೆ ಕೊಡಿಸಿಕೊಡಬಾರದೆಂಬ ಅಭಿಪ್ರಾಯವನ್ನು ಶಾಸಕರು ಹೊಂದಿದ್ದಾರೆ ಎಂಬ ವಾತಾವರಣ ಎಲ್ಲಾ ಕಡೆ ಕಂಡು ಬರುತ್ತಿದೆ. ಸಂವಿಧಾನದ ಪ್ರಕಾರ ಸವಲತ್ತುಗಳನ್ನು ಕೊಡುವುದಕ್ಕೆ ಬರುತ್ತಿದ್ದರೆ ಬರುತ್ತದೆಂದು ತಿಳಿದುಕೊಂಡು ಮಾಡಬೇಕಾಗಿತ್ತು ಆದರೆ ಸವಲತ್ತುಗಳನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಗೊತ್ತಿದ್ದರೂ ಕೂಡ ಸಿನಾನಿಮಸ್ ಆಗಿ ಅಡಾಪ್ಟ್ ಮಾಡಿಕೊಳ್ಳುತ್ತೇವೆಂದು ಹಠ ಹಿಡಿದರೆ ಆಗ ಈ ಸಮಾಜದಲ್ಲಿ ಒಂದು ಡಿವಿಯೇಷನ್ ಆಗಿ ಈ ಬ್ಯಾಕ್‌ವರ್ಡ್ ಕ್ಲಾಸಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಸಂಘರ್ಷಣೆ ಆಗತಕ್ಕಂಥ ಸಂಭವ ಇರುತ್ತದೆ. ಆದ್ದರಿಂದ ಪದೇ ಪದೇ ಇಂಥ ಸ್ಟೇಟ್‌ಮೆಂಟ್‌ನ್ನು ಕೊಡುವುದಕ್ಕೆ ಹೋಗಬೇಡಿ. ಏನಾದರೂ ಮಾಡಿ, ಕಾನ್‌ಸ್ಟಿಟ್ಯೂಷನ್‌ನಲ್ಲಿ ಅಮೆಂಡ್‌ಮೆಂಟ್ ಆದಮೇಲೆ ಕೇಂದ್ರ ಸರ್ಕಾರ ಅದನ್ನು ಒಪ್ಪಿಕೊಂಡಲ್ಲಿ ತಾವು ಅದನ್ನು ಜಾರಿಯಲ್ಲಿ ತನ್ನಿ. ಎಕ್ಸಿಕ್ಯೂಷನ್ ಆರ್ಡರ್‌ನಲ್ಲಿ ಮಾಡಿದರೆ ಎಲ್ಲರಿಗೂ ತಾಪತ್ರಯ ಆಗುತ್ತದೆ. ಆದುದರಿಂದ ಶಾಂತರೀತಿಯಿಂದ ಪುನರ್ ಪರಿಶೀಲನೆ ಮಾಡದೆ ಮುಂದುವರಿಯಬಾರದು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ತಮ್ಮ ಮುಖಾಂತರ ಅವರಿಗೆ ಹೇಳುತ್ತೇನೆ.

ಶ್ರೀ ವಿ.ಎಲ್. ಪಾಟೀಲ್.—ಮಾನ್ಯ ಅಧ್ಯಕ್ಷರೇ. ಶೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಈ ಕೆಲವು ಕಮ್ಯೂನಿಟಿಗಳು ಬರುವುದು ಯೋಗ್ಯ ಎಂದು ನನಗೆ ಅನ್ನಿಸಿದ್ದರಿಂದ ಈ ಪ್ರಶ್ನೆಯನ್ನು ಕ್ಯಾಬಿನೆಟ್ ಮೀಟಿಂಗ್‌ನಲ್ಲಿಯೂ ಇಟ್ಟಿದ್ದೇನೆ. ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕೆ ಕಮಿಟಿಯನ್ನು ಮಾಡಿದ್ದೇವೆ. ಈ ಕಮಿಟಿಯಲ್ಲಿ ಮಾನ್ಯ ಖರ್ಗೆಯವರೂ ಇದ್ದಾರೆ. ಅಲ್ಲಿ ಚರ್ಚೆ ಮಾಡಿ, ಕನ್‌ವಿನ್ಸ್ ಮಾಡಿ, ಯೋಗವಿಲ್ಲದಿದ್ದರೆ ಅದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ಆ ಅಧಿಕಾರ ಇದ್ದಾಗ ಅದನ್ನು ಮಾಡಿಬಿಟ್ಟು ಹೋಗಿ. ನನ್ನ ಕಾನ್‌ಸೆಪ್‌ನಲ್ಲಿ ಇದನ್ನು ನಾನು [illegible]ಳುತ್ತಿದ್ದೇನೆ. ಕಡೆಗೆ ಕಾನ್‌ಸ್ಟಿಟ್ಯೂಷನ್ ಪ್ರಕಾರ ಕೊಟ್ಟಂತಹ ನಿಯಮಗಳನ್ನು ಪಾಲಿಸಬೇಕಾಗುತ್ತದೆ.

SRI M. MALLIKHARJUN KHARGE.—You have got every right to recommend. But, before accepting, you have no right to give them concession. ಅದು ಅಕ್ಸೆಪ್ಟ್ ಆಗಿ ಬರುವವರೆಗೂ ಕಾನ್‌ಸೆಷನ್ಸ್ ಕೊಡತಕ್ಕಂಥ ಅಧಿಕಾರ ನಿಮಗೂ ಇಲ್ಲ, ಯಾರಿಗೂ ಇಲ್ಲ.

ಶ್ರೀ ವಿ.ಎಲ್ ಪಾಟೀಲ್.—ಮಾನ್ಯ ಸದಸ್ಯರು ಹೇಳುವಂಥದ್ದನ್ನು ನಾನು ಒಪ್ಪುತ್ತೇನೆ. ಆ ಅಧಿಕಾರ ನನಗೂ ಇಲ್ಲಾ. ಮಾನ್ಯ ಬಸವಲಿಂಗಪ್ಪನವರಿಗೂ ಇಲ್ಲಾ. ಬಸವಲಿಂಗಪ್ಪನವರು ಪತ್ರ ಬರೆದಿದ್ದರೆ ಅವರಿಗೂ ಇಲ್ಲ ಆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ; ಈ ಬೋರ್ಡಿಂಗ್ ಹಾಸ್ಟೆಲ್‌ನಲ್ಲಿ ಏಡೆಡ್ ಇರಲಿ, ಗೌರ್ನಮೆಂಟ್ ಇರಲಿ, ಅದನ್ನು ಎನ್‌ಹ್ಯಾನ್ಸ್ ಮಾಡಬೇಕು. ಎನ್‌ಹ್ಯಾನ್ಸ್ ಮಾಡಲಿಕ್ಕೆ ಸಂಸ್ಥೆಗಳವರು ಮುಂದೆ ಬಂದರೆ ಮಾಡುತ್ತಾರೆ. ಸರ್ಕಾರೀ ಹಾಸ್ಟೆಲ್‌ಗಳಲ್ಲಿ ಜಾಗಗಳು ಇದ್ದರೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಟ್ಟಡದ ಸಲುವಾಗಿ, ಕಟ್ಟಡವನ್ನು ಎಲ್ಲಾ ಕಡೆಗಳಲ್ಲಿ ಕಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಬಾಡಿಗೆಗೆ ಕಟ್ಟಡಗಳನ್ನು ಜನರು ಕೊಡುವುದಿಲ್ಲ. ಸರ್ಕಾರಿ ಹಾಸ್ಟೆಲ್‌ಗಳು ಕಡಿಮೆ ಇವೆಯೆಂದು ನನ್ನ ಭಾಷಣದಲ್ಲಿ ಹೇಳಿದ್ದೇನೆ. ಈ ವರ್ಷ ೪೦ ಹಾಸ್ಟೆಲ್‌ಗಳನ್ನು ಕಟ್ಟಲಿಕ್ಕೆ ಎನ್.ಆರ್ ಇ.ಪಿ. ಯೋಜನೆಯಲ್ಲಿ ನಿರ್ಣಯವನ್ನು ತೆಗೆದುಕೊಂಡಿದ್ದೇವೆ. ನಮ್ಮ ಸರ್ಕಾರ ಸಾಧ್ಯವಾದಷ್ಟು ಮಾಡುತ್ತಿದೆ. ಶಿಕ್ಷಣದ ಸಲುವಾಗಿ, ಬೋರ್ಡಿಂಗ್‌ನ ಸಲುವಾಗಿ, ಕಟ್ಟಡದ ಸಲುವಾಗಿ ಇವುಗಳ ಬಗ್ಗೆ ಸರ್ಕಾರ ಇನ್ನೂ ಹೆಚ್ಚು ಖರ್ಚು ಮಾಡಬೇಕೆಂದು ಅನಿಸುತ್ತದೆ. ಏಕೆಂದರೆ ಹಿಂದುಳಿದ ವರ್ಗದವರು ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್‌ನವರಿಗೆ ಒದಗಿಸುವುದು ೬೦-೭೦ ಪರ್‌ಸೆಂಟ್ ಇದೆ. ಅವರಿಗೆ ಒದಗಿಸುವಂಥ ಹಣ ಇವತ್ತಿನದಲ್ಲ. ಸ್ವಾತಂತ್ರ್ಯ ಸಿಕ್ಕಿದಂದಿನಿಂದ ಇವತ್ತಿನವರೆಗೂ ಕಡಿಮೆ ಬರುತ್ತದೆಂದು ಹೇಳುತ್ತೇನೆ. ಆದಕ್ಕಾಗಿ ಮುಂದೆಯಾದರೂ ಕೂಡ ಸರ್ಕಾರ ಹೆಚ್ಚು ಹೆಚ್ಚು ಹಣವನ್ನು ಯಾವುದೇ ಸರ್ಕಾರ ಇರಲಿ, ನಾನು ಇರಲಿ, ಇಲ್ಲದೇ ಇರಲಿ ಇದಕ್ಕಾಗಿ ಹೆಚ್ಚಿಗೆ ಮಂಜೂರು ಮಾಡಬೇಕಾಗುತ್ತದೆಂದು ಹೇಳುತ್ತೇನೆ

ಅಧ್ಯಕ್ಷರು.—ಈಗ ಉತ್ತರ ಮುಗಿಯಿತು. ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೇನೆಂದರೆ,

> "೩೧-೩-೧೯೮೭ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೬೧,೬೨. ೬೩ ೬೪, ಮತ್ತು ೬೫ ವಿಷಯಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗುಗಳನ್ನು ಮಂಜೂರು ಮಾಡಬೇಕು"

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯೋಜನೆ ಕ್ರಮಾಂಕ ೬೧—ಕಾರ್ಮಿಕ ಮತ್ತು ಉದ್ಯೋಗ

"ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಾರ್ಮಿಕ ಮತ್ತು ಉದ್ಯೋಗಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೨,೪೮,೯೮,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು"